ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 3 ಸಂಚಿಕೆ 26

ಜೂನ್ 28, 2009

ಕನ್ನಡ ವಾರಪತ್ರಿಕೆ

5/-








ಬಹಿರಂಗ ಬಂಡಾಯಗಳು ಗುಪ್ತ ಒಪ್ಪಂದಗಳು !!



ಪಶ್ಚಿಮ ಬಂಗಾಳ : ಸರ್ಕಾರ ಅಸ್ಥಿರಗೊಳಿಸಲು ಒಳಸಂಚು



ಸಾವಯವ ಕೃಷಿ ಸಾಧ್ಯಾಸಾಧ್ಯತೆಗಳು

ಒಂದು ಮಾರ್ಕ್ಸ್‌ವಾದಿ ಕಣ್ಣೋಟ

ಕರಾವಳಿಯಲ್ಲಿ ಬಿಜೆಪಿ ಗೆದ್ದಿದ್ದು ಹೇಗೆ ?

ಸಂಪುಟ ಪುನರ್ ರಚನೆ ಶಿವನ ಗೆಲುವು ವಿಷ್ಣುವಿನ ಸೋಲೇ ?!!



ನಾಗತಿಹಳ್ಳಿಯವರೇ 'ಕ್ರಾಂತಿ' ಎಂದರೆ ಲಂಪಟತನವೇ ?

ಹಾವೇರಿ ಗೋಲಿಬಾರ್‌ಗೆ ವರ್ಷ : ಮೊಕದ್ದಮೆ ವಾಪಸ್‌ಗೆ ಆಗ್ರಹ

ರಂಗಭೂಮಿಯ ಪಿತಾಮಹ ಹಬೀಬ್ ತನ್ವೀರ್ ನೇಪಥ್ಯಕ್ಕೆ...

"…. ಎಲ್ಲಾ ಅರ್ಥಪೂರ್ಣ ರಂಗ ಚಟುವಟಿಕೆಗಳು ಸದಾ ಜನಪರ ಅಥವಾ ಎಡಪಂಥೀಯವೇ ಆಗಿರುತ್ತದೆ. ರಂಗ ಚಟುವಟಿಕೆಗಳು ಮಾತ್ರ ಏಕೆ? ಕಲೆ ಮತ್ತು ಸಾಹಿತ್ಯದ ಎಲ್ಲಾ ಚಟುವಟಿಕೆಗಳು ಸಮಕಾಲೀನವಾಗಿ ಪ್ರಸ್ತುತವಾಗಬೇಕಾದರೆ ಪ್ರಭುತ್ವ ವಿರೋಧಿಯಾಗಿರುತ್ತವೆ…." ಹೀಗೆ ಸಾಂಸ್ಕೃತಿಕ ರಂಗದ ಬಗ್ಗೆ ಸ್ಪಷ್ಟ ಹಾಗೂ ಖಚಿತ ನಿಲುವು ಹೊಂದಿ ತನ್ನ ಜೀವನದುದ್ದಕ್ಕೂ ಅದಕ್ಕೆ ಬದ್ಧವಾಗಿ ದುಡಿದ ರಂಗಕರ್ಮಿ ಹಬೀಬ್ ತನ್ವೀರ್ ತನ್ನ 85ನೇ ವಯಸ್ಸಿನಲ್ಲಿ ಜೂನ್ 8,2009 ರಂದು ಪರದೆಯ ಹಿಂದೆ ಸರಿದರು.

ಮರುದಿನ "ಪ್ರಜಾವಾಣಿ"ಯಲ್ಲಿ ಅವರ ಕುರಿತು ಭೋಪಾಲ್‌ನಿಂದ ಬಂದ ವರದಿ "ನಾಟಕ ಕಲೆಯನ್ನು ಜನಪರವಾಗಿಸಿದ ಮತ್ತು ಆಳುವ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ತೋರಿಸಲು ರಂಗ ಮಾಧ್ಯಮವನ್ನು ಸಮರ್ಥ ಅಸ್ತ್ರವನ್ನಾಗಿ ರೂಪಿಸಿದ ಹಿರಿಯ ಜೀವ ಹಬೀಬ್ ತನ್ವೀರ್ ಇನ್ನೂ ನೆನಪು ಮಾತ್ರ" ಹಬೀಬ್ ತನ್ವೀರ್ ಭಾರತೀಯ ರಂಗಭೂಮಿಯಲ್ಲಿ ಎಷ್ಟು ಎತ್ತರದ ಸ್ಥಾನದಲ್ಲಿದ್ದರು ಎಂಬುದನ್ನು ಸಾರುತ್ತದೆ.

ಸ್ವಾತಂತ್ರ್ಯಪೂರ್ವ ಬೊಂಬಾಯಿ ಯಲ್ಲಿದ್ದಾಗ "ಪ್ರಗತಿಪರ ಬರಹಗಾರರ ಸಂಘ"ದ ಸಂಪರ್ಕಕ್ಕೆ ಬಂದ ತನ್ವೀರ್ ಆ ನಂತರ "ಭಾರತೀಯ ಜನಪರ ರಂಗಭೂಮಿ ಸಂಘ "indian peoples theatre association) ಸಾಮ್ರಾಜ್ಯಶಾಹಿಗಳ ವಿರುದ್ಧ ರಂಗಭೂಮಿಯನ್ನು ಸಮರ್ಥವಾಗಿ ಬಳಸಿ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸುವಲ್ಲಿ "ಇಪ್ಟಾ" ಆಗ ಪ್ರಮುಖ ಪಾತ್ರ ವಹಿಸಿತ್ತು. ದೇಶಾದ್ಯಂತ "ಇಪ್ಟಾ"ದ ಶಾಖೆಗಳು ಹುಟ್ಟಿಕೊಂಡವು.

ರಂಗಭೂಮಿಯಲ್ಲಿ ಇನ್ನೂ ಪರಿಣತಿ ಪಡೆಯಲು ಇಂಗ್ಲೆಂಡಿಗೆ ಹೋದಾಗ ಯುರೋಪ್‌ನ ಪ್ರಖ್ಯಾತ ನಾಟಕಕಾರ ಬಟ್ರೋಲ್ಡ್ ಬ್ರೆಕ್ಟ್‌ನ ನಾಟಕಗಳು ತನ್ವೀರ್‌ನ ಮೇಲೆ ತೀವ್ರವಾದ ಪ್ರಭಾವ ಬೀರಿದವು.

ಅನೇಕ ನಾಟಕಗಳನ್ನು ಬರೆದು ನಿರ್ದೇಶನ ಮಾಡಿ, ನಟಿಸಿ, ಹಾಡಿ, ಕುಣಿದ ಹಬೀಬ್‌ರ ಜನಪ್ರಿಯ ನಾಟಕ "ಆಗ್ರಾ ಬಜಾರ್" ಆ ನಂತರ "ಚೋರ ಚರಣದಾಸ್", "ಪೊಂಗಾ ಪಂಡಿತ" ಇತ್ಯಾದಿ "ಪೊಂಗಾ ಪಂಡಿತ್" ನಾಟಕ ಪ್ರದರ್ಶನದ ಸಂದರ್ಭದಲ್ಲಿ ಸಂಪ್ರದಾಯವಾದಿ ಹಿಂದು ಮತಾಂಧರಿಂದ ದಾಳಿಗಳು ನಡೆದವು. ಏಕೆಂದರೆ ಒಬ್ಬ ದಲಿತ ಮಹಿಳೆ ಬರೆದ ಆ ನಾಟಕವು ಮೇಲ್ಜಾತಿ ಹಿಂದುಗಳಿಂದ ದಲಿತರ ಮೇಲೆ ಆಗುತ್ತಿದ್ದ ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ದಾಳಿಗಳ ಕುರಿತಾಗಿತ್ತು. ಅದಕ್ಕೂ ಮಿಗಿಲಾಗಿ ಆ ನಾಟಕವನ್ನು ಒಬ್ಬ ಮುಸ್ಲಿಂ ನಿರ್ದೇಶನ ಮಾಡಿ ಆ ನಾಟಕದಲ್ಲಿ ಪಾತ್ರ ಮಾಡಿದ್ದು ಮತಾಂಧರ ಕಣ್ಣು ಕೆಂಪಾಗಿಸಿತ್ತು. ಆದರೆ ಅವಾವುದಕ್ಕೂ ಸೊಪ್ಪು ಹಾಕದ ಹಬೀಬ್ ತಮ್ಮ ನಾಟಕ ಪ್ರದರ್ಶನಗಳನ್ನು ಬಹಳ ದಿನಗಳವರೆಗೆ ನಡೆಸಿ "ಸೈ" ಎನಿಸಿಕೊಂಡರು.

ಮೊದಮೊದಲು ಬೊಂಬಾಯಿಯಲ್ಲಿ ಸಿನಿಮಾರಂಗದಲ್ಲಿ ದುಡಿಸಿದ್ದ ಹಬೀಬ್ ತನ್ವೀರ್ ತದನಂತರ ರಂಗಭೂಮಿಗೆ ತಮ್ಮ ಬದುಕನ್ನು ಮುಡಿಪಾಗಿಟ್ಟರು. ರಂಗನಟಿ ಮೋನಿಕಾ ಮಿಶ್ರಾರನ್ನು ಬಾಳಸಂಗಾತಿಯನ್ನಾಗಿ ಪಡೆದ ಹಬೀಬ್‌ತನ್ವೀರ್ ತಮ್ಮ ಮಗಳನ್ನು ರಂಗಭೂಮಿಯಲ್ಲಿ ತೊಡಗಿಸಿದರು.



ಕರ್ನಾಟಕದ ರಂಗಭೂಮಿ ಮುಖ್ಯವಾಗಿ "ಸಮುದಾಯ"ದ ಚಟುವಟಿಕೆಗಳ ಬಗ್ಗೆ ಆಸಕ್ತಿ ಮತ್ತು ಕುತೂಹಲ ಹೊಂದಿದ್ದ ಹಬೀಬ್ ತನ್ವೀರ್ ತಮ್ಮ ನಾಟಕಗಳ ಪ್ರದರ್ಶನವನ್ನು ಕರ್ನಾಟಕದ ಅನೇಕ ಕಡೆಗಳಲ್ಲಿ ನೀಡಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಘಟಕ ಹಾಗೂ ಬೆಂಗಳೂರಿನ ರಂಗತಂಡಗಳ ಆಶ್ರಯದಲ್ಲಿ ಜೂನ್ 9, 2009 ರ ಸಂಜೆ 6 ಗಂಟೆಗೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ "ಹಬೀಬ್ ತನ್ವೀರ್‌ಗೆ ನಮನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಗಿರೀಶ್ ಕಾರ್ನಾಡ್, ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀನಿವಾಸ. ಜಿ. ಕಪ್ಪಣ್ಣ ಹಾಲಿ ಅಧ್ಯಕ್ಷರಾದ ಡಾ.ಬಿ.ವಿ.ರಾಜಾರಾಮ್, ರಂಗಕರ್ಮಿ ವೆಂಕಟಸುಬ್ಬಯ್ಯ ನಾಟಕಕಾರ ಕ.ವೆಂ.ರಾಜಾಗೋಪಾಲ್ ರಾಷ್ಟ್ರೀಯ ನಾಟಕ ಶಾಲೆಯ ಸುರೇಶ್ ಅನಗಳ್ಳಿ, ನಾಟಕ ನಿರ್ಮಾಪಕ ನಾರಾಯಣ ರಾಯಚೂರು, ಸಮುದಾಯದ ರಾಜ್ಯ ಕಾರ್ಯದರ್ಶಿ ಸುರೇಂದ್ರರಾವ್ ಮಾತನಾಡಿ ಹಬೀಬ್ ತನ್ವೀರ್‌ಗೆ ಶ್ರದ್ಧಾಂಜಲಿ ಅರ್ಪಿಸಿದರು. ಸಮುದಾಯದ ಹೆಚ್.ವಿ.ವೇಣುಗೋಪಾಲ್ ಕಾರ್ಯಕ್ರಮ ನಡೆಸಿಕೊಟ್ಟರು.

ಮನೆ ತೆರಿಗೆ ಮತ್ತು ನೀರಿನ ಕರ ಹೆಚ್ಚಳ ವಿರೋಧಿಸಿ ಕಾರ್ಮಿಕರ ಪ್ರತಿಭಟನೆ

ದಾಂಡೇಲಿ ನಗರ ಸಭೆಯು ಮನೆ ತೆರಿಗೆಯನ್ನು ಶೇ.55 ರಷ್ಟು ಮತ್ತು ನೀರಿನ ಕರವನ್ನು ಎರಡು ಪಟ್ಟು ಹೆಚ್ಚಿಸಲು ಹೊರಟಿರುವುದನ್ನು ಸಿಐಟಿಯು ನೇತೃತ್ವದ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಎಂಪ್ಲಾಯಿಸ್ ಯೂನಿಯನ್‌ನ ಕಾರ್ಮಿಕರು ತೀವ್ರವಾಗಿ ವಿರೋಧಿಸಿದ್ದಾರೆ. ಇತ್ತೀಚೆಗೆ (ಮೇ 27) ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಯೊಂದನ್ನು ಹೊರಡಿಸಿ, ನಗರ ಸಭೆಯ ಕಾರ್ಯಾಲಯದ ಎದುರು ಮತ ಪ್ರದರ್ಶನ ನಡೆಸಿ ಬೇಡಿಕೆಗಳ ಮನವಿಯೊಂದನ್ನು ಸಲ್ಲಿಸಲಾಯಿತು.

ದಾಂಡೇಲಿ ನಗರಸಭೆಯು ಗೊಂದಲದ ಗೂಡಾಗಿದೆ. ಬಹುಮತ ಪಡೆದಿದ್ದ ಜೆಡಿ(ಎಸ್) ಪಕ್ಷ ಅಧಿಕಾರದಿಂದ ವಂಚಿತವಾಗಿದೆ. ಹಾಲಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಠರಾವನ್ನು ಪಾಸು ಮಾಡುವಲ್ಲಿ ನಿಲುವಳಿ ತಂದವರು ವಿಫಲರಾಗಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡ ಅಧ್ಯಕ್ಷರು ಪಕ್ಷಾಂತರ ನಿಷೇಧ ಕಾಯ್ದೆ ಅಡಿಯಲ್ಲಿ ಮೊಕದ್ದಮೆ ಎದುರಿಸುತ್ತಿದ್ದಾರೆ. ಸಭೆಗಳು ನಿಯಮದಂತೆ ನಡೆಯುತ್ತಿಲ್ಲ. ತೆರಿಗೆ ಸಂದಾಯ ಮಾಡುವ ನಾಗರೀಕರಿಗೆ ಕನಿಷ್ಠ ನಾಗರೀಕ ಸೌಲಭ್ಯಗಳು ಸಿಗದಂತಾಗಿವೆ. ನಗರದ ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ಪೂರೈಕೆ ಸಹ ಸಮರ್ಪಕವಾಗಿ ನಡೆಯುತ್ತಿಲ್ಲ. ಕಸವನ್ನು ಮನೆ ಮನೆಯಿಂದ ಒಟ್ಟುಗೂಡಿಸಿ ವಿಲೇವಾರಿ ಮಾಡಲು ಹಣ ಕೊಡಬೇಕಾಗುತ್ತದೆ. ಶೇಖರಿಸಿದ ಕಸವನ್ನು ನಗರಸಭೆಯ ವ್ಯಾಪ್ತಿಯ ಬಯಲಿನಲ್ಲಿ ಚೆಲ್ಲಿ ಸಾರ್ವಜನಿಕರು ಮೂಗು ಮುಚ್ಚಿಕೊಂಡು ತಿರುಗಾಡುವಂತಾಗಿದೆ.

ನದಿ ತೀರದಲ್ಲಿಯೇ ನಗರವಿದ್ದರೂ ನಾಗರೀಕರಿಗೆ ಶುದ್ಧವಾದ ಕುಡಿಯುವ ನೀರು ಸಿಗುವುದಿಲ್ಲ. ನೀರಿನ ಶುದ್ದೀಕರಣ ಸರಿಯಾಗಿ ಆಗುತ್ತಿಲ್ಲ. ವಿತರಣೆಯೂ ಸಮರ್ಪಕವಾಗಿ ಆಗುತ್ತಿಲ್ಲ. ಒಂದು ಪ್ರದೇಶಕ್ಕೆ ಒಂದು ಗಂಟೆ ಕೊಟ್ಟರೆ ಮತ್ತೊಂದು ಪ್ರದೇಶಕ್ಕೆ ನಾಲ್ಕಾರು ಗಂಟೆಗೂ ಹೆಚ್ಚು ಕಾಲ ನೀರು ಹರಿಬಿಡುತ್ತಾರೆ. ಈಗ ನೀರಿನ ಕರ ದುಪ್ಪಟ್ಟು ಮಾಡಲು ಹೊರಟಿದ್ದಾರೆ. ಸಾರ್ವಜನಿಕ ಶೌಚಾಲಯಗಳ ಕೊರತೆಯಿಂದ ಮಹಿಳೆಯರು ಪರದಾಡುವಂತಾಗಿದೆ. ಜೆ.ಎನ್. ರಸ್ತೆಯಲ್ಲಿರುವ ಕಕ್ಕಸ ಮತ್ತು ಮೂತ್ರಾಲಯಗಳನ್ನು ನೆಲಸಮ ಮಾಡಿ ಅಂಗಡಿಗಳನ್ನು ತೆರೆಯಲು ಅನುವು ಮಾಡಿಕೊಡಲಾಗಿದೆ. ನಗರದ ಉದ್ಯಾನವನಗಳ ನಿರ್ವಹಣೆಯಾಗುತ್ತಿಲ್ಲ. ನಗರದಲ್ಲಿ ವಸತಿ ಹೀನರ ಸಮಸ್ಯೆ ಗಂಭೀರವಾಗಿದೆ. ಆಶ್ರಯ ಯೋಜನೆಯಲ್ಲಿ ಅರ್ಹರಿಗೆ ಮನೆಗಳು ಸಿಗುವುದಿಲ್ಲ. ಬಡವರ ಅತಿಕ್ರಮಣ ನಿವೇಶನಗಳನ್ನು ಸಕ್ರಮ ಗೊಳಿಸುವ ಪ್ರಶ್ನೆ ಇತ್ಯರ್ಥವಾಗಿಲ್ಲ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಹೆಸರಿನಲ್ಲಿ ಈಗ ಮನೆ ತೆರಿಗೆಯನ್ನು ಶೇ.25 ರಷ್ಟು ಹೆಚ್ಚಿಸಿ ಒಟ್ಟು ಮೊತ್ತಕ್ಕೆ ಶೇ.24 ರಷ್ಟು ಸೆಸ್ ವಿಧಿಸಲು ನಗರಸಭೆ ಮುಂದಾಗಿದೆ. ಈ ಹೆಚ್ಚು ಶೇ.55 ಆಗಲಿದೆ. ಸರ್ಕಾರದ ಆದೇಶವನ್ನು ಯಾವುದೇ ಕಾಳಜಿ ಇಲ್ಲದೆ ಜಾರಿ ಮಾಡಲು ಹೊರಟಿದ್ದಾರೆ. ದಾಂಡೇಲಿ ನಗರದಲ್ಲಿ ಈಗಾಗಲೇ ಹಲವಾರು ಕಾರ್ಖಾನೆಗಳು ಬಂದ್ ಆಗಿ ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗಿವೆ. ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನಲ್ಲಿಯೂ ಕಾಯಂ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ. ಗಣನೀಯ ಸಂಖ್ಯೆಯಲ್ಲಿರುವ ಗುತ್ತಿಗೆ ಕಾರ್ಮಿಕರು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ನಗರಸಭೆಯ ಈ ತೆರಿಗೆ ಹೆಚ್ಚಳದ ಹೇರಿಕೆ ದಾಂಡೇಲಿಯ ಕಾರ್ಮಿಕ ಕುಟುಂಬಗಳಿಗೆ ಹೊರಲಾಗದ ಹೊರೆಯಾಗಿದೆ. ಆದ್ದರಿಂದಲೇ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಿಐಟಿಯು ಈ ಹೋರಾಟದ ಕಾರ್ಯಕ್ರಮವನ್ನು ರೂಪಿಸಿತ್ತು. ಸಾರ್ವಜನಿಕರು ಸಹ ಹಾಗೂ ಡಿವೈಎಫ್‌ಐ ಸಂಘಟನೆಯ ಯುವಕರು ಹೋರಾಟದಲ್ಲಿ ಭಾಗವಹಿಸಿದ್ದರು.

ನಗರಸಭೆಯ ಕಾರ್ಯಾಲಯದ ಎದುರು ಸಂಘಟಿಸಲಾಗಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾರ್ಮಿಕ ಮುಖಂಡರಾದ ಟಿ.ಎಸ್.ನಾಯ್ಕ್, ಎಸ್.ವಿ. ಸಾವಂತ್, ಹರೀಶ್‌ನಾಯ್ಕ ಮೊದಲಾದವರು ಮಾತನಾಡಿದರು. ಹೆಚ್.ಬಿ.ನಾಯ್ಕ್, ಮಂಜುನಾಥ್ ಪುಲಕರ್, ಎಂ.ಎಚ್. ನಾಯ್ಕ್, ಧನಂಜಯ ಕಲ್ಲುಗ್ಟರ್, ಗಣಪತಿ ನಾಯ್ಕ್, ಜಗದೀಶ್ ನಾಯ್ಕ್ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಕೊನೆಯಲ್ಲಿ ರಾಜೇಸಾಬ್ ಕೇಸನೂರ್ ವಂದಿಸಿದರು.

- ಹರೀಶ್ ನಾಯ್ಕ್

ಸಂಪಾದಕೀಯ:

ಬಹಿರಂಗ ಬಂಡಾಯಗಳು - ಗುಪ್ತ ಒಪ್ಪಂದಗಳು

ರಾಜ್ಯದಲ್ಲಿ ಬಿಜೆಪಿಯೊಳಗಿನ ಬಂಡಾಯವನ್ನು ಶಮನಗೊಳಿಸುವ ಪ್ರಯತ್ನಗಳು ನಡೆಯುತ್ತಿರುವಾಗಲೇ ಬಿಜೆಪಿಯ ಹೈಕಮಾಂಡ್ ಕಮಾಂಡ್ ರಹಿತವಾಗುತ್ತಿದೆ. 2004 ರಲ್ಲಿ ಸೋತಾಗಲೇ ಬಿಜೆಪಿ ಮುಟ್ಟಿದ್ದ ದಿಕ್ಕೆಟ್ಟ ಸ್ಥಿತಿ ಈಗ ದಿಕ್ಕು ದಿವಾಣಿ ಇಲ್ಲದ ಸ್ಥಿತಿಗೆ ಮುಟ್ಟುತ್ತಿದೆ. ರಾಜ್ಯದಲ್ಲಿ ಯಡಿಯೂರಪ್ಪನವರಿಗೆ ಎರಡು ಲಗಾಮು ಹಾಕಲು ಆರೆಸ್ಸೆಸ್ ಕಡೆಯಿಂದ ಹಾಗೂ ಗಣಿಧಣಿಗಳ ಕಡೆಯಿಂದ ನಡೆಯುತ್ತಿದ್ದ ಪ್ರಯತ್ನಗಳನ್ನು ಪತ್ರಿಕೆ-ಮಾಧ್ಯಮಗಳು ಭುಗಿಲೆದ್ದ ಬಂಡಾಯವೆಂಬಂತೆ ರೋಚಕವಾಗಿ ವರ್ಣಿಸಿದವು. ಆದರೆ 'ಜನಶಕ್ತಿ' ಅದು ಕೇವಲ ಬಿಜೆಪಿಯೊಳಗಿನ ವಿವಿಧ ಶೋಷಣಾತ್ಮಕ ಶಕ್ತಿಗಳ ನಡುವಣ ತಿಕ್ಕಾಟ. ತಮ್ಮ ಬಲವನ್ನೂ ಹೆಚ್ಚಿಸಿಕೊಳ್ಳುವ ಆರೆಸ್ಸೆಸ್ ಗುಂಪಿನ ಪ್ರಯತ್ನ ಮತ್ತು ತಮ್ಮ ಬಲ ಕುಗ್ಗದಂತೆ ರಕ್ಷಿಸಿಕೊಳ್ಳುವ ರೆಡ್ಡಿ ಧಣಿಗಳ ಪ್ರಯತ್ನ ಎಂದು ವರ್ಣಿಸಿತ್ತು. ಈಗ ಬಂಡವಾಳಶಾಹಿ ಮಾಧ್ಯಮಗಳ ಪತ್ರಿಕೆಗಳ ಅಬ್ಬರಗಳ ಬಲೂನಿನ ಗುಳ್ಳೆ ಒಡೆದುಹೋಗಿದೆ. ಬಿಜೆಪಿಯ ನಾಯಕ ಅರುಣ್‌ಜೈಟ್ಲಿಯವರ ಭೇಟಿಯ ನಂತರ ಬಿಜೆಪಿಯ ಮೂರು ಗುಂಪುಗಳ ನಡುವೆ ಒಳಗೊಳಗೆ ಒಪ್ಪಂದವಾಗಿವೆ. ಈಗ ಎಲ್ಲರೂ ದಾವಣಗೆರೆ -ಹುಬ್ಬಳ್ಳಿಗಳಲ್ಲಿ ಒಂದೇ ವೇದಿಕೆಯ ಮೇಲೆ ಏನೂ ಆಗಿಲ್ಲವೆಂಬಂತೆ ಮುಖ್ಯಮಂತ್ರಿಗಳನ್ನು ಹೊಗಳಿ ಹಾಡುತ್ತಾ 'ಏಕತೆ'ಯನ್ನೂ ಪ್ರದರ್ಶಿಸಿದ್ದಾರೆ.

ಬಹಿರಂಗವಾಗಿ ಬಂಡಾಯ ಸಾರುತ್ತಾ ಸೈದ್ಧಾಂತಿಕ ಕಾರಣಗಳನ್ನು ನೀಡುತ್ತಿದ್ದವರು ಇಂದು ಆ ಸೈದ್ಧಾಂತಿಕ ಪ್ರಶ್ನೆಗಳಿಗೆ ಯಾವ ಪರಿಹಾರ ಸಿಕ್ಕಿತೆಂದು ಬಾಯಿ ಬಿಡುತ್ತಿಲ್ಲ. ಮತ್ತೊಂದು ಕಡೆ ಬಂಡಾಯದ ಬಾವುಟ ಎತ್ತುತ್ತಿದ್ದ ಇನ್ನೊಂದು ಗುಂಪಿನವರು ತಮ್ಮ ಬಂಡಾಯಕ್ಕೆ ಕಾರಣವೇನು ಎಂಬುದನ್ನೇ ಮುಚ್ಚಿಟ್ಟಿದ್ದರು. ಅದರ ಬಗ್ಗೆ ನಾನಾ ಊಹಾಪೋಹಗಳು ಪ್ರಕಟವಾಗಿದ್ದವು. ಅವರು ಕೂಡ ಗುಪ್ತ ಮಾತುಕತೆಗಳ ನಂತರ ಬಾಯಿ ಬಿಟ್ಟಿಲ್ಲ. ಎಲ್ಲವೂ ನಿಗೂಢ ರಹಸ್ಯ.

ಈ ಬಂಡಾಯಗಳ ನಡುವೆ ರಾಜ್ಯದ ಆಡಳಿತ ಕೆಲಕಾಲ ಅಸ್ಥಿರವಾದುದರ ಫಲವನ್ನು ಅನುಭವಿಸಿದ್ದು, ತಮ್ಮ ಸಮಸ್ಯೆಗಳಿಗೆ ರಾಜ್ಯದ ಅಭಿವೃದ್ಧಿಗಳಲ್ಲಿ ಹಿನ್ನಡೆಯನ್ನು ಕಂಡಿದ್ದು ಮಾತ್ರ ರಾಜ್ಯದ ಜನತೆ. ಆದರೆ ಜನತೆಗೆ ಈ ಬಂಡಾಯದಿಂದ ಏನಾದರೂ ಪ್ರಯೋಜನವಾಯಿತೆ, ಇದನ್ನು ತಿಳಿದುಕೊಳ್ಳುವ ಹಕ್ಕಿಲ್ಲವೆಂಬಂತೆ ಬಿಜೆಪಿಯ ಮೂರು ಗುಂಪಿನ ವರ್ತನೆಯಾಗಿದೆ. ಒಟ್ಟಿನಲ್ಲಿ ಈ ಒಪ್ಪಂದಗಳು ಗುಟ್ಟು ಗುಟ್ಟಾಗಿ ನಡೆದುದೇಕೆ? ಕಾರಣ ಇಷ್ಟೇ. ಅವುಗಳನ್ನು ಬಹಿರಂಗಗೊಳಿಸಲಾಗದಷ್ಟು ಜನವಿರೋಧಿ ಯಾಗಿವೆ, ಅಸಹ್ಯವಾಗಿವೆ.

ಬಂಡಾಯವೆದ್ದಿದ್ದ ಎರಡು ಗುಂಪುಗಳು ತಮ್ಮ 'ಹಿತ' ಗಳನ್ನು ರಕ್ಷಿಸಿಕೊಳ್ಳುವಲ್ಲಿ ಭಾಗಶಃ ಯಶಸ್ವಿಯಾಗಿವೆ. ಮುಖ್ಯಮಂತ್ರಿ ಗುಂಪು ಅದರಲ್ಲಿಯೂ ಮುಖ್ಯಮಂತ್ರಿ ತಮ್ಮ ಹಿಡಿತವನ್ನು ಸಡಲಿಸದೆ ಕೆಲವು ರಾಜಿಗಳನ್ನು ಮಾಡಿಕೊಂಡಿದ್ದಾರೆ ಎಂಬುದು ಹೊರನೋಟಕ್ಕೆ ಕಾಣುತ್ತಿದೆ. ಆದರೆ ಭಿನ್ನಮತದಲ್ಲಿ ಎಲ್ಲಿಯೂ ಪ್ರಕಟವಾಗಿ ಕಾಣಿಸಿಕೊಳ್ಳದೇ ಇದ್ದ ಅನಂತಕುಮಾರ್ ಈ ಎಲ್ಲಾ ರಹಸ್ಯ ಮಾತುಕತೆಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಪಕ್ಷದಲ್ಲಿ ಮತ್ತು ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡಿದ್ದಾರೆ ಎಂಬುದಂತೂ ಪ್ರಕಟವಾಗಿದೆ.

ಈ ಎಲ್ಲಾ ಬೆಳವಣಿಗೆಗಳಲ್ಲಿ ನಿರಾಶೆಗೊಂಡಿದ್ದು ಮಾತ್ರ ಸ್ಪೀಕರ್ ಜಗದೀಶ್‌ಶೆಟ್ಟರ್. ಈ ಎಲ್ಲಾ ಬಂಡಾಯಗಳ ಫಲವಾಗಿ ಮುಖ್ಯಮಂತ್ರಿ ಪಟ್ಟ ತಮಗೆ ದಕ್ಕೀತು ಎಂದು ಅವರು ಭಾವಿಸಿದ್ದರು. ಒಬ್ಬ ಲಿಂಗಾಯತರನ್ನು ಮುಖ್ಯಮಂತ್ರಿ ಸ್ಥಾನದಿಂದ ಪಲ್ಲಟಗೊಳಿಸಿದರೆ ಮತ್ತೊಬ್ಬ ಲಿಂಗಾಯತನಿಗೆ ಮಾತ್ರ ಆ ಗದ್ದುಗೆಏರುವ ಹಕ್ಕು. ಅದು ತಾವೇ ಎಂದುಕೊಂಡಿದ್ದ ಜಗದೀಶ್‌ಶೆಟ್ಟರ್‌ರವರಿಗೆ ಕನಿಷ್ಠ ಒಂದು ಸಚಿವ ಸ್ಥಾನವೂ ತಮಗೆ ದಕ್ಕದ್ದು ತೀವ್ರ ಅಸಮಾಧಾನ ತಂದಿದೆ. ಅದನ್ನು ಅವರು ಹುಬ್ಬಳ್ಳಿಯ ಬಿಜೆಪಿ ಸರ್ಕಾರದ ಒಂದು ವರ್ಷದ ಜಾತ್ರೆಯ ಅಧ್ಯಕ್ಷತೆಯನ್ನು ವಹಿಸಲು ನಿರಾಕರಿಸುವುದರ ಮೂಲಕ ತೋರಿಸಿಕೊಂಡಿದ್ದಾರೆ. ಅದನ್ನು ಕೂಡ ಒಂದು ತಡರಾತ್ರಿಯ ರಹಸ್ಯ ಮಾತುಕತೆಗಳ ಮೂಲಕ ತತ್ಕಾಲಕ್ಕೆ ಪರಿಹರಿಸಿಕೊಳ್ಳಲಾಗಿದೆ.

ಈ ಎಲ್ಲ ಒಪ್ಪಂದಗಳೂ ಕೇವಲ ತಾತ್ಕಾಲಿಕ ಒಪ್ಪಂದಗಳು ಮಾತ್ರ. ಈ ಗುಂಪುಗಳ ನಡುವೆ ತಿಕ್ಕಾಟಗಳು ಒಳಗೊಳಗೆ ಜೀವಂತವಾಗಿರುತ್ತವೆ. ಮತ್ತೆ ಮತ್ತೆ ಸ್ಫೋಟಿಸುತ್ತವೆ ಎಂಬುದು ಬಿಜೆಪಿಯ ಇಂದಿನ ಸ್ಥಿತಿಯ-ಯಾವುದೇ ಬಂಡವಾಳಶಾಹಿ ಭೂ ಮಾಲೀಕರ ಪಕ್ಷದ ಸ್ಥಿತಿಯ ಅನಿವಾರ್ಯ ಭಾಗ ಮಾತ್ರ. ಆದರೆ ಅದರಲ್ಲಿ ಹಾನಿಗೊಳಗಾಗುವುದು ಮಾತ್ರ ಜನತೆ.

ಸಂಪುಟ ಪುನರ್‌ರಚನೆ : ಶಿವನ ಗೆಲುವು ವಿಷ್ಣುವಿನ ಸೋಲೇ?!

ಈ ವಾರ

ಜಿ.ಎನ್.ನಾಗರಾಜ್

ಬಿಜೆಪಿಯ ಒಳಗಿನ ಬಂಡಾಯದ ಫಲವಾಗಿ ಯಡಿಯೂರಪ್ಪನವರಿಗೆ ತಮ್ಮ ಮುಖ್ಯಮಂತ್ರಿ ಪಟ್ಟವನ್ನೇ ಕಳೆದುಕೊಳ್ಳಬೇಕಾಗುವುದೇನೋ ಅಥವಾ ಸಚಿವ ಸಂಪುಟದಲ್ಲಿ ತಮ್ಮ ಭಕ್ತ ವೃಂದದಲ್ಲಿ ಕೆಲವರನ್ನು ಕೈಬಿಟ್ಟು ಹಿನ್ನಡೆಯನ್ನು ಅನುಭವಿಸಬೇಕಾಗುವುದೇನೋ ಎಂಬ ಭಯ ಉಂಟಾಗಿತ್ತು. ಈಗ ಆ ಬಂಡಾಯಗಳ ತಾತ್ಕಾಲಿಕ ಶಮನದ ಮೂಲಕ ಕೇವಲ ಒಂದು ಕಳೆದು ಒಂದು ಕೂಡಿ ಕೆಲವೇ ಖಾತೆಗಳನ್ನು ಬದಲಾವಣೆ ಮಾಡಿ ಈ ಸನ್ನಿವೇಶವನ್ನು ಸದ್ಯಕ್ಕೆ ತಪ್ಪಿಸಿಕೊಂಡಿದ್ದಾರೆ. ಸರ್ಕಾರದ ಮೇಲೆ ಲಿಂಗಾಯುತ ಭೂ ಮಾಲೀಕ-ಬಂಡವಾಳಶಾಹಿಗಳ ಹಿಡಿತವನ್ನೂ, ಮಠಗಳ ಹಿಡಿತವನ್ನೂ ಹೆಚ್ಚಿಸುವಂತೆ ಸಿದ್ದಗಂಗಾ ಮಠದ ನಮ್ರ ಸೇವಕರಾದ ಲಿಂಗಾಯುತ ವ್ಯಾಪಾರಿ ಬಂಡವಾಳ ಶಾಹಿಗಳ ಹಾಗೂ ಭೂ ಮಾಫಿಯಾದ ಒಂದು ಸಣ್ಣ ತುಂಡಾದ ಸೋಮಣ್ಣನವರನ್ನು ಮಂತ್ರಿ ಮಂಡಲಕ್ಕೆ ಸೇರಿಸಿ ನಗರಾಭಿವೃದ್ಧಿ ಇಲಾಖೆಯನ್ನು ನೀಡಲಾಗುತ್ತಿದೆ ಎಂಬ ಸುದ್ದಿಗಳಿವೆ. 'ಕುರಿ ಕಾಯೋ ತೋಳ ಎಂದರೆ ತೋಳ ಕೂಲಿಯೇ ಬೇಡ ಎಂದಿತಂತೆ' ಹಾಗಾಗಿದೆ ಬಿಜೆಪಿ ಸರ್ಕಾರದ ನಿರ್ಧಾರ.

ಅದಕ್ಕಾಗಿ ಮತ್ತೊಬ್ಬ, ದೇವಸ್ಥಾನಗಳ ಅದರಲ್ಲಿಯೂ ತಿರುಪತಿ ವೆಂಕಟರಮಣನ ನಮ್ರ ಸೇವಕ ಹಾಗೂ ಭೂ ಮಾಫಿಯಾ ಹಾಗೂ ವೈಶ್ಯ ವ್ಯಾಪಾರಿ ಹಿತಗಳ ಪ್ರತಿನಿಧಿಯಾದ, ಬ್ಯಾಂಕುಗಳ 7 ಕೋಟಿ ರೂ.ಗಳನ್ನು ಎತ್ತಿ ಹಾಕಿದ ಆರೋಪ ಹೊತ್ತಿರುವ ಕೃಷ್ಣಯ್ಯ ಶೆಟ್ಟಿಯವರನ್ನು ಬಲಿಯ ಕುರಿಯನ್ನಾಗಿಸಿದೆ. ಒಬ್ಬ ವ್ಯಾಪಾರಿ-ಭೂ ಮಾಫಿಯಾ ಬದಲಾಗಿ ಮತ್ತೊಬ್ಬ ವ್ಯಾಪಾರಿ -ಭೂ ಮಾಫಿಯಾ ಅಷ್ಟೇ. ಇದು ಜನಶಕ್ತಿಯ ವರ್ಗ ದೃಷ್ಟಿಯ ವಿಶ್ಲೇಷಣೆ.

ಆದರೆ ಅದರಲ್ಲಿ ಒಂದು ಅಪರೂಪದ ವ್ಯಂಗ್ಯ ಅಡಗಿದೆ ಅದರಲ್ಲಿಯೂ ರಾಮನಿಷ್ಠ ಬಿಜೆಪಿಯಲ್ಲಿ ಸೋಮಣ್ಣನವರು ಸಚಿವ ಸ್ಥಾನ ಪಡೆಯುವುದರಲ್ಲಿ ಶಿವನ-ಶಿವಭಕ್ತರ ಮಠದ ಗೆಲುವು - ವೆಂಕಟರಮಣನ ಹಾಗೂ ಶ್ರೀರಾಮನ ಮೂಲ ರೂಪ ವಿಷ್ಣುವಿನ ಸದ್ಭಕ್ತ ಕೃಷ್ಣಯ್ಯಶೆಟ್ಟಿ ಸ್ಥಾನ ಕಳೆದುಕೊಂಡಿದ್ದು, ಸರ್ಕಾರದ ಮೇಲೆ ವೆಂಕಟರಮಣನ ಪ್ರಭಾವದ ಹಾಗೂ ವಿಷ್ಣುವಿನ ಸೋಲು ಎನ್ನಿಸುವಂತಿದೆ.

ಈ ವ್ಯಂಗ್ಯ ಅಂತಿರಲಿ, ಈ ಬದಲಾವಣೆಯಿಂದ ಜನತೆಗಾದ ಲಾಭವೇನು? ಕತ್ತಿ ಹೋಯ್ತು, ಖಡ್ಗ ಬಂತು ಡುಂಡುಂ! ಆದರೆ ಅದರಲ್ಲಿಯೂ ಒಂದು ಸಣ್ಣ ವ್ಯತ್ಯಾಸವಿದೆ. ಅದನ್ನು ಗಮನಿಸಲು ದುಡಿಯುವ ಜನತೆ ಮರೆಯಬಾರದು. ಆರೆಸ್ಸೆಸ್‌ನ ಪ್ರಥಮ ರಾಜಕೀಯ ರೂಪ ಜನಸಂಘ ಸ್ಥಾಪನೆಗೊಂಡಂದಿನಿಂದ ಈ ಜನಸಂಘವನ್ನು ಯಾರೂ ಕೇಳುವರಿಲ್ಲದ ಸಮಯದಲ್ಲೂ ವೈಶ್ಯ ಜಾತಿಯ ವ್ಯಾಪಾರಿ ಹಾಗೂ ಬಂಡವಾಳಶಾಹಿ ವರ್ಗ ಬಹುನಿಷ್ಠೆಯಿಂದ ವಿಪುಲ ದೇಣಿಗೆ, ಮತಗಳನ್ನು ನೀಡಿ ಜನಸಂಘದ ದೀಪಕ್ಕೆ ನಿರಂತರವಾಗಿ ತೈಲವನ್ನೆರೆಯುತ್ತಾ ಅದರ ದೀಪವನ್ನು ಜೀವಂತ ಉಳಿಸಿಕೊಂಡು ಬಂದಿದ್ದರು. ಈ ವರ್ಗಕ್ಕೆ ಅಪರೂಪಕ್ಕೆ ಒಂದು ಸಚಿವ ಸ್ಥಾನ ಲಭ್ಯವಾಗಿದ್ದು ಮತ್ತೆ ಕಸಿದುಕೊಳ್ಳಲಾಗಿದೆ. ಇದು ಈ ವರ್ಗದಲ್ಲಿ ಅತೃಪ್ತಿಯನ್ನು ಹೆಚ್ಚಿಸಲಿದೆ, ಮಾತ್ರವಲ್ಲ ದಕ್ಷಿಣ ಕರ್ನಾಟಕದ ವ್ಯಾಪಾರ ವಹಿವಾಟುಗಳಲ್ಲಿ ಶತಮಾನಗಳಿಂದ ಹೊಂದಿದ್ದ ಮೇಲುಗೈಯನ್ನು ಇತರ ವ್ಯಾಪಾರಿ ಬಂಡವಾಳಶಾಹಿಗಳಿಗೆ ನಿಧಾನ ಬಿಟ್ಟುಕೊಡುತ್ತಾ ಬಂದಿರುವ ಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಲಿದೆ.

ವರ್ಗದ ದೃಷ್ಟಿಯಿಂದ ಈ ಬದಲಾವಣೆಗಳನ್ನು ವಿಶ್ಲೇಸುವಾಗಲೇ ಬಂಡವಾಳಶಾಹಿ ಪತ್ರಿಕೆ ಮಾಧ್ಯಮಗಳಲ್ಲಿ ಮೆರೆಸುತ್ತಿರುವ ಸೋಮಣ್ಣನವರ ವೈಯಕ್ತಿಕ ಸಂಘಟನಾ ಚಾತುರ್ಯ, ನಗರಗಳ ವಿಸ್ತರಣೆಗಳ ಅಭಿವೃದ್ಧಿಯಲ್ಲಿ ಪರಿಣಾಮಕಾರಿ ಕೆಲಸ ಇವುಗಳನ್ನು ಗಮನಕ್ಕೆ ತೆಗೆದುಕೊಳ್ಳೋಣ. ಮೇಲ್ನೋಟಕ್ಕೆ ಕೃಷ್ಣಯ್ಯ ಶೆಟ್ಟಿಯವರಿಗಿಂತಲೂ ಹೆಚ್ಚು ದಕ್ಷ, ಸಂಭಾವಿತ, ಸೌಜನ್ಯವಂತ ಎಂಬ ಭ್ರಮೆಯನ್ನು ಮೂಡಿಸುತ್ತಾರೆ. ಅದರ ಮರೆಯಲ್ಲಿ ಶೋಷಕವರ್ಗಗಳಿಗೆ ಸೇವೆ ಸಲ್ಲಿಸುವ ಚಾತುರ್ಯ ಸೋಮಣ್ಣನವರಲ್ಲಿದೆ ಎಂಬುದನ್ನು ಆರಂಭದಲ್ಲಿಯೇ ಗುರುತಿಸಬೇಕಾಗಿದೆ.

ಇದು ಕೇವಲ ಒಬ್ಬ ಮಂತ್ರಿಯ ಬದಲಾವಣೆಯ ಪ್ರಶ್ನೆಯಲ್ಲ. ಆಳುವ ವರ್ಗಗಳ ಒಳಗೆ ಇಂತಹ ಯಾವುದೇ ಬದಲಾವಣೆಗಳು ಸಂಭವಿಸಿದಾಗಲೂ ಅದನ್ನು ನೋಡಬೇಕಾದ ದುಡಿಯುವ ವರ್ಗದ ದೃಷ್ಟಿಕೋನಕ್ಕೆ ಒಂದು ಉದಾಹರಣೆಯಾಗಿ ವಿವರಿಸಲಾಗಿದೆ. ವ್ಯಕ್ತಿ ಹಾಗೂ ವರ್ಗ ಸಂಬಂಧಗಳ, ವರ್ಗ ಹಾಗೂ ರಾಜಕೀಯ ಪಕ್ಷ ಮತ್ತು ಸರ್ಕಾರಗಳ ನಡುವಣ ಸಂಬಂಧದ ವಿಶ್ಲೇಷಣೆಗೆ ಒಂದು ಉದಾಹರಣೆಯಾಗಿ ಇದನ್ನು ವಿವರಿಸಲಾಗಿದೆ.

ವಿದ್ಯುತ್ ದರ ಏರಿಕೆಯ ಪ್ರಯತ್ನ

ಲೋಕಸಭಾ ಚುನಾವಣೆಗಳಿಗೆ ಮುನ್ನ ಜನತೆಯನ್ನು ಸಂತೃಪ್ತಗೊಳಿಸಲು ವಿದ್ಯುತ್ ಕಡಿತವನ್ನು ಕಡಿತಗೊಳಿಸುವ ಜಗ್ಗಾಟಗಳ ನಡುವೆ, ವಿದ್ಯುತ್ ಪರಿಸ್ಥಿತಿಯ ವಾಸ್ತವವನ್ನು ಮುಚ್ಚಿಟ್ಟು ದುಬಾರಿ ಬೆಲೆ ನೀಡಿ ಖಾಸಗಿ ಕಂಪನಿಗಳು ದುರ್ಲಾಭಗಳಿಸಲು ಅವಕಾಶ ನೀಡಿದ ಸರ್ಕಾರ ಲೋಕಸಭಾ ಚುನಾವಣೆಗಳು ಮುಗಿದ ಕೂಡಲೇ 'ಹೊಳೆದಾಟಿದ ಮೇಲೆ ಅಂಬಿಗ ಮಿಂಡ' ಎಂಬ ನಾಣ್ಣುಡಿಗೆ ಸರಿಯಾಗಿ ನಡೆದುಕೊಳ್ಳುತ್ತಿದೆ. ಒಂದು ಯೂನಿಟ್ ವಿದ್ಯುತ್‌ಗೆ 8 ರೂವರೆಗೂ ನೀಡಿ ಅದನ್ನು ಕೊಂಡ ಕ್ರಮದ ಫಲವಾಗಿ ಇಂದು ವಿದ್ಯುತ್ ಬೆಲೆಯನ್ನು ದುಬಾರಿಯಾಗಿಸಿ ರಾಜ್ಯದ ಜನತೆಯನ್ನು ದೋಚುವ ಕೆಲಸಕ್ಕೆ ಬಿಜೆಪಿ ರಾಜ್ಯ ಸರ್ಕಾರ ಹವಣಿಸುತ್ತಿದೆ. ಈ ಪ್ರಸ್ತಾವಗಳು ಇನ್ನೂ ವಿವರವಾಗಿ ಗೊತ್ತಾದ ಮೇಲೆ ನಗರಗಳ ದುಡಿಯುವ ವರ್ಗ, ರೈತಾಪಿ ಜನಕ್ಕೆ ಎಷ್ಟು ಬೆಲೆ ತೆರಬೇಕೆಂಬುದು ಸ್ಪಷ್ಟವಾಗುತ್ತದೆ. ರಾಜ್ಯದ ಜನತೆ ಇದಕ್ಕೆ ತಕ್ಕ ಪ್ರತಿಭಟನೆಯನ್ನು ಒಡ್ಡಬೇಕಾಗಿದೆ.

ಹಾವೇರಿ ಗೋಲಿಬಾರ್‌ಗೆ ಒಂದು ವರ್ಷ

ಮೊಕದ್ದಮೆ ವಾಪಸ್ಸಿಗೆ ರೈತರ ಆಗ್ರಹ

"ಹಾವೇರಿ ಗೋಲಿಬಾರ್ ಘಟನೆಗೆ ಸಂಬಂಧಿಸಿದಂತೆ ಒಂದು ನೂರಕ್ಕೂ ಹೆಚ್ಚು ಜನ ಅಮಾಯಕರ ಮೇಲೆ ಹೂಡಲಾದ ಮೊಕದ್ದಮೆಗಳನ್ನು ಸರ್ಕಾರ ವಾಪಸ್ ಪಡೆಯಲು ಹಿಂದೇಟು ಹಾಕಿದರೆ ನರಗುಂದ ರೈತ ಬಂಡಾಯದ ರೀತಿಯಲ್ಲಿ ಹೋರಾಟ ಮಾಡಬೇಕಾಗುವುದು" ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ ಎಚ್ಚರಿಕೆ ನೀಡಿದರು.

ಹಾವೇರಿ ಗೋಲಿಬಾರ್‌ಗೆ ಒಂದು ವರ್ಷ ತುಬಿದ ಹಿನ್ನೆಲೆಯಲ್ಲಿ ಜೂನ್ 10 ರಂದು ಹಾವೇರಿ ನಗರದಲ್ಲಿ ವಿವಿಧ ರೈತ ಸಂಘಗಳು ಹಾಗೂ ಇತರ ಪ್ರಗತಿಪರ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದ ರೈತ ಹುತಾತ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಬಾಬಾಬುಡನ್‌ಗಿರಿ ವಿಷಯದಲ್ಲಿ ಪುಂಡಾಟಿಕೆ ನಡೆಸಿದ್ದ ಭಜರಂಗದಳದವರ ವಿರುದ್ಧ ದಾಖಲಾಗಿದ್ದ 11 ಪ್ರಕರಣಗಳನ್ನು ಹಿಂದಕ್ಕೆ ಪಡೆದಿರುವ ರಾಜ್ಯ ಬಿಜೆಪಿ ಸರ್ಕಾರ ರೈತರ ಮೇಲೆ ಹೂಡಲಾದ ಪ್ರಕರಣಗಳನ್ನು ಒಂದು ವರ್ಷದ ನಂತರವೂ ವಾಪಸ್ ಪಡೆಯದೇ ಇರುವುದು ಇದೊಂದು ರೈತವಿರೋಧಿ ಸರ್ಕಾರ ಎಂಬುದರ ಪುರಾವೆಯಾಗಿದೆ ಎಂದು ಹೇಳಿದರು.

ಗೋಲಿಬಾರ್ ನಂತರ ನಗರಕ್ಕೆ ಭೇಟಿ ನೀಡಿದ್ದ ಮುಖ್ಯ ಮಂತ್ರಿ ಯಡಿಯೂರಪ್ಪ ಅವರು ಮೃತ ಸಿದ್ಧಲಿಂಗಪ್ಪ ಚೂರಿ ಮನೆಗೆ ಭಾವೋದ್ವೇಗದಿಂದ ಕಣ್ಣೀರು ಸುರಿಸಿದ್ದರು. ಇಂತಹದೊಂದು ಘಟನೆ ನಡೆಯಬಾರದಿತ್ತು ಎಂದು ನೊಂದುಕೊಂಡಿದ್ದರು. ಘಟನೆಯಲ್ಲಿ ರೈತರ ಮೇಲೆ ಹಾಕಲಾಗಿರುವ ಮೊಕದ್ದಮೆಗಳನ್ನು ಹಿಂತೆಗೆದು ಕೊಳ್ಳುವುದಾಗಿ ಭರವಸೆ ನೀಡಿದ್ದರು. ಹಸಿರುಶಾಲು ಧರಿಸಿ, ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರ ವಹಿಸಿಕೊಂಡಿದ್ದೇನೆ ಎಂದು ಕೊಚ್ಚಿಕೊಳ್ಳುವ ಯಡಿಯೂರಪ್ಪನವರಿಗೆ ರೈತರಿಗೆ ಕೊಟ್ಟ ಮಾತು ನೆನಪಾಗದಿರುವುದು ಖಂಡನೀಯವಾಗಿದೆ ಎಂದು ಅವರು ಹೇಳಿದರು.

ಕಣ್ಣೀರ ಧಾರೆಯ ನಾಟಕದ ಅಂಕ



ಸಿದ್ಧಲಿಂಗಪ್ಪ ಚೂರಿ ಸಮಾಧಿಗೆ ನಿತ್ಯಾನಂದಸ್ವಾಮಿ ಗೌರವ ಸಲ್ಲಿಸುತ್ತಿರುವುದು



ರಾಜ್ಯ ಬಿಜೆಪಿ ಸರ್ಕಾರ ಜನತೆಯಲ್ಲಿ ಭ್ರಮೆಗಳನ್ನು ಸೃಷ್ಟಿಸುತ್ತಿದೆ. ಈ ಭ್ರಮೆಗಳು ಶಾಶ್ವತವಲ್ಲ, ಜಾತಿ ಆಧಾರದಲ್ಲಿ ರೈತರ ಒಗ್ಗಟ್ಟನ್ನು ಅದು ಒಡೆಯಲು ಯತ್ನಿಸುತ್ತಿದೆ. ರಾಜ್ಯದ ಹಲವಾರು ಕಡೆ ರೈತರ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಂಡು ಬಹುರಾಷ್ಟ್ರೀಯ ಲೂಟಿಕೋರರಿಗೆ ದಾನಮಾಡಲು ಹೊರಟಿದೆ. ಯಡಿಯೂರಪ್ಪ ಸರ್ಕಾರದ ರೈತವಿರೋಧಿ ಧೋರಣೆಗಳ ವಿರುದ್ಧ ರಾಜ್ಯದ ರೈತರು ಹಾಗೂ ಕೃಷಿ ಕೂಲಿಕಾರರು ಸಂಘಟಿತ ಹೋರಾಟಕ್ಕೆ ಮುಂದಾಗಬೇಕೆಂದು ಅವರು ಕರೆ ನೀಡಿದರು.

ಮೃತಪಟ್ಟ ರೈತರಿಗೆ ಶಾಸಕನಿಂದ ಅವಮಾನ :

ಹಾವೇರಿ ಗೋಲಿಬಾರ್‌ನಲ್ಲಿ ಮೃತಪಟ್ಟವರು ರೈತರಲ್ಲ, ಅವರು ಗಲಾಟೆ ಮಾಡಲು ಬಂದ ದೋಂಬಿಕೋರರು ಎಂದು ಹೇಳುವ ಮೂಲಕ ಹಾವೇರಿ ಶಾಸಕ ನೆಹರೂ ಓಲೇಕಾರ ರೈತರಿಗೆ ಅವಮಾನ ಮಾಡಿದ್ದಾರೆ. ಈ ಕುರಿತು ಶಾಸಕರು ರೈತರ ಕ್ಷಮೆ ಕೇಳಬೇಕು. ಇಲ್ಲದೆ ಹೋದರೆ ರಾಜ್ಯಾದ್ಯಂತ ರೈತರು ಚಳುವಳಿ ನಡೆಸುವರು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಎಂ.ವೀರ ಸಂಗಯ್ಯ ಎಚ್ಚರಿಕೆ ನೀಡಿದರು. ಗೋಲಿಬಾರ್‌ನಲ್ಲಿ ಮೃತಪಟ್ಟ ಕೃಷಿ ಸಹಕಾರಿ ಸಂಘದ ಅಧ್ಯಕ್ಷರಾಗಿದ್ದ ಸಿದ್ಧಲಿಂಗಪ್ಪ ಚೂರಿ ರೈತನಲ್ಲವೇ? 30 ಗುಂಟೆ ಜಮೀನು ಇರುವ ಪುಟ್ಟಪ್ಪ ಹೊನ್ನತ್ತಿ ರೈತನಲ್ಲವೇ? ಎಂದು ಪ್ರಶ್ನಿಸಿದ ಅವರು ರಾಜಕೀಯ ಪಿತೂರಿಯಿಂದ ನಡೆದ ಗೋಲಿಬಾರ್‌ನಲ್ಲಿ ಶಾಸಕರ ಪಾತ್ರವೂ ಇರುವುದರಿಂದ ಇಂತಹ ಹೇಳಿಕೆ ನೀಡಿ ತಮ್ಮ ತಪ್ಪನ್ನು ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ ಎಂದು ಟೀಕಿಸಿದರು.

ಮೃತಪಟ್ಟವರು ರೈತರಲ್ಲದಿದ್ದರೆ ಓಲೇಕಾರ್ ಅವರು ಶಾಸಕರೇ ಅಲ್ಲ ಎಂದು ಹೇಳಿದ ಅವರು ರೈತರ ಭಾವನೆಗಳಿಗೆ ನೋವನ್ನು ಉಂಟುಮಾಡಿರುವ ಶಾಸಕರ ವಿರುದ್ಧ ವಿಧಾನಸಭಾಧ್ಯಕ್ಷರಿಗೆ ದೂರು ನೀಡಲಾಗುವುದು ಎಂದು ಹೇಳಿದರು. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಜೆಡಿ(ಎಸ್) ನಾಯಕ ಎಚ್.ಡಿ. ರೇವಣ್ಣ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡದಿರುವುದು ದುರದೃಷ್ಟಕರ ಎಂದು ಹೇಳಿದ ಅವರು ರೈತ ಸಮುದಾಯಕ್ಕೆ ಅವಮಾನ ಮಾಡಿರುವ ಹಾವೇರಿ ಶಾಸಕರ ಕಿವಿ ಹಿಂಡಿ ಬುದ್ಧಿ ಹೇಳಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಆಗ್ರಹಿಸಿದರು.

ಅಖಿಲ ಭಾರತ ಕಿಸಾನ್ ಸಭೆಯ ಮುಖಂಡರಾದ ಹೊನ್ನಪ್ಪ ಮರೆಮ್ಮನವರ, ರಾಜ್ಯ ರೈತ ಸಂಘದ ಎಸ್.ಎಂ. ಬಿದರಿ ದಾವಣಗೆರೆಯ ಆವರಗೆರೆ ರುದ್ರಮುನಿ, ಹಿರಿಯ ವಕೀಲರಾದ ಜಿ.ಎ.ಹಿರೇಮಠ, ಎಸ್.ಎಫ್.ಐ. ನ ಜಿಲ್ಲಾ ಅಧ್ಯಕ್ಷ ನಾರಾಯಣ ಕಾಳೆ ಮೊದಲಾದವರು ಮಾತನಾಡಿದರು. ರಾ... ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ರಾದ ಶಿವಾನಂದ ಗುರುಮಠ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮೊದಲು ರೈತ ಮುಖಂಡರು ಗೋಲಿಬಾರ್‌ನಲ್ಲಿ ಮೃತಪಟ್ಟ ರೈತ ಪುಟ್ಟಪ್ಪ ಹೊನ್ನತ್ತಿ ಮತ್ತು ಸಿದ್ಧಲಿಂಗಪ್ಪ ಚೂರಿ ಅವರ ಸಮಾಧಿಗಳಿಗೆ ತೆರಳಿ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ವರದಿ : **ಬಸವರಾಜ ಪೂಜಾರ್**, ಹಾವೇರಿ

ಗುಂಡೇಟು ತಗುಲಿದ ಗಾಯಾಳು ಅಬ್ದುಲ್‌ರಜಾಕ್ ಕುಟುಂಬದೊಂದಿಗೆ





ಇತ್ತೀಚೆಗೆ ನಮ್ಮನ್ನಗಲಿದ ಹಿರಿಯ ಸಂಗಾತಿ ಪಿ.ಕೆ. ಸುಬ್ರಮಣಿ ಅವರ ಕೊಡುಗೆ ಸ್ಮರಿಸುವ ಶ್ರದ್ಧಾಂಜಲಿ ಸಭೆಯು ಸಿಪಿಐ(ಎಂ) ಪಕ್ಷದ ರಾಜಾಜಿನಗರ ವಲಯ ಸಮಿತಿಯಿಂದ ಜೂನ್ 16, 2009ರಂದು ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ರಾಜ್ಯ ಮುಖಂಡರಾದ ನಿತ್ಯಾನಂದ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸ್ಥಳೀಯ ದೇವರಾಜು, ಸಿಪಿಐ ರಾಜ್ಯ ಮುಖಂಡರಾದ ಎಂ.ಸಿ.ವೆಂಕಟರಾಮ್ ಪಿ.ಕೆ.ಯವರ ಪತ್ನಿ ಧನಭಾಗ್ಯಮ್ಮ ಮುಂತಾದವರು ಹಾಜರಿದ್ದರು.



ಉಡುಪಿ-ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಲೋಕಸಭಾ ಚುನಾವಣೆ

ಬಿಜೆಪಿ ಗೆದ್ದದ್ದು ಹೇಗೆ ?

ಉಡುಪಿ-ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಕ್ಷೇತ್ರಗಳಿಂದ ಬಿಜೆಪಿ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ, ಅವರು ಗೆದ್ದದ್ದು ಹೇಗೆ ವಿವರಿಸುವ ಒಂದು ವಿಶ್ಲೇಷಣೆ

[illegible]ದಮಾರು ಶ್ರೀಪತಿ ಆಚಾರ್ಯ

ಕರ್ನಾಟಕದ ಕರಾವಳಿಯ ದಕ್ಷಿಣಕನ್ನಡ ಹಾಗೂ ಉಡುಪಿ/ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ನಿರೀಕ್ಷಿಸಿದಂತೆ ಬಿ.ಜೆ.ಪಿ. ಗೆಲುವು ಸಾಧಿಸಿದೆ. ಬಿಜೆಪಿ ನಳಿನ್‌ಕುಮಾರ್ ಕಟೀಲ್ ಎಂಬ ಅನಾಮಧೇಯ ವ್ಯಕ್ತಿಯನ್ನು ಅಭ್ಯರ್ಥಿಯಾಗಿ ನಿಲ್ಲಿಸಿರುವುದರಿಂದ ರಾಜಕೀಯದಲ್ಲಿ ಸಾಕಷ್ಟು ಅನುಭವವಿರುವ ಜನಾರ್ಧನ ಪೂಜಾರಿ ಪ್ರಯಾಸವಿಲ್ಲದೆ ಗೆದ್ದು ಬರುವರೆಂಬ ಆಸೆ ಹೊಂದಿದ್ದವರ ನಿರೀಕ್ಷೆ ಹುಸಿಯಾಗಿದೆ. ಅಂತೆಯೇ ಒಳ್ಳೆಯ ವರ್ಚಸ್ಸು ಹೊಂದಿರುವ ಜಯಪ್ರಕಾಶ ಹೆಗ್ಡೆ ಅವರು ಬಿಜೆಪಿಯ ಡಿ.ವಿ.ಸದಾನಂದಗೌಡರ ವಿರುದ್ಧ ಏನಾದರೂ [illegible]ಡ ಸಾಧಿಸಬಹುದೆಂಬ ನಿರೀಕ್ಷೆ ಹೊಂದಿದ್ದವರಿಗೆ ನಿರಾಸೆಯಾಗಿದೆ. ಈ ಎರಡೂ ಕ್ಷೇತ್ರಗಳಲ್ಲಿ ತೃತೀಯ ರಂಗದ ಅಭ್ಯರ್ಥಿಗಳಾಗಿ ಸ್ಪರ್ಧಿದಿಸಿದ್ದ ಸಿಪಿಐ(ಎಂ)ನ ಕಾಮ್ರೇಡ್ ಬಿ.ಮಾಧವ ಮತ್ತು ಸಿ.ಪಿ.ಐ.ನ ರಾಧಾಸುಂದರೇಶ್ ಅವರಿಗೂ ನಿರೀಕ್ಷಿಸಿದಷ್ಟು ಮತಗಳು ಸಿಗಲಿಲ್ಲ. ಇದಕ್ಕೆ ಕಾರಣಗಳು ಅನೇಕ ಇರಬಹುದು.

'ಪ್ರಚಂಡ' ಏನೂ ಅಲ್ಲ


ಸಂಘ ಪರಿವಾರದ ಭದ್ರಕೋಟೆ ಎಂದೆನಿಸಿರುವ ಈ ಪ್ರದೇಶದಲ್ಲಿ ಬಿಜೆಪಿ ಗಳಿಸಿದ ಯಶಸ್ಸನ್ನು ಪ್ರಚಂಡ ಗೆಲುವು ಎಂದೇನೂ ಸಂಭ್ರಮಿಸುವಂತಿಲ್ಲ. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ನಳಿನ್‌ಕುಮಾರ್ ಕಟೀಲ್ ಕಾಂಗ್ರೆಸ್‌ನ ಜನಾರ್ಧನ ಪೂಜಾರಿ ಅವರಿಗಿಂತ ಕೇವಲ 40,420 ಮತಗಳನ್ನು ಹೆಚ್ಚುವರಿಯಾಗಿ ಪಡೆದಿದ್ದರೆ ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಸದಾನಂದಗೌಡರು ಜಯಪ್ರಕಾಶ್ ಹೆಗ್ಡೆ ವಿರುದ್ಧ ಗೆಲುವು ಸಾಧಿಸಿದ ಅಂತರ ಕೇವಲ 28,018 ಮಾತ್ರ. ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಜನಾರ್ಧನ ಪೂಜಾರಿ ಗಳಿಸಿದ 4,58,965 ಮತಗಳೊಂದಿಗೆ ಸಿಪಿಐ(ಎಂ)ನ ಕಾಂ.ಬಿ.ಮಾಧವ ಮತ್ತು ಇತರ ಎಂಟು ಪಕ್ಷೇತರರು ಗಳಿಸಿದ ಮತಗಳನ್ನು ಸೇರಿಸಿದರೆ ಬಿಜೆಪಿ ಗೆ ದೊರೆತ [illegible] ಮತಗಳಿಗಿಂತ ಬಿಜೆಪಿ ಯ ವಿರುದ್ಧ ಚಲಾಯಿಸಲಾದ ಮತಗಳೇ ಹೆಚ್ಚಾಗಿವೆ (5,06,637). ಅಂತೆಯೇ ಉಡುಪಿ/ ಚಿಕ್ಕಮಗಳೂರು ಕ್ಷೇತ್ರದಲ್ಲೂ ಬಿಜೆಪಿ ಗೆ ದೊರೆತ ಮತಗಳಿಗಿಂತ (4,01,441) ಕಾಂಗ್ರೆಸ್, ತೃತೀಯರಂಗ ಹಾಗೂ ಪಕ್ಷೇತರರಿಗೆ ದೊರೆತ್ತ ಮತಗಳೇ ಹೆಚ್ಚಾಗಿವೆ. ಅಂದರೆ ಒಟ್ಟು ಚಲಾವಣೆಯಾದ 8,34,728 ಮತಗಳಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚು - 4,33,287 ಜನ ಬಿ.ಜೆ.ಪಿ. ಯ ವಿರುದ್ಧ ಮತ ನೀಡಿದ್ದಾರೆ. ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಇಂತಹ ಅಭಾಸಗಳು ಅನಿವಾರ್ಯ. ಕಳೆದ ಐದು ವರ್ಷಗಳಲ್ಲಿ ಸಂಘ ಪರಿವಾರ ನಡೆಸಿದ ಆರ್ಭಟ ಮತ್ತು ಅಟ್ಟಹಾಸಗಳಿಗೆ ಹೋಲಿಸಿದರೆ ಇಲ್ಲಿ ಬಿಜೆಪಿ ಕುಣಿದು ಕುಪ್ಪಳಿಸುವಂತಹ ಸಾಧನೆಯನ್ನೇನ್ನೂ ಮಾಡಿಲ್ಲ!

ಮಾಡಬಾರದ ಮಸಲತ್ತುಗಳು

ಇಷ್ಟಕ್ಕೂ ಕಳೆದ ಎರಡು ದಶಕಗಳಿಂದ ಸಂಘ ಪರಿವಾರ ಈ ಪ್ರದೇಶದ ಮೇಲೆ ವಿಶೇಷ ಗಮನಹರಿಸಿ ತನ್ನ ಪ್ರಭಾವ ಬೆಳೆಸಿಕೊಳ್ಳಲು ಮಾಡಬಾರದ ಮಸಲತ್ತುಗಳನ್ನೆಲ್ಲ ಮಾಡಿದೆ. ಒಂದು ಕಾಲದಲ್ಲಿ ಗಾಂಧೀವಾದಿಗಳ ನಾಡೆಂದು ಹೆಸರಾಗಿದ್ದ ಈ ಪ್ರದೇಶದಲ್ಲಿ ಗೋಡ್ಸೆವಾದವನ್ನು ಬಿತ್ತಿ ಬೆಳೆಸಲು ಸಂಘ ಪರಿವಾರ ಆಡದ ಆಟವೇ ಇಲ್ಲ. ಈ ಮೂರು ಜಿಲ್ಲೆಗಳ ನಗರ, ಪಟ್ಟಣಗಳು ಮಾತ್ರವಲ್ಲದೆ ಹಳ್ಳಿ ಹಳ್ಳಿಗಳಲ್ಲೂ 'ಹಿಂದೂ ಸಮಾಜೋತ್ಸವ' ನಡೆಸಿ ಹಿಂದುಳಿದ ವರ್ಗ ಮತ್ತು ದಲಿತ ಸಮುದಾಯಗಳ ಮಧ್ಯೆ 'ಹಿಂದುತ್ವ'ದ ಅಮಲನ್ನು ಹಬ್ಬಿಸಿದೆ. ಹಿಂದೂ ಧರ್ಮಕ್ಕೆ ಏನೋ ಅಪಾಯ ಬಂದಿದೆ.. ಹಿಂದೂಗಳಿಗೆ ಗಂಡಾಂತರ ಕಾದಿದೆ ಎಂಬ ಸುಳ್ಳು ಸುಳ್ಳೇ ಭಯವನ್ನು ಹಬ್ಬಿಸಿ ಬಡ ಹಿಂದೂಗಳನ್ನು ಅಲ್ಪಸಂಖ್ಯಾತರ ವಿರುದ್ಧ 'ಛೂ' ಬಿಟ್ಟಿದೆ. ಹಿಂದೂಗಳ ರಕ್ಷಣೆ ಸಂಘ ಪರಿವಾರದಿಂದ ಮಾತ್ರ ಸಾಧ್ಯ ಎಂಬ ಭ್ರಮೆಯನ್ನು ಮೂಡಿಸುವಲ್ಲಿ ಅದು ಸಾಕಷ್ಟು ಯಶಸ್ವಿಯಾಗಿದೆ. ಜಾತಿ ವ್ಯವಸ್ಥೆ ಮತ್ತು ಜಾತಿ ತಾರತಮ್ಯಗಳಿಂದ ಮಡುಗಟ್ಟಿರುವ ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅದು ಮೇಲುಜಾತಿ ಹಾಗೂ ಪುರೋಹಿತಶಾಹಿಯ ಪ್ರಾಬಲ್ಯವನ್ನು ಹಾಗೇ ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ. 'ನಾವೆಲ್ಲ ಹಿಂದೂ, ನಾವೆಲ್ಲ ಒಂದು ಎನ್ನುತ್ತಲೇ ಅದು ತುಳಿತಕ್ಕೊಳಗಾದ ಜನಸಮುದಾಯದ ಮೇಲೆ ಮಂಕುಬೂದಿ ಎರಚಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಇಲ್ಲಿನ ದೇವಸ್ಥಾನಗಳು, ದೈವಸ್ಥಾನಗಳು, ಜೀರ್ಣೋದ್ಧಾರ, ನಾಗಮಂಡಲ, ಬ್ರಹ್ಮಕಲಶ, ಸ್ವಾಗತಗೋಪುರ ನಿರ್ಮಾಣ, ಕೋಲ, ತಂಬಿಲ ಮುಂತಾದ ಮತಸಂಬಂಧಿ ಸಂಸ್ಥೆಗಳು ಹಾಗೂ ಆಚರಣೆಗಳನ್ನು, ಅದು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಂಡಿದೆ ಮತ್ತು ಇಂತಹ ಚಟುವಟಿಕೆಗಳು ಇನ್ನೂ ಹೆಚ್ಚಾಗುವಂತೆ ಮಾಡುತ್ತಿದೆ. ಈ ಎಲ್ಲ ಕಾರ್ಯಗಳಲ್ಲಿ ಅದು ಹಿಂದುಳಿದ ವರ್ಗ, ದಲಿತ ಹಾಗೂ ದಮನಿತ ವರ್ಗಗಳ ಯುವ ಜನತೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ. ಇಂತಹ ಹಿನ್ನೆಲೆಯಲ್ಲಿ ಸಂಘ ಪರಿವಾರ ನಡೆಸುತ್ತಿರುವ ಕೋಮುಗಲಭೆಗಳು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ, ಹಿಂಸೆ, ಹತ್ಯೆ, ಪ್ರಜಾಸತ್ತೆಯ ಮೇಲಿನ ಆಕ್ರಮಣ ಇತ್ಯಾದಿ ಯಾವುದೇ ಬರ್ಬರ ಕೃತ್ಯದ ವಿರುದ್ಧ ದನಿಯೆತ್ತದೆ ನಿಷ್ಕ್ರಿಯವಾಗಿರುವ ಕಾಂಗ್ರೆಸ್ಸಿಗೆ ಈ ಎರಡೂ ಕ್ಷೇತ್ರಗಳಲ್ಲಿ ಒಟ್ಟು 8,33,000 ಕ್ಕೂ ಮಿಕ್ಕಿ ಓಟುಗಳು ಬಂದಿರುವುದೇ ಒಂದು ಪವಾಡ.

ಕಾಂಗ್ರೆಸ್ ನೀತಿಗಲ್ಲ ಬೆಂಬಲ

1974ರ ಭೂಸುಧಾರಣಾ ಕಾನೂನಿನಿಂದ ಭೂಮಿ ಪಡೆದು ಈಗಲೂ ಕಾಂಗ್ರೆಸ್‌ಗೆ ನಿಷ್ಠರಾಗಿರುವ ಗೇಣಿ



ಒಕ್ಕಲುಗಳು ಮತ್ತು ಸಂಘ ಪರಿವಾರದ ಬರ್ಬರ ಕೃತ್ಯಗಳಿಂದ ಭಯಭೀತರಾಗಿರುವ ಮುಸ್ಲಿಂ ಕ್ರೈಸ್ತ ಹಾಗೂ ದಲಿತರ ಒಂದು ಗಣನೀಯ ವಿಭಾಗ ಕೋಮುವಾದಿ ಬಿಜೆಪಿಯನ್ನು ಸೋಲಿಸಲೆಂದೇ ಕಾಂಗ್ರೆಸ್ಸಿಗೆ ಓಟು ನೀಡಿದ್ದಾರೆಯೇ ಹೊರತು ಕಾಂಗ್ರೆಸ್‌ನ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಮೃದು ಹಿಂದುತ್ವದ ಧೋರಣೆಗಳನ್ನು ಬೆಂಬಲಿಸಿ ಅಲ್ಲ. ಉಡುಪಿ, ಚಿಕ್ಕಮಗಳೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಗಣನೀಯ ಪ್ರಮಾಣದ ಮತಗಳನ್ನು ಪಡೆದಿದ್ದರೆ ಅದಕ್ಕೆ ಹೆಗ್ಡೆ ಅವರ ವರ್ಚಸ್ಸೇ ಕಾರಣ ಹೊರತು ಕಾಂಗ್ರೆಸ್‌ನ ವರ್ಚಸ್ಸು ಅಲ್ಲ.

ನಿದಿರಾ ಕಾಂಗ್ರೆಸ್ ಮುಖಂಡರು

ಈ ಪ್ರದೇಶದಲ್ಲಿ ಯಾರಾದರೂ ಕಾಂಗ್ರೆಸ್‌ಗಾಗಿ ಏನಾದರೂ ಕೆಲಸ ಮಾಡಿದ್ದರೆ ಅದು ಪ್ರಮೋದ್ ಮಧ್ವರಾಜ್ ಹಾಗೂ ಮನೋರಮಾ ಮಧ್ವರಾಜ್ ಮಾತ್ರ. ಉಳಿದಂತೆ ಕಾಂಗ್ರೆಸ್‌ನ ಎಲ್ಲ ಘಟಾನುಘಟಿಗಳೂ ಚುನಾವಣೆಯ ಸಮಯದಲ್ಲಿ ನಿದ್ರೆಮಾಡಿದ್ದೇ ಹೆಚ್ಚು. ಕಾಂಗ್ರೆಸ್‌ಗಾಗಿ ಕೆಲಸ ಮಾಡಲು ಕಾರ್ಯಕರ್ತರೂ ಇರಲಿಲ್ಲ, ಇರುವ ಕಾರ್ಯಕರ್ತರಿಗೂ ಪ್ರತಿಷ್ಠಿತ ನಾಯಕರಿಗೂ ನಡುವೆ ಸಂಪರ್ಕವೂ ಇರಲಿಲ್ಲ. ಎಷ್ಟೋ ಕಡೆ ಮತದಾರರ ಮನೆಗಳಿಗೆ ಕಾಂಗ್ರೆಸ್‌ನವರು ಹೋಗಲೇ ಇಲ್ಲ. ಕಾಂಗ್ರೆಸ್‌ಗೆ ಹೋಲಿಸಿದರೆ ಈ ಪ್ರದೇಶದಲ್ಲಿ ದುರ್ಬಲವಾಗಿರುವ ಎಡಪಕ್ಷಗಳಿಗಂತೂ ಇಂತಹ ಕೆಲಸ ಮಾಡುವ ಸಾಮರ್ಥ್ಯ ಇರಲಿಲ್ಲ ನಿಜ. ಆದರೆ ಕಾಂಗ್ರೆಸ್‌ಗೆ ಅಂತಹ ಸಾಮರ್ಥ್ಯ ಇದ್ದೂ ಮಾಡಲಿಲ್ಲ. ಅದರ ನಾಯಕ ಮಣಿಗಳು ಲೋಕಸಭಾ ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ.

ಜಾತಿ ನಿರ್ಣಾಯಕವಲ್ಲ

ಸಂಘ ಪರಿವಾರ ಈ ಚುನಾವಣೆಗಾಗಿ ಕಳೆದ ಐದು ವರ್ಷಗಳಿಂದ ತಯಾರಿ ನಡೆಸಿದೆ. ಅಧಿಕ ಸಂಖ್ಯೆಯಲ್ಲಿ ಹೊಸ ಮತದಾರರನ್ನು ಮತದಾರ ಪಟ್ಟಿಯಲ್ಲಿ ಸೇರಿಸಿಕೊಂಡಿದೆ. ಅಲ್ಪಸಂಖ್ಯಾತರನ್ನೂ ಕಾಂಗ್ರೆಸ್ ಬೆಂಬಲಿಗರನ್ನೂ ಪಟ್ಟಿಯಿಂದ ಕಿತ್ತುಹಾಕಲು ಅಧಿಕಾರಿಗಳ ಜೊತೆ ಶಾಮೀಲಾಗಿದೆ ಎಂಬ ಆರೋಪವೂ ಇದೆ. ಮತದಾನದ ದಿನ ಸಂಘ ಪರಿವಾರದ ಕಾರ್ಯಕರ್ತರು ಮನೆಮನೆಗೆ ಹೋಗಿ ಮತದಾನಕ್ಕೆ ಬರುವಂತೆ ಜನರನ್ನು ಪುಸಲಾಯಿಸಿ ಓಟು ಪಡೆದುಕೊಳ್ಳುವಲ್ಲಿ 'ಯಶಸ್ವಿಯಾಗಿದ್ದಾರೆ. ಕಾಂಗ್ರೆಸ್‌ನವರು ಇಂತಹದೇನನ್ನೂ ಮಾಡಲಿಲ್ಲ.

ಕರಾವಳಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಈ ಎರಡೂ ಕ್ಷೇತ್ರಗಳಲ್ಲಿ ಜಾತಿಯ ಆಧಾರದಲ್ಲಿ ಮತದಾರರನ್ನು ವಿಂಗಡಿಸಿ ಇಂತಿಂಥವರು ಗೆಲ್ಲಬಹುದು ಎಂಬ ಊಹಾಪೋಹಗಳನ್ನು ಮಾಧ್ಯಮಗಳು ನಡೆಸುತ್ತಿವೆ. ಒಂದು ವೇಳೆ ಹಾಗಿದ್ದರೆ ಹಿಂದೂಗಳೇ ಅಧಿಕ ಸಂಖ್ಯೆಯಲ್ಲಿರುವ ಅಂದಿನ ಉಡುಪಿ ಲೋಕಸಭಾ ಕ್ಷೇತ್ರದಲ್ಲಿ ರೋಮನ್ ಕ್ಯಾಥೋಲಿಕರಾದ ಆಸ್ಕರ್ ಫೆರ್ನಾಂಡಿಸ್ ನಿರಂತರ ಐದು ಬಾರಿ ಗೆದ್ದು ಬರುತ್ತಿರಲಿಲ್ಲ. 1977 ರಿಂದ 1992 ರವರೆಗೂ ಕಾಂಗ್ರೆಸ್ ಮಂಗಳೂರು ಕ್ಷೇತ್ರದಿಂದ ಗೆದ್ದುಬಂದದ್ದು ಪ್ರಧಾನವಾಗಿ ಕಾಂಗ್ರೆಸ್‌ಗೆ ನಿಷ್ಠರಾಗಿದ್ದ ಗೇಣಿದಾರರು, ದಲಿತರು, ಅಲ್ಪಸಂಖ್ಯಾತರು ಮತ್ತು ಪ್ರಗತಿಶೀಲರ ಮತಗಳಿಂದಾಗಿಯೇ ಹೊರತು ಅವರ ಜಾತಿಬಾಂಧವರ ಓಟಿನಿಂದ ಮಾತ್ರವಲ್ಲ. ಇದೀಗ ನಳಿನ್‌ಕುಮಾರ್ ಕಟೀಲ್ ಎಂಬ ಬಂಟ ಸಮುದಾಯಕ್ಕೆ ಸೇರಿದ ವ್ಯಕ್ತಿ ಗೆದ್ದಿರುವುದೂ ಬಂಟ ಸಮುದಾಯದವರ ಓಟಿನಿಂದ ಅಲ್ಲ, ಅದು ಹಿಂದುತ್ವವಾದದ ಬೆಂಬಲಿಗರಿಂದ. ಕಳೆದ ಇಪ್ಪತ್ತು ವರ್ಷಗಳಲ್ಲಿ ಸಂಘ ಪರಿವಾರದ ಕೋಮುವಾದಿ ಚಟುವಟಿಕೆಗಳಲ್ಲಿ ತೊಡಗಿ ಜೈಲು ಸೇರಿದವರು, ಪೆಟ್ಟು ತಿಂದವರು, ಹತ್ಯೆಯಾದವರು ಮುಂತಾದವರಲ್ಲಿ ಬಿಲ್ಲವ ಸಮುದಾಯಕ್ಕೆ ಸೇರಿದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇವರೆಲ್ಲ ಏಕಾಏಕಿ ಸಂಘ ಪರಿವಾರವನ್ನು ಬಿಟ್ಟು ಬಿಲ್ಲವರು ಎಂಬ ಒಂದೇ ಕಾರಣಕ್ಕೆ ಜನಾರ್ಧನ ಪೂಜಾರಿ ಅವರಿಗೆ ಓಟು ಕೊಡುತ್ತಾರೆಯೇ? ಇದೊಂದು ಮಾಧ್ಯಮದವರು ಹುಟ್ಟಿಸಿದ ಪೊಳ್ಳು ವಾದಸರಣಿ!

ದಕ್ಷಿಣ ಕನ್ನಡ: ಅಂಗನವಾಡಿಗಳಲ್ಲಿ ಕಳಪೆ ಆಹಾರ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೇಜವಾಬ್ದಾರಿ

ಡಿವೈಎಫ್ಐ ಪ್ರತಿಭಟನೆ



ಸಂಜಯ

ಯಾವುದೇ ಆಹಾರ, ಔಷಧಿಗಳನ್ನು ಖರೀದಿಸುವಾಗ ಅದರ ಬಳಕೆ ಅವಧಿಯನ್ನು ಕಡ್ಡಾಯವಾಗಿ ಪರಿಶೀಲಿಸಿ, ಅವದಿ ಮೀರಿದ ವಸ್ತುಗಳನ್ನು ಮಾರಾಟ ಮಾಡುವ ಮಳಿಗೆ, ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿ ಎಂದು ಜನತೆಗೆ ಮನವಿ ಮಾಡುವ ಸರ್ಕಾರ ಅವಧಿ ಮೀರಿದ ಆಹಾರ, ಔಷಧಿಗಳನ್ನು ಮಾರಾಟ ಮಾಡಿದರೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಎಚ್ಚರಿಸುತ್ತದೆ. ಆದರೆ ಅದೇ ಸರ್ಕಾರದ ಅಡಿಯಲ್ಲಿ ಕೆಲಸ ನಿರ್ವಹಿಸುವ ಇಲಾಖೆಗಳು ಕಳಪೆ ಗುಣಮಟ್ಟದ, ಅವಧಿ ಮೀರಿದ ಆಹಾರ ವಸ್ತುಗಳನ್ನು ವಿತರಿಸುವುದು, ಅಂತಹ ಪ್ರಕರಣಗಳನ್ನು ಬಯಲಿಗೆಳೆದವರನ್ನೇ ಶಿಕ್ಷಿಸಲು ಕ್ರಮ ಕೈಗೊಳ್ಳುವುದು ಮಾತ್ರ ವ್ಯವಸ್ಥೆಯ ದುರಂತ.

ಸುರಳಿ ಬಿಚ್ಚ ತೊಡಗಿತು.

ಮಂಗಳೂರಿನ ಅಂಗರಗುಂಡಿ ಅಂಗನವಾಡಿ ಕೇಂದ್ರದಲ್ಲಿ ಅವಧಿ ಮೀರಿದ, ಕಳಪೆ ಗುಣಮಟ್ಟದ ಪೌಷ್ಟಿಕ ಆಹಾರವನ್ನು ಡಿವೈಎಫ್ಐ ಕಾರ್ಯಕರ್ತರು ಪತ್ತೆ ಹಚ್ಚಿದಾಗ ಆರಂಭದಲ್ಲಿ ಇದೊಂದು ಆಕಸ್ಮಿಕ ಆಚಾತುರ್ಯದಿಂದ ಆದ ಬಿಡಿ ಪ್ರಕರಣ ಎಂದು ತಿಳಿಯಲಾಗಿತ್ತು. ಹಾಗೆ ಪತ್ತೆಯಾದ ಪೌಷ್ಟಿಕ ಆಹಾರದ ಪೊಟ್ಟಣಗಳನ್ನು ಹೆಚ್ಚುವರಿ ಜಿಲ್ಲಾಧಿಕಾರಿಗಳ ಮುಂದೆ ಮಾಧ್ಯಮ ಪ್ರತಿನಿಧಿಗಳ ಸಮ್ಮುಖದಲ್ಲಿ ಹಾಜರುಪಡಿಸಿದ ನಂತರ. ಒಟ್ಟು ಹಗರಣ ಒಂದೊಂದಾಗಿ ಸುರಳಿ ಬಿಚ್ಚತೊಡಗಿತು. ಡಿವೈಎಫ್ಐ ಕಾರ್ಯಕರ್ತರು ಮತ್ತು ಪತ್ರಕರ್ತರ ಪ್ರಶ್ನೆಗಳ ತೀಕ್ಷ್ಣತೆಯಿಂದಾಗಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಹೆಚ್ಚುವರಿ ಜಿಲ್ಲಾಧಿಕಾರಿಯವರು ತಕ್ಷಣವೇ ನಾಗರಿಕ ಪೂರೈಕೆ ಇಲಾಖೆ ಹಾಗೂ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಕಛೇರಿಗೆ ಕರೆಯಿಸಿ ವಿವರಣೆ ಕೇಳಿ ಗೋದಾಮುಗಳನ್ನು ಪರಿಶೀಲಿಸಿ ವರದಿ ನೀಡಲು ಆದೇಶಿಸಿದರು. ಹಾಗೆ ಅಧಿಕಾರಿಗಳ ಜೊತೆ ಗೋದಾಮುಗಳಿಗೆ ತೆರಳಿದ ಪತ್ರಕರ್ತರು ಮತ್ತು ಡಿವೈಎಫ್ಐ ಕಾರ್ಯಕರ್ತರಿಗೆ ಅಘಾತಕಾರಿ ಪರಿಸ್ಥಿತಿ ಗೋದಾಮುಗಳಲ್ಲಿ ಗೋಚರಿಸಿತು. ಗೋದಾಮುಗಳಲ್ಲಿ ಅನಾರೋಗ್ಯಕರ, ಗಲೀಜು ಪರಿಸರದಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ವಿತರಿಸುವ ಪೌಷ್ಟಿಕ ಆಹಾರವನ್ನು ಶೇಖರಿಸಿ ಇಡಲಾಗಿತ್ತು. ಆಹಾರ ಇಲಾಖೆಯ ಯಾವುದೇ ಮಾರ್ಗಸೂಚಿಗಳನ್ನು ಅಲ್ಲಿ ಪಾಲಿಸಿರಲಿಲ್ಲ. ಅಂಗನವಾಡಿಗಳಿಗೆ ವಿತರಿಸುವ ನಾಲ್ಕು ಸಾವಿರ ಕೆಜಿ ಅಕ್ಕಿಯನ್ನು ಒದ್ದೆ ನೆಲದಲ್ಲಿ ರಾಶಿ ಹಾಕಲಾಗಿತ್ತು. ಆ ಅಕ್ಕಿಯಲ್ಲಿ ಹುಳುಗಳು ಹರಿದಾಡುತ್ತಿದ್ದವು. ಇಂತಹ ಪರಿಸ್ಥಿತಿಯ ಬಗ್ಗೆ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ನೀಡಲಾಗದೆ ಅಧಿಕಾರಿಗಳು ತತ್ತರಿಸಿ ಹೋಗಿದ್ದರು.

ಮತ್ತಷ್ಟು....

ಅದೇ ದಿವಸ ಸಾಯಂಕಾಲ ಮಂಗಳೂರಿನ ಕೆಲವು ಅಂಗನವಾಡಿ ಕೇಂದ್ರಗಳಿಗೆ ಡಿವೈಎಫ್ಐ ಕಾರ್ಯಕರ್ತರು ಮತ್ತೆ ಭೇಟಿ ನೀಡಿದಾಗ ಅಲ್ಲೆಲ್ಲಾ ಅವಧಿ ಮೀರಿದ ಪೌಷ್ಟಿಕ ಆಹಾರಗಳು ಪತ್ತೆಯಾದವು. ಒಟ್ಟು ಇಡೀ ಪ್ರಕರಣವನ್ನು ಮಾಧ್ಯಮಗಳು ಆದ್ಯತೆಯಲ್ಲಿ ಪ್ರಚಾರ ಮಾಡಿದವು. ಜನ ಅಧಿಕಾರಿಗಳ ಬೇಜವಾಬ್ದಾರಿತನ, ಭ್ರಷ್ಟಾಚಾರ, ಕಮಿಷನ್ ದಂಧೆಯ ಬಗ್ಗೆ ಅಸಹ್ಯ ವ್ಯಕ್ತಪಡಿಸಿದರು. ಜಿಲ್ಲೆಯಿಡೀ ಈ ಪ್ರಕರಣ ಸಂಚಲನ ಸೃಷ್ಟಿಸಿದರೂ ಇಡೀ ಹಗರಣದ ರೂವಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶಕುಂತಲಾ ಮಾತ್ರ ತಪ್ಪುಗಳನ್ನು ಸರಿಪಡಿಸುವುದರ ಬದಲಿಗೆ ಪ್ರಕರಣ ಬಯಲಿಗೆಳೆದ ಡಿವೈಎಫ್ಐ ಕಾರ್ಯಕರ್ತರ ಮೇಲೆ ಕಿಡಿಕಾರತೊಡಗಿದರು. ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದ ಗೌಡರಿಗೆ ಬಹಳ ಆತ್ಮೀಯರಾಗಿರುವ ಶಕುಂತಳಾ ತನಗಿರುವ ರಾಜಕೀಯ ಬಲದಿಂದಲೇ ಎಲ್ಲವನ್ನು ನಿಬಾಯಿಸಬಲ್ಲೆ ಎಂಬ ಅಹಂಕಾರದಿಂದ ವರ್ತಿಸತೊಡಗಿದರು. ಶಕುಂತಲಾ ಮತ್ತು ಅಧಿಕಾರಿಗಳ ವರ್ತನೆಯಿಂದ ಅನುಮಾನಗೊಂಡ ಡಿವೈಎಫ್ಐ ಕಾರ್ಯಕರ್ತರು ಮತ್ತು ಪತ್ರಕರ್ತರ ಜಂಟಿ ತಂಡ ಎರಡು ದಿನಗಳ ನಂತರ ಮಂಗಳೂರು, ಪುತ್ತೂರು, ಬೆಳ್ತಂಗಡಿಯ ವಿವಿದೆಡೆ ಅಂಗನವಾಡಿಗಳಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಅವಲೋಕಿಸಿತು. ಎಲ್ಲೆಡೆ ಅವಧಿ ಮೀರಿದ ಪೌಷ್ಟಿಕ ಆಹಾರಗಳೇ ಪತ್ತೆಯಾದವು.

ಬೇಜವಬ್ದಾರಿ ಹೇಳಿಕೆ-'ಬುದ್ಧಿಕಲಿಸುವ' ಯತ್ನ

ಮಾಧ್ಯಮಗಳು ಮತ್ತು ಜನತೆ ಜಿಲ್ಲಾಡಳಿದ ಈ ರೀತಿಯ ಹೊಣೆಗೇಡಿತನವನ್ನು ವ್ಯಾಪಕವಾಗಿ ಖಂಡಿಸತೊಡಗಿದಾಗ ಅನಿವಾರ್ಯವಾಗಿ ಪತ್ರಿಕಾಗೋಷ್ಠಿ ಕರೆದ ಜಿಲ್ಲಾಧಿಕಾರಿ ಪೊನ್ನುರಾಜ್ ಕರ್ತವ್ಯ ಲೋಪವಾಗಿರುವುದನ್ನು ಒಪ್ಪಿಕೊಂಡು ತನಿಖೆಗಾಗಿ ಐದು ತಂಡಗಳನ್ನು ರಚಿಸಿರುವುದಾಗಿ ಘೋಷಿಸಿದರು. ಹಾಗೂ ಕಡುಭ್ರಷ್ಟ ಶಕುಂತಾಲರವರನ್ನು ರಕ್ಷಿಸಲಿಕ್ಕಾಗಿ ಅವಧಿ ಮೀರಿದ ಆಹಾರದ ಬಳಕೆಯಿಂದ ಆರೋಗ್ಯಕ್ಕೆ ಯಾವುದೇ ತೊಂದರೆ ಇಲ್ಲ ಎಂಬ ಬೇಜವಾಬ್ದಾರಿ ಹೇಳಿಕೆ ನೀಡಿ ಜನತೆಯ ಆಕ್ರೋಶಕ್ಕೆ ತುತ್ತಾದರು. ಜಿಲ್ಲಾಡಳಿದ ಈ ರೀತಿಯ ವರ್ತನೆಯಿಂದ ಜನತೆ ತಾವೇ ಸ್ವಯಂ ಪ್ರೇರಣೆಯಿಂದ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಅಂಗನವಾಡಿಗಳಿಗೆ ಭೇಟಿಕೊಟ್ಟು ಅವಧಿ ಮೀರಿದ ಆಹಾರ ಪದಾರ್ಥಗಳನ್ನು ಪಚ್ಚೆ ಹಚ್ಚತೊಡಗಿದರು.


ಇದರಿಂದಲೂ ಪಾಠ ಕಲಿಯದ ಜಿಲ್ಲಾಡಳಿತ ಹಾಗೂ ಶಕುಂತಲಾ ತಮ್ಮ ತಪ್ಪುಗಳನ್ನು ಬಯಲಿಗೆಳೆದು ಸಾರ್ವಜನಿಕವಾಗಿ ಮಾನ ಕಳೆಯುತ್ತಿರುವ ಡಿವೈಎಫ್ಐ ಮತ್ತು ಸಾಮಾಜಿಕ ಕಾರ್ಯಕರ್ತರ ಬುದ್ಧಿ ಕಲಿಸಲು ನಿರ್ಧರಿಸಿ ಎಲ್ಲೆಡೆ ಡಿವೈಎಫ್ಐ ಮತ್ತು ಸಾಮಾಜಿಕ ಕಾರ್ಯಕರ್ತರ ಮೇಲೆ ಪೊಲೀಸ್ ಠಾಣೆಗಳಲ್ಲಿ ಅಕ್ರಮ ಪ್ರವೇಶ, ಕರ್ತವ್ಯಕ್ಕೆ ಅಡ್ಡಿ ಮೊದಲಾದ ಸುಳ್ಳು ಮೊಕದ್ದಮೆಗಳನ್ನು ಹಾಕತೊಡಗಿದರು. ಒಂದೆಡೆ ಪತ್ರಕರ್ತರ ಮುಂದೆಯೇ ಡಿವೈಎಫ್ಐ ಕಾರ್ಯಾಚರಣೆಯನ್ನು ಹೊಗಳಿದ್ದ ಜಿಲ್ಲಾಡಳಿತ ತಪ್ಪಿತಸ್ತರ ಮೇಲೆ ಕ್ರಮಕೈಗೊಳ್ಳದೇ ಪ್ರಕರಣ ಬಯಲಿಗೆಳೆದವರ ಮೇಲೆಯೇ ಮೊಕದ್ದಮೆ ದಾಖಲಿಸುತ್ತಿರುವುದು ಜಿಲ್ಲೆಯಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಜಿಲ್ಲಾಡಳಿತದ ಈ ಪ್ರಜಾಪ್ರಭುತ್ವ ವಿರೋಧಿ ಕೃತ್ಯವನ್ನು ಖಂಡಿಸಿ ಅಂಗನವಾಡಿ ಕಾರ್ಯಕರ್ತರನ್ನು ಬಲಿಪಶುವನ್ನಾಗಿಸಿ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರ ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿರುವ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ ಉಪನಿರ್ದೇಶಕಿ ಶಕುಂತಲಾ ಮತ್ತವರ ಅಧೀನ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಹಗರಣ ಬಯಲಿಗೆಳೆದವರ ಮೇಲೆ ಹೂಡಲಾಗಿರುವ ಸುಳ್ಳು ಮೊಕದ್ದಮೆಗಳನ್ನು ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿ ಡಿವೈಎಫ್ಐ ಜೂನ್ 22 ರಂದು ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಛೇರಿಗೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಪ್ರತಿಭಟನೆಗೆ ಜನತೆಯಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿರುವುದು ಭ್ರಷ್ಟ ಅಧಿಕಾರಿಗಳಲ್ಲಿ ಹಾಗೂ ಅವರ ಬೆಂಬಲಿಗ ಅಧಿಕಾರಸ್ತ ರಾಜಕಾರಣಿಗಳಲ್ಲಿ ನಡುಕ ಹುಟ್ಟಿಸಿದೆ.

ಧನ ಸಾಗಾಟದ ವಿರುದ್ಧ ಕಾನೂನು ಬಾಹಿರ ಹಿಂಸಾತ್ಮಕ ಕಾರ್ಯಾಚರಣೆ, ವಿಭಿನ್ನ ಧರ್ಮದ ಗಂಡು ಹೆಣ್ಣು ಪರಸ್ಪರ ಮಾತನಾಡಿದರೆ ಬಹಿರಂಗ ಹಲ್ಲೆ, ಪಬ್ ದಾಳಿ ಹೀಗೆ ಭಜರಂಗಿ ಸಾಂಸತಿಕ ಪೊಲೀಸರ ದಾಂಧಲೆ ಮತ್ತು ಅವರಿಗೆ ಪೊಲೀಸರ ಬೆಂಬಲದಂತಹ ಕಾರ್ಯಾಚರಣೆಯನ್ನು ಮಾತ್ರಕಂಡಿದ್ದ ಕರಾವಳಿಯ ಜನತೆಗೆ ಅವಧಿ ಮೀರಿದ ಪೌಷ್ಟಿಕ ಆಹಾರ ಪತ್ತೆ ಹಚ್ಚಿ, ವ್ಯವಸ್ಥೆಯ ಹುಳುಕುಗಳನ್ನು ಎತ್ತಿ ತೋರಿಸುವ ಜಬಾಬ್ದಾರಿಯುತ ಕಾನೂನು ಬದ್ಧ ಕಾರ್ಯಾಚರಣೆ ಹಾಗೂ ಕಾರ್ಯಾಚರಣೆಯ ವಿರುದ್ಧ ಪೊಲೀಸ್ ದಬ್ಬಾಳಿಕೆ ಹೊಸ ಆಲೋಚನೆಗಳಿಗೆ ಅವಕಾಶ ಒದಗಿಸಿದೆ ಹಾಗೂ ಚರ್ಚೆಗೆ ಕಾರಣವಾಗಿದೆ.



ಅಕ್ಕಿ-ತೇವ ಭರಿತ ನೆಲದಲ್ಲಿ



ಮುಗ್ಗಲು ಹಿಡಿದ ಅಕ್ಕಿ



ಡಿವೈಎಫ್ಐ ಮುಖಂಡ ಮುನೀರ್ ಕಾಟಪಳ್ಳಿ ಮನವಿ ನೀಡುತ್ತಿರುವುದು

ಚಂದಾದಾರರಿಗೆ ಮನವಿ

ದಯಮಾಡಿ ಪತ್ರಿಕೆಯ ಚಂದಾ ಅವಧಿ ಮುಗಿಯುವ ಮೊದಲೇ ನವೀಕರಣ ಮಾಡಿ. ತಮಗೆ ತಲುಪುವ ಪತ್ರಿಕೆಯಲ್ಲಿ ವಿಳಾಸದ ಮೇಲೆ ಪತ್ರಿಕೆ ಕಳಿಸಲಾರಂಭಿಸಿದ ದಿನಾಂಕ - ಮುಗಿಯುವ ದಿನಾಂಕ ಎರಡನ್ನೂ ನಮೂದಿಸಲಾಗಿರುತ್ತದೆ ಗಮನಿಸಿ. ಮುಂಚಿತವಾಗಿ ನವೀಕರಿಸಿ.

ಚಂದಾ ದರ ವಿವರ

ವಾರ್ಷಿಕ	: 250.00 ರೂ.
ದ್ವೈ ವಾರ್ಷಿಕ	: 500.00 ರೂ.
ಪಂಚವಾರ್ಷಿಕ	: 1250.00 ರೂ.

ಈ ವಿಚಾರವಾಗಿ ನೀವು ಸಂಪರ್ಕಿಸ ಬೇಕಾದವರು

ವೀರಣ್ಣ ಕಲ್ಲಾನಿ : 9379268990

(ಗಮನಿಸಿ: ದೂರವಾಣಿ ಸಂಖ್ಯೆ ಬದಲಾಗಿದೆ)

ಪಶ್ಚಿಮ ಬಂಗಾಳ

ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸಲು ಮಾವೋವಾದಿ ಹಿಂಸಾಚಾರ

ಲಾಲ್‌ಗಡ್‌ನ ಹಿಂಸಾಕಾಂಡದ ಹಿಂದೆ ಭಯೋತ್ಪಾದನೆಯ ರಾಜಕೀಯ ಅಡಗಿದೆ. ಸಂವಿಧಾನದ ಅಡಿಯಲ್ಲಿ ಮಂತ್ರಿಗಳಾಗಿ ಕರ್ತವ್ಯ ನೆರವೇರಿಸುವ ಪ್ರತಿಜ್ಞೆ ಕೈಗೊಂಡವರಿಗೆ, ಮಾವೋವಾದಿ ಹಿಂಸಾಚಾರ ಅತ್ಯಂತ ದೊಡ್ಡ ಬೆದರಿಕೆ ಎಂದು ಸಾರಿದ ಪ್ರಧಾನ ಮಂತ್ರಿಗಳ ಪಕ್ಷದವರಿಗೂ ಈ ಬಗ್ಗೆ ಏನೂ ಮುಜುಗರವಾಗುತ್ತಿಲ್ಲ ಎಂಬುದು ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅತ್ಯಂತ ಖೇದದ ಸಂಗತಿ.

ಕಳೆದ ವಾರದಿಂದ ಪಶ್ಚಿಮ ಬಂಗಾಳದ ಪಶ್ಚಿಮ ಮಿದ್ನಾಪುರ ಜಿಲ್ಲೆಯ ಲಾಲ್‌ಗಡ್ ಬಹಳ ಸುದ್ದಿಯಲ್ಲಿದೆ. ಮಾವೋವಾದಿಗಳೆಂದು ಹೇಳಿಕೊಳ್ಳುವವರ ಧ್ವಂಸಕಾರ್ಯಗಳು ಟಿವಿಗಳಲ್ಲಿ 'ರಾರಾಜಿಸಿ'ದವು. ಮೂರೇ ದಿನಗಳಲ್ಲಿ ಮಾವೋ ವಾದಿಗಳು 15 ಸಿಪಿಐ(ಎಂ) ಮುಖಂಡರನ್ನು ಕೊಲೆ ಮಾಡಿದ್ದಾರೆ, ಹಲವಾರು ಸಿಪಿಐ(ಎಂ) ಕಚೇರಿಗಳನ್ನು ಸುಟ್ಟು ಭಸ್ಮ ಮಾಡಿದ್ದಾರೆ. ಈ ಎಲ್ಲಾ ಹಿಂಸಾ ಕಾಂಡಗಳಲ್ಲಿ ಮಾವೋವಾದಿಗಳು ನಿಸ್ಸಹಾಯಕ ಬುಡಕಟ್ಟು ಜನಗಳನ್ನು ಬೆದರಿಸಿ ಅವರನ್ನು ದಾಳಗಳಾಗಿ ಬಳಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಅತ್ತ ಈ ಹಿಂಸಾಕೃತ್ಯಗಳನ್ನು ಖಂಡಿಸಲು ತುಟಿ ಪಿಟಕ್ಕೆನ್ನದ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್‌ನ ಮುಖಂಡರು ಹಿಂಸಾಚಾರಗಳನ್ನು ನಿಲ್ಲಿಸಲು ಎಡರಂಗ ಸರಕಾರ ವಿಫಲವಾಗಿರುವುದರಿಂದ ಅಧಿಕಾರದಿಂದ ಇಳಿಯಲಿ ಎನ್ನುತ್ತಿದ್ದಾರೆ.

ಆದರೆ ಈ ಮಾವೋವಾದಿಗಳೆನ್ನುವವರು ಒಂದು ಕಮ್ಯುನಿಸ್ಟ್-ವಿರೋಧಿ 'ಕಾಮನಬಿಲ್ಲು' ಕೂಟದ ಭಾಗವೆಂಬುದು ಬಟಾಬಯಲಾಗಿರುವ ಸಂಗತಿ. ತೃಣಮೂಲ ಕಾಂಗ್ರೆಸು ಈ ಕೂಟದ ನೇತಾರ. ಹಿಂದಿನ ವಾರ ಖೆಜುರಿಯಲ್ಲಿ ತೃಣಮೂಲ ಕಾಂಗ್ರೆಸಿನ ಕಾರ್ಯಕರ್ತರು ಇಂತಹುದೇ ಹಿಂಸಾಕೃತ್ಯಗಳಲ್ಲಿ ತೊಡಗಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಹಿಂದೆ ನಂದಿಗ್ರಾಮದಲ್ಲಿ ಈ ಕಮ್ಯುನಿಸ್ಟ್-ವಿರೋಧಿ ಕೂಟ ಹರಿಯಬಿಟ್ಟಿದ್ದ ಹಿಂಸಾಚಾರ ಮಾವೋವಾದಿಗಳು ನೆಲೆಯೂರಲು ಸಹಾಯ ಮಾಡಿತು. ಅಲ್ಲಿ ಮಾವೋವಾದಿ ಗಳು ತೃಣಮೂಲ ಮಾವುಟದ ಹಿಂದೆ ಕಾರ್ಯ ಪ್ರವೃತ್ತರಾಗಿದ್ದರೆ, ಲಾಲ್‌ಗಡ್‌ನಲ್ಲಿ ತೃಣಮೂಲ ಕಾಂಗ್ರೆಸ್ ಮಾವೋವಾದಿ ಹಿಂಸಾಚಾರಗಳಿಗೆ ಬಹಿರಂಗವಾಗಿ ಸಹಾಯ ಮಾಡುತ್ತಿದೆ.

ದುಷ್ಟ ಚಟುವಟಿಕೆಗಳಿಗಾಗಿ 'ವಿಮೋಚಿತ ವಲಯ'

ಈ ಹಿಂಸಾಚಾರಗಳು ನಡೆಯುತ್ತಿರುವುದು 'ಪೋಲೀಸ್ ಅತ್ಯಾಚಾರ್ ಬಿರೋಧ್ ಜನಗಣ ಕಮಿಟಿ' ಎಂಬ ಸಂಘಟನೆಯ ಹೆಸರಿನಲ್ಲಿ. ಛತ್ರಧರ್ ಮಹತೋ ಎಂಬಾತ ಇದರ ಮುಖಂಡ. ಈತ ಇತ್ತೀಚಿನ ವರೆಗೆ ತೃಣಮೂಲ ಕಾಂಗ್ರೆಸಿನಲ್ಲಿದ್ದ ಎಂಬುದನ್ನು ಗಮನಿಸಬೇಕು. ಈತನ ಸೋದರ ಸುಶೋಧರ್ ಮಹತೋ ಕಳೆದ ನವಂಬರಿನಲ್ಲಿ ನಡೆದ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯರ ಹತ್ಯೆಯ ಸಂಚಿನಲ್ಲಿ ಪ್ರಮುಖ ಆರೋಪಿ. ಇದಕ್ಕಾಗಿ ನೆಲದಡಿ ನೆಟ್ಟಿದ್ದ ಸ್ಫೋಟಕ ಸ್ಫೋಟಗೊಂಡದ್ದು ಲಾಲ್‌ಗಡ್‌ನಿಂದ 40 ಕಿ.ಮೀ. ದೂರದ ಸಲ್ಬೊನಿ ಎಂಬಲ್ಲಿ.

ಜೂನ್ 16ರಿಂದ ಆರಂಭವಾದ ಈ ಹಿಂಸಾಚಾರಗಳನ್ನು ನಡೆಸಿದ ಜನಜಂಗುಳಿಯಲ್ಲಿ ಸ್ಥಳೀಯ ತೃಣಮೂಲ ಕಾಂಗ್ರೆಸ್ ಮುಖಂಡರೂ ಸೇರಿದ್ದರು. 'ಇದೀಗ ಕಮ್ಯುನಿಸ್ಟರು ಮತ್ತು ಉಳಿದವರೆಲ್ಲರ ನಡುವೆ' ಎಂದು ಅವರಲ್ಲೊಬ್ಬ ಹೇಳಿರುವುದಾಗಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವೈಯಕ್ತಿಕವಾಗಿ ಅಲ್ಲಿ ಕಾಣಿಸಿಕೊಳ್ಳಲಿಲ್ಲ, ಆದರೆ ಹಿಂಸಾಚಾರ 'ಸಂಘಟಿಸಿದವರ ಆದೇಶ ದಂತೆ' ಆತ ತನ್ನ ಸಂಬಂಧಿಗಳನ್ನು ಕಳಿಸಿದ್ದ ಎಂದು ವರದಿಯಾಗಿದೆ.

ಹಿಂಸಾಚಾರದಲ್ಲಿ ಸತ್ತವರ ಹೆಣಗಳನ್ನು ಅವರ



ಸಿಪಿಐ(ಎಂ) ಕಛೇರಿ ಮೇಲೆ ಧಾಳಿ

ಸಂಬಂಧಿಕರು ಒಯ್ದು ಅವರ ಅಂತ್ಯಕ್ರಿಯೆಗಳನ್ನು ಮಾಡಲು ಕೂಡಾ ಮಾವೋವಾದಿಗಳು ಬಿಡಲಿಲ್ಲ ಎಂದು ಮಾಧ್ಯಮಗಳು ವರದಿಮಾಡಿವೆ. ಭದ್ರತಾ ಪಡೆಗಳು ಮತ್ತು ಪೋಲೀಸರು ಆ ಪ್ರದೇಶಕ್ಕೆ ಬರದಂತೆ ತಡೆಯಲು ಸ್ಫೋಟಕಗಳನ್ನು ಅಲ್ಲಲ್ಲಿ ಹೂತಿಡಲಾಗಿದೆ ಎಂಬ ವರದಿಗಳೂ ಇವೆ. ಒಂದು ವರ್ಷದ ಹಿಂದೆ ನಂದಿಗ್ರಾಮದಲ್ಲಿ ಮಾಡಿದ್ದಂತೆ ಈ ಪ್ರದೇಶವನ್ನು ನಾಗರಿಕ ಆಡಳಿತದ ವ್ಯಾಪ್ತಿಯಿಂದ ಹೊರಗಿಡುವುದು ಅವರ ಹುನ್ನಾರ ಎಂಬುದು ಸ್ಪಷ್ಟ. ಸ್ಥಳೀಯ ಜನರು ತಾವು ಹೇಳಿದಂತೆ ಕೇಳುವ ಹಾಗೆ ಮಾಡಿ ತಮ್ಮ ದುಷ್ಟ ಚಟುವಟಿಕೆಗಳನ್ನು ನಡೆಸಲು 'ವಿಮೋಚಿತ ವಲಯ'ವನ್ನು ನಿರ್ಮಿಸುವುದು ಅವರ ಉದ್ದೇಶ.

ಫ್ಯಾಸಿಸ್ಟ್ ಮಾದರಿ ತಂತ್ರ

ಕಳೆದ ವಾರ ಖೆಜುರಿಯಲ್ಲಿ ತೃಣಮೂಲಿಗಳ ಕಾರ್ಯವೈಖರಿಯೂ ಹೀಗೇ ಇತ್ತು. ಸಿಪಿಐ(ಎಂ) ಕಾರ್ಯಕರ್ತರನ್ನು ಮುಗಿಸಿ ಬಿಟ್ಟು ಜನಗಳನ್ನು ಬೆದರಿಸಿ ತಮ್ಮ ರಾಜಕೀಯ ನೆಲೆ ನಿರ್ಮಿಸುವ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ, ಫ್ಯಾಸಿಸ್ಟ್ ಮಾದರಿಯ ಕಾರ್ಯತಂತ್ರವನ್ನು ತೃಣಮೂಲ ಕಾಂಗ್ರೆಸ್ ನೇತೃತ್ವದ ಕೂಟ ಅನುಸರಿಸುತ್ತಿದೆ. ಅವರ ಈ ತಂತ್ರ ಮಾವೋವಾದಿಗಳು ಈ ಪ್ರದೇಶದಲ್ಲಿ ಪ್ರವೇಶಿಸಲು ಅವಕಾಶ ಕಲ್ಪಿಸಿದೆ ಎಂಬ ಬಗ್ಗೆ ಅವರಿಗೆ ಮುಜುಗರವೇನೂ ಇದ್ದಂತಿಲ್ಲ.

ಪ್ರಧಾನ ಮಂತ್ರಿಗಳೇ ಸ್ವತಃ 'ಮಾವೋವಾದಿ ಹಿಂಸಾಚಾರ ನಮ್ಮ ಆಂತರಿಕ ಭದ್ರತೆಗೆ ಅತಿ ದೊಡ್ಡ ಬೆದರಿಕೆ' ಎಂದು ಹೇಳಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಅತ್ತ ಮಾವೋವಾದಿಗಳು 'ಜನವರಿ 2007ರಲ್ಲಿ ನಾವು ನಂದಿಗ್ರಾಮ ಪ್ರವೇಶಿಸಿ ಶೀಘ್ರವಾಗಿ 350 ಮಂದಿಯಿದ್ದ ಪಡೆಯನ್ನು ರಚಿಸಿದೆವು. ಇದಕ್ಕೆ ಹೆಚ್ಚಿನ ಶಸ್ತ್ರಾಸ್ತ್ರ ಪೂರೈಸಿದವರು ತೃಣಮೂಲ ಮುಖಂಡರು' ಎಂದು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಮಾವೋವಾದಿಗಳು ಶಸ್ತ್ರಾಸ್ತ್ರ ಸಂಗ್ರಹಿಸುತ್ತಿದ್ದಾರೆಂಬ ಮಾಹಿತಿಗಳು ಅನೇಕ ಮೂಲಗಳಿಂದ ಬಂದಿವೆ. ನಂದಿಗ್ರಾಮ್ ಗಲಭೆಗಳ ಸಮಯದಲ್ಲಿ ಒಬ್ಬ ಮಾವೋವಾದಿ ಮುಖಂಡ ತೃಣಮೂಲ ಮುಖಂಡರನ್ನು ಗೇಲಿ ಮಾಡುತ್ತಾ 'ತಾವೇ ಮುಖಂಡರು ಎಂದು ಅವರು ಭಾವಿಸಿದ್ದಾರೆ, ಆದರೆ ವಾಸ್ತವವಾಗಿ ಹತೋಟಿ ನಮ್ಮ ಕೈಯಲ್ಲಿದೆ' ಎಂದಿದ್ದನಂತೆ. ಈಗ ಲಾಲ್‌ಗಡ್‌ನಲ್ಲಿ ಮಾವೋವಾದಿಗಳು ಹಿಂಸಾಚಾರ ಹರಿಯಬಿಟ್ಟಿದ್ದಾರೆ, ತೃಣಮೂಲಿಗಳು ಮತ್ತು ಅವರ ಕೂಟದ



ದೆಹಲಿಯಲ್ಲಿ ಹಿಂಸಾಚಾರಕ್ಕೆ ಪ್ರತಿಭಟನೆ

ಇತರರು ತಮ್ಮ 'ಮುಖಂಡ'ರನ್ನು ಅನುಸರಿಸುತ್ತಿದ್ದಾರೆ ಎಂಬುದು ಸುಸ್ಪಷ್ಟ.

ಭಯೋತ್ಪಾದನೆಯ ರಾಜಕೀಯ

ಮಾವೋವಾದಿ ಹಿಂಸಾಚಾರದ ಮೂಲಕ ಒಂದು ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸುವುದು ಅವರ ಹುನ್ನಾರ ಎಂಬುದರಲ್ಲಿ ಅನುಮಾನವೇ ಇಲ್ಲ.

ತೃಣಮೂಲ ಕಾಂಗ್ರೆಸಿನ ಕೇಂದ್ರ ಮಂತ್ರಿಗಳು ವಾರದಲ್ಲಿ ಐದು ದಿನಗಳನ್ನು ಬಂಗಾಳದಲ್ಲಿಯೇ ಕಳೆಯುತ್ತಾರೆ, ಎರಡು ದಿನ ಮಾತ್ರ ದಿಲ್ಲಿಯಲ್ಲಿ ತಮ್ಮ ಖಾತೆಗಳ ಕೆಲಸ ಮಾಡುತ್ತಾರೆ ಎಂದು ಆ ಪಕ್ಷದ ನಾಯಕಿ ಕೇಂದ್ರದಲ್ಲಿ ಸರಕಾರ ರಚನೆಯಾದ ಕೂಡಲೇ ಸಾರಿದ್ದರು. ಅಂದರೆ ಮಂತ್ರಿಗಿರಿ ಭಯೋತ್ಪಾದನೆಯ ರಾಜಕೀಯ ನಡೆಸಲೇ ಹೊರತು ದೇಶದ ಜನಗಳ ಸೇವೆ ಮಾಡಲು ಅಲ್ಲ ಎಂದು ಬಹಿರಂಗವಾಗಿಯೇ ಒಪ್ಪಿಕೊಂಡಂತಾಗುತ್ತದೆ. ಈಗ ಬಂಗಾಳದಲ್ಲಿ ಅವರು ನಡೆಸಿರುವುದು ಇದನ್ನೇ- ಅಂದರೆ ಭಯೋತ್ಪಾದನೆಯ ರಾಜಕೀಯವನ್ನು. ಸಂವಿಧಾನದ ಅಡಿಯಲ್ಲಿ ಮಂತ್ರಿಗಳಾಗಿ ಕರ್ತವ್ಯ ನೆರವೇರಿಸುವ ಪ್ರತಿಜ್ಞೆ ಕೈಗೊಂಡವರೇ ಅತ್ಯಂತ ಅಸಂವಿಧಾನಿಕವಾದ, ಕಾನೂನುಬಾಹಿರವಾದ ಹಿಂಸಾಚಾರದಲ್ಲಿ ಭಾಗವಹಿಸುತ್ತಿರುವುದು, ಅದಕ್ಕೆ ನೇತೃತ್ವ ಕೊಡುತ್ತಿರುವುದು ಭಾರತೀಯ ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವ ಅಪಚಾರ. ಮಾವೋವಾದಿ ಹಿಂಸಾಚಾರ ಅತ್ಯಂತ ದೊಡ್ಡ ಬೆದರಿಕೆ ಎಂದು ಸಾರಿದ ಪ್ರಧಾನ ಮಂತ್ರಿಗಳ ಪಕ್ಷದವರಿಗೂ ಈ ಬಗ್ಗೆ ಏನೂ ಮುಜುಗರವಾಗುತ್ತಿಲ್ಲ ಎಂಬುದು ಅತ್ಯಂತ ಖೇದದ ಸಂಗತಿ.

ಯಾವುದೇ ನಾಗರಿಕ ಸಮಾಜ ಇಂತಹ ಹಿಂಸಾಚಾರವನ್ನು ಹರಡಿಸಿ ಅರಾಜಕ ಪರಿಸ್ಥಿತಿಯನ್ನು ಉಂಟು ಮಾಡುವುದನ್ನು ಸಹಿಸಲಾರದು. ಪಶ್ಚಿಮ ಬಂಗಾಳ ಸರಕಾರ ಕೇಂದ್ರ ಸರಕಾರದ ನೆರವನ್ನು ಕೇಳಿದೆ. ಎರಡೂ ಸರಕಾರಗಳು ಜೊತೆಗೂಡಿ ತುರ್ತಾಗಿ ಕಾರ್ಯಾಚರಣೆ ನಡೆಸುವುದು ನಮ್ಮ ದೇಶದ ಮತ್ತು ನಮ್ಮ ಸಂವಿಧಾನಿಕ ರೀತಿ-ನೀತಿಗಳ ಹಿತದೃಷ್ಟಿಯಿಂದ ಅತ್ಯಗತ್ಯ. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ದುರ್ಲಾಭದ ಹಿಂಸಾಚಾರ ಕೂಡಲೇ ನಿಲ್ಲಬೇಕು, ಪೂರ್ವ ಮತ್ತು ಪಶ್ಚಿಮ ಮಿದ್ನಾಪುರಗಳಲಿ ಮತ್ತೆ ಕಾನೂನಿನ ಆಳ್ವಿಕೆ ಮತ್ತು ನಾಗರಿಕ ಆಡಳಿತ ನೆಲೆಗೊಳ್ಳುವಂತಾಗಬೇಕು ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳೆಲ್ಲರ ಆಶಯ.

ಸಾವಯವ ಕೃಷಿ ಸಾಧ್ಯಾಸಾಧ್ಯತೆಗಳು

ಒಂದು ಮಾರ್ಕ್ಸ್‌ವಾದಿ ಕಣ್ಣೋಟ


ಜಿ.ಎನ್.ನಾಗರಾಜ್

ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಆದರೆ ಅದನ್ನು ಅಳವಡಿಸಿಕೊಳ್ಳಬಹುದಾದ ಪ್ರಮಾಣಕ್ಕೆ ಮಿತಿಯೂ ಇದೆ. ಹೀಗಾಗಿ ವೈಜ್ಞಾನಿಕವಾದ ರೀತಿಯಲ್ಲಿ ರಸಗೊಬ್ಬರ ಬಳಕೆಯನ್ನು ಮಾಡಬೇಕಾಗುತ್ತದೆ ಎನ್ನುವ ಈ ಲೇಖನದಲ್ಲಿ ಸಾವಯವ ಕೃಷಿಯ ಬಗೆಗೆ -ಭೂಮಿಯ ಫಲವತ್ತತೆ ರಕ್ಷಿಸಬೇಕಾದ ಕುರಿತು ಮಾರ್ಕ್ಸ್‌ವಾದಿ ದೃಷ್ಟಿಯ ವಿಚಾರಗಳು ನಿಮ್ಮ ಮುಂದಿವೆ.

ಸಾವಯವ ಕೃಷಿಯ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಚರ್ಚೆಯಾಗುತ್ತಿದೆ. ಇಲ್ಲಿಯವರೆಗೆ ವೈಯಕ್ತಿಕವಾಗಿ ಅಥವ ಸಣ್ಣ ಗುಂಪುಗಳಲ್ಲಿ ಅಲ್ಲಲ್ಲಿ ಪ್ರಯೋಗದಲ್ಲಿದ್ದ ಈ ಕೃಷಿಗೆ ಸನಾತನವಾದಿ, ವಿಜ್ಞಾನ ವಿರೋಧಿ ಪ್ರಚಾರ ನೀಡಿ, ಸರ್ಕಾರಿ ಯಂತ್ರವನ್ನು ಬಳಸಿಕೊಂಡು ಸಂಘ ಪರಿವಾರದ ಗೋ ಸಂರಕ್ಷಣೆ, ಗೋ ಹತ್ಯೆ ವಿರೋಧಿ ಅಜೆಂಡಾದ ಭಾಗವಾಗಿ ಜನರ ಐಕ್ಯತೆಯನ್ನು ಭಂಜಿಸುವ ಸಾಧನವಾಗಿ ಬಳಸಿಕೊಳ್ಳುವುದು ಒಂದು ಹೊಸ ಪ್ರತಿಗಾಮಿ ಘಟ್ಟವಾಗಿದೆ. ಹೀಗಾಗಿ ಇದನ್ನು ಗಂಭೀರವಾಗಿ ಚರ್ಚಿಸಬೇಕಾಗಿದೆ.

ಜಪಾನಿನ ಫುಕೋವೊಕನ ವಿಚಾರಗಳಿಂದ ಪ್ರೇರಿತವಾದ ಕೆಲ ವ್ಯಕ್ತಿಗಳು ಸಹಜ ಕೃಷಿ ಎಂಬ ಹೆಸರಿನಲ್ಲಿ ಸಾವಯವ ಕೃಷಿಯನ್ನು ಪ್ರಯೋಗಿಸಲಾರಂಭಿಸಿದರು. ನಿಧಾನವಾಗಿ ಸಣ್ಣ ಗುಂಪುಗಳು ಅವರ ನಡುವೆ ಸಂಬಂಧಗಳು, ಚರ್ಚೆಗಳು ಆರಂಭವಾದವು. ಸಮಾಜವಾದಿಗಳು - ಲಂಕೇಶ್, ತೇಜಸ್ವಿ - ಫುಕೋವೊಕನ ವಿಚಾರಗಳನ್ನು ಪ್ರಚಾರ ಮಾಡಿದರು. ಹರೇಕೃಷ್ಣ ಪಂಥ ಮತ್ತೊಂದೆಡೆ ತನ್ನ ಕೃಷಿ ಕ್ಷೇತ್ರಗಳಲ್ಲಿ ಪ್ರಯೋಗಿಸಿತು ಹಾಗೂ ಮಾರುಕಟ್ಟೆಯೊಂದನ್ನು ರೂಪಿಸಿತು..

ಪ್ರೊ. ನಂಜುಂಡಸ್ವಾಮಿಯವರು ರೈತರ ಅಂತರರಾಷ್ಟ್ರೀಯ ಸಂಘಟನೆಗಳಲ್ಲೊಂದಾದ 'ವಿಯಾ ಕಾಂಪೆಸೀನಾ' ಮೂಲಕ ಹಾಗೂ ವಂದನಾ ಶಿವರ ಪ್ರಭಾವದಲ್ಲಿ ಅಮೇರಿಕಾ- ಯುರೋಪುಗಳಲ್ಲಿ ಪ್ರಚಲಿತ ವಿರುವ ಸಾವಯವ ಕೃಷಿಯ ಪದ್ಧತಿ ಮತ್ತು ಸಿದ್ಧಾಂತಗಳನ್ನು ಪರಿಚಯ ಮಾಡಿಕೊಂಡರು. ರಾಜ್ಯ ರೈತ ಸಂಘದ ಅಧ್ಯಯನ ಶಿಬಿರಗಳಲ್ಲಿ ಖಾಯಂ ಪಾಠವಾಗಿಸಿ ರೈತ ಸಂಘದ ಕಾರ್ಯಕರ್ತರಿಗೆ ಪರಿಚಯಿಸಿದರು. ದೇಸಿ ಬೀಜ ಸಂರಕ್ಷಣೆ, ದೇಸಿ ಪದ್ಧತಿಗಳ ಬಳಕೆಗೆ ಕೆಲವು ಅಮೃತ ಭೂಮಿ, ಅಮೃತ ಕ್ಷೇತ್ರ ಎಂಬ ಕ್ಷೇತ್ರಗಳನ್ನೂ ಆರಂಭಿಸಿದರು. ಇತ್ತೀಚೆಗೆ ರೈತ ಸಂಘದ ನಾಯಕರು ಸಾವಯವ ಕೃಷಿಗಿಂತಲೂ ಸುಭಾಷ್ ಪಾಳೇಕರ್ ರವರ ನೈಸರ್ಗಿಕ ಕೃಷಿಯೇ ಶ್ರೇಷ್ಠ ಎಂದು ಭಾವಿಸಿ ರಾಜ್ಯಾದ್ಯಂತ ಅವರ ಉಪನ್ಯಾಸಗಳನ್ನು ಏರ್ಪಡಿಸಿದೆ. ಸಾಕಷ್ಟು ಪ್ರಚಾರ ನೀಡಿದೆ. ಅನೇಕರು ಅದನ್ನು ಅಳವಡಿಸಿಕೊಂಡು ಕೃಷಿ ಮಾಡಲು ಕಾರಣವಾಗಿದೆ.



ಫಲವತ್ತತೆಯ ನಿರಂತರ ದೋಚುವಿಕೆಯಿಂದ ಬರಡಾಗುತ್ತಾ ನಡೆದಿರುವ ಭೂಮಿ.

ಈ ಮಧ್ಯೆ ಸಾವಯವ ಕೃಷಿಯ ಉತ್ಪನ್ನಗಳಿಗೆ ವಿದೇಶಗಳಲ್ಲಿ ನಮ್ಮ ದೇಶದ ಮೇಲ್ವರ್ಗದ ಜನರಲ್ಲಿ ಉತ್ತಮ ಮಾರುಕಟ್ಟೆಯಿರುವುದನ್ನು ಬಳಸಿಕೊಳ್ಳಲು ಕೇವಲ ಲಾಭಕ್ಕಾಗಿ ಸಾವಯವ ಕೃಷಿಯಲ್ಲಿ ಕೆಲವರು ತೊಡಗಿದ್ದಾರೆ. ಇದಕ್ಕೆ ಜೆ.ಹೆಚ್.ಪಟೇಲ್, ಕೃಷ್ಣ ಸರಕಾರಗಳು ಸರಕಾರ ಬೆಂಬಲ ನೀಡಿದವು. ಅದಕ್ಕಾಗಿ ಸರ್ಕಾರಗಳ ಕೆಲವು ಪ್ರಯೋಗ ಕ್ಷೇತ್ರಗಳು, ಮಾರುಕಟ್ಟೆ ಮತ್ತು ಉತ್ಪಾದಕರಿಗೊಂದು ಪ್ರಮಾಣ ಸಂಸ್ಥೆಗಳನ್ನು ಸ್ಥಾಪಿಸಿತು.

ಹೀಗೆ ಸಾವಯವ ಕೃಷಿಯಲ್ಲಿ ಸಹಜ ಕೃಷಿ, ಸಾವಯವ ಕೃಷಿ, ನೈಸರ್ಗಿಕ ಕೃಷಿ ಎಂಬಂತಹ ಪ್ರಭೇದಗಳು ಭಿನ್ನ ಸಿದ್ಧಾಂತಗಳು ರೂಪುಗೊಂಡಿವೆ. ಸಮಾಜವಾದಿ, ಪರಿಸರವಾದಿ, ಆದರ್ಶವಾದಿ, ಬಹುರಾಷ್ಟ್ರೀಯ ಕಂಪೆನಿ ವಿರೋಧಿ, ವಿಜ್ಞಾನ-ತಂತ್ರಜ್ಞಾನ ವಿರೋಧಿ, ಸನಾತನವಾದಿ ದೃಷ್ಟಿಕೋನಗಳು ಪ್ರಚಲಿತವಾಗಿವೆ.

ಈಗಾಗಲೇ ಒಂದೆಡೆ ವಿಜ್ಞಾನ ವಿರೋಧಿ, ಸನಾತನವಾದಿ ವಿಚಾರಗಳನ್ನು ಪ್ರಚಾರ ಮಾಡಲು ಮತ್ತೊಂದೆಡೆ ಗೋ ರಕ್ಷಣೆ, ಗೋ ಹತ್ಯೆಗಳ'ನ್ನು ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಧಾಳಿ ಮಾಡಲು ಬಳಸುತ್ತಿದ್ದ ಸಂಘ ಪರಿವಾರಕ್ಕೆ ಸಾವಯವ ಕೃಷಿಯ ವಿಚಾರಗಳ ಪ್ರಸಾರವು ಒಳ್ಳೆಯ ಅವಕಾಶವನ್ನು ಒದಗಿಸಿದೆ. ಮಠಗಳನ್ನು ಇತರ ಧಾರ್ಮಿಕ ಸಂಸ್ಥೆಗಳನ್ನು ಸಂಘ ಪರಿವಾರದ ಹಿಡಿತದಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಂಡು ಕರ್ನಾಟಕದ ಸಾವಿರ ಗ್ರಾಮಗಳಲ್ಲಿ ವ್ಯಾಪಕವಾದ ಸಾವಯವ ಕೃಷಿಯನ್ನು ಪ್ರಚಾರ ಮಾಡಲು, ತಮ್ಮ ವಿಭಜಕ ಅಜೆಂಡಾದ ಸಾಧನವಾಗಿ ಬಳಸಲು ಸಂಘ ಪರಿವಾರ ಯೋಜನೆ ರೂಪಿಸಿದೆ.



ಒಂದೇ ಬೆಳೆಯ ಕೃಷಿ-ಭೂಮಿ ಫಲವತ್ತತೆ ನಾಶಕ್ಕೆ ಒಂದು ಕಾರಣ

ಈಗಾಗಲೇ ರಾಜ್ಯಮಟ್ಟದ ಸಾವಯವ ಕೃಷಿ ಸಮಿತಿಯನ್ನು ಆರೆಸ್ಸೆಸ್‌ನ ಹಿಡಿತಕ್ಕೆ ನೀಡಲಾಗಿದೆ. ತಾಲ್ಲೂಕುಮಟ್ಟದಲ್ಲಿ ಟ್ರಸ್ಟ್‌ಗಳನ್ನು ರಚಿಸಿ ಸಂಘ ಪರಿವಾರದ ವಶಕ್ಕೆ ನೀಡುವ ಕೆಲಸ ಆರಂಭವಾಗಿದೆ. ಸಾವಯವ ಕೃಷಿ ಮೇಳಗಳಲ್ಲಿ ಬಿಜೆಪಿ ಕಾರ್ಯಕರ್ತರು ಮೆರೆದಿದ್ದಾರೆ. ಇದರ ಹೆಸರಿನಲ್ಲಿ ಗೋ ಸೇವಾ

ಪುಟ 13 ಕ್ಕೆ

ಸಮಾಜವಾದಿ ದೇಶಗಳಲ್ಲಿ...

ಚೀನಾದಲ್ಲಿ ಮಾನವ ಮಲ, ಮೂತ್ರಗಳನ್ನು ಗೊಬ್ಬರವಾಗಿ ಮಾರ್ಪಡಿಸಿ ಪರಿಣಾಮಕಾರಿಯಾಗಿ ಬಳಸುತ್ತಾರೆ. ಉಳಿದ ಸಸ್ಯಜನ್ಯ ಪ್ರಾಣಿಜನ್ಯ ವಸ್ತುಗಳಿಂದಲೂ ಉತ್ತಮ ಪ್ರಮಾಣದಲ್ಲಿ ಪೋಷಕಾಂಶಗಳನ್ನು ಪಡೆಯುತ್ತಾರೆ. ಅದೇ ಸಮಯದಲ್ಲಿ ಭಾರತಕ್ಕಿಂತ 3-4 ಪಟ್ಟು ಹೆಚ್ಚು ಇಳುವರಿ ಪಡೆಯಲು ಭಾರತದ 2.5 ಪಟ್ಟು ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಾರೆ. ಕೀಟನಾಶಕ್ಕೆ, ಜೈವಿಕ ಹಾಗೂ ಮಾನವ ಶ್ರಮದ ವಿಧಾನಗಳನ್ನು ಯಥೇಚ್ಛವಾಗಿ ಬಳಸುತ್ತಾರೆ. ಜೊತೆಗೆ ರಾಸಾಯನಿಕ ಔಷಧಿಗಳನ್ನೂ ಬಳಸುತ್ತಾರೆ.

ರಫ್ತಿಗಾಗಿ ಕೆಲ ಪ್ರದೇಶಗಳಲ್ಲಿ ವ್ಯಾಪಕವಾಗಿ ಸಾವಯವ ಕೃಷಿ ಪದ್ಧತಿಯನ್ನು ಬಳಸುತ್ತಾರೆ.

ಕ್ಯೂಬಾ :


ಕ್ರಾಂತಿಯ ನಂತರ ಶೇ.60ರಷ್ಟು ಭೂಮಿಯನ್ನು ಸರ್ಕಾರಿ ಫಾರಂಗಳ ಮೂಲಕ ಬೇಸಾಯ ಮಾಡುತ್ತಿದ್ದು, ಸೋವಿಯತ್‌ನಿಂದ ಆಮದು ಮಾಡಿದ ರಸಗೊಬ್ಬರ ಹಾಗೂ ಇತರ ರಾಸಾಯನಿಕಗಳ ಹೆಚ್ಚಿನ ಒಳಸುರಿಯಿಂದಲೇ ಪ್ರಧಾನವಾಗಿ ಕಬ್ಬಿನ ಮತ್ತು ಇತರ ಬೇಸಾಯ ನಡೆಯುತ್ತಿತ್ತು. ಸೋವಿಯತ್ ವಿಘಟನೆಯ ನಂತರ ಕ್ಯೂಬಾ ತೀವ್ರ ಆಹಾರ ಕೊರತೆ, ರಸಗೊಬ್ಬರ, ಪೆಟ್ರೋಲಿಯಂ, ಔಷಧಿಗಳ ಕೊರತೆಯನ್ನು ಅನುಭವಿಸಿತು.

ಈ ಹಿನ್ನೆಲೆಯಲ್ಲಿ ಕೃಷಿ ವಿಧಾನಗಳನ್ನು ಮಾರ್ಪಡಿಸಿಕೊಳ್ಳಬೇಕಾಯಿತು. ಹಸಿರೆಲೆಗೊಬ್ಬರ, (ವರ್ಮಿಕಾಪೋಸ್ಟ್) ಬೆಳೆ ಆವರ್ತನ ಇವುಗಳ ಮತ್ತು ಎಲ್ಲ ರೀತಿಯ ಸಾವಯವ ಪದ್ಧತಿಗಳನ್ನು ಬಳಸಿ ಬೆಳೆಯಲಾರಂಭಿಸಿದರು. ಇದಕ್ಕಾಗಿ ಸರ್ಕಾರಿ ಫಾರಂಗಳನ್ನು ಒಡೆದು ರೈತರ ಗುಂಪುಗಳಿಗೆ, ಸಹಕಾರಿ ಕೃಷಿಗೆ ಹಂಚಲಾಯಿತು. ಪ್ರಾಣಿ ಶಕ್ತಿಯನ್ನು ಹೆಚ್ಚು ಬಳಸಲಾಯಿತು. ರೋಗ, ಕೀಟಗಳ ಜೈವಿಕ ಚಕ್ರಗಳನ್ನು ಹತ್ತಿರದಿಂದ ಗಮನಿಸಿ ಜೈವಿಕವಾಗಿ, ಮಾನವ ಶ್ರಮದಿಂದ ಮಾತ್ರ, ಕೀಟ ರೋಗ ನಾಶವನ್ನು ಮಾಡುವ ಕ್ರಮವನ್ನು ಅನುಸರಿಸಲಾಯಿತು. ದೊಡ್ಡ ದೊಡ್ಡ ಪಶು ಕ್ಷೇತ್ರಗಳನ್ನು ಪಶು ಆಹಾರಗಳ ಬಳಕೆ ಇಲ್ಲದೆ ಹುಲ್ಲುಗಾವಲಿನಲ್ಲಿಯೇ ಹೆಚ್ಚಿನ ಆಹಾರ ದೊರೆಯುವಂತೆ ಪುನರ್ಸಂಘಟಿಸಲಾಗಿದೆ. ನಗರ-ಹಳ್ಳಿಗಳ ಬೇಧವನ್ನು ಕಡಿಮೆ ಮಾಡಲು ನಗರ ಕೃಷಿಗೆ ಒತ್ತು ನೀಡಲಾಗಿದೆ. ಖಾಲಿಯಿರುವ ನಿವೇಶನಗಳು, ಉಪಯೋಗಿಸದ ಕಟ್ಟಡಗಳು, ಪಾರ್ಕ್‌ಗಳು ಹೀಗೆ ಸಾಧ್ಯವಿರುವೆಡೆಯೆಲ್ಲಾ ಕೃಷಿ ಮಾಡಲಾಗಿದೆ. ಮಾನವ ಮಲ ಮೂತ್ರಗಳ ಗೊಬ್ಬರಗಳನ್ನು ಉಪಯೋಗಿಸಲಾಗಿದೆ. ಕ್ಯೂಬಾದ ನಗರಗಳಲ್ಲಿರುವ ಪ್ರತಿ ಕುಟುಂಬವೂ ಗರಿಷ್ಠ 1/3 ಎಕರೆಯಷ್ಟು ನಗರ ಭೂಮಿಯನ್ನು ಕೃಷಿ ಮಾಡಬಹುದಾಗಿದೆ. ಇದರಿಂದಾಗಿ ಕ್ಯೂಬಾದ ನಗರಗಳ ಒಟ್ಟು ತರಕಾರಿಗಳ ಅಗತ್ಯದಲ್ಲಿ ಶೇ.60 ರಷ್ಟನ್ನು ಪೂರೈಸಿಕೊಳ್ಳಲಾಗಿದೆ.

ಹೀಗೆ ದೇಶವ್ಯಾಪಿ ಪ್ರಮಾಣದಲ್ಲಿ ಸಾವಯವ ಕೃಷಿ ಮಾಡಿದ ಕೀರ್ತಿ ಕ್ಯೂಬಾಕ್ಕೆ ಸಲ್ಲುತ್ತದೆ. ಜಗತ್ತಿನ ಅನೇಕ ತಜ್ಞರು, ಪರಿಸರ ಸಂಘಟನೆಗಳು ಕ್ಯೂಬಾದ ಈ ಪ್ರಯತ್ನವನ್ನು ಕೊಂಡಾಡಿದ್ದಾರೆ. ಪರ್ಯಾಯ ನೊಬೆಲ್ ಪ್ರಶಸ್ತಿಯೂ ಕ್ಯೂಬಾದ ಕೃಷಿ ಉತ್ಪಾದನೆಗೆ ದೊರೆತಿದೆ. ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳಲ್ಲಿ ಈ ಪ್ರಯೋಗದ ಬಗ್ಗೆ ಆಸಕ್ತಿ ತೋರಿದ್ದಾರೆ. ಕ್ಯೂಬಾಕ್ಕೆ ಭೇಟಿ ನೀಡಿದ್ದಾರೆ. ಕ್ಯೂಬಾದ ಸಾವಯವ ಕೃಷಿ ತಜ್ಞರು ಈ ದೇಶಗಳಲ್ಲಿ ಸಲಹೆಗಾರರಾಗಿ ಸಾವಯವ ಕೃಷಿ ವಿಧಾನಗಳ ಪ್ರಸಾರ ಮಾಡುತ್ತಿದ್ದಾರೆ.

ಕರ್ನಾಟಕದ ಕೃಷಿ ಪರಿಸ್ಥಿತಿ ಫಲವತ್ತತೆ ಮತ್ತು ಸಾವಯುವ ಕೃಷಿ

ಕರ್ನಾಟಕದಲ್ಲಿ ನಗರೀಕರಣ ಇತ್ತೀಚಿನ ವರ್ಷಗಳಲ್ಲಿ ವೇಗವಾಗಿದೆ. ಶೇ.40ರಷ್ಟು ಜನಸಂಖ್ಯೆ ನಗರಗಳಲ್ಲಿ ಕೇಂದ್ರೀಕೃತವಾಗಿದೆ. ಇದರಿಂದಾಗಿ ಈ ಜನ ಸಮೂಹ ಬಳಸುವ ಸಾವಯುವ ವಸ್ತುಗಳು, ಕೃಷಿ ಉತ್ಪಾದನೆಗಳು ದಿನ ನಿತ್ಯದ ಆಹಾರದಿಂದ ಹಿಡಿದು ಬಿಸ್ಕತ್ತು, ಸಂಸ್ಕರಿಸಿದ ಹಣ್ಣಿನ ರಸ ಇತ್ಯಾದಿ ಅನೇಕ ಆಹಾರ ವಸ್ತುಗಳವರೆಗೆ ಸೇವಿಸಿದ್ದು, ಸೇವಿಸದೆ ಉಳಿದಿರುವ ತ್ಯಾಜ್ಯ ಎಲ್ಲವೂ ಈ ಬೆಳೆಗಳನ್ನು ಬೆಳೆದ ಮಣ್ಣಿಗೆ ಮರಳುವುದಿಲ್ಲ. ಈ ಕೊರತೆಯನ್ನು ತುಂಬಲು ರಾಸಾಯನಿಕವಲ್ಲದೆ ಬೇರೆ ಮಾರ್ಗವಿಲ್ಲ. ಎಲ್ಲಾ ಸ[illegible]ವ ಮಾರ್ಗಗಳು - ಕಾಂಪೋಸ್ಟ್, ವರ್ಮಿ ಕಾಂಪೋಸ್ಟ್, ಜೀವಾಮೃತ, ಬೀಜಾಮೃತ, ಪಂಚಗವ್ಯಗಳೆಲ್ಲವೂ ಮಣ್ಣಿನಿಂದ ಹೊರಬಂದ ಸಾವಯುವ ವಸ್ತುವಿನ ರೂಪ - ಹಳ್ಳಿಗಳಲ್ಲಿ ಬಳಕೆಯಾಗುವ ಸಾವಯುವ ವಸ್ತುಗಳ ಒಂದು ಭಾಗಶಃ ಅಂಶ ಮಾತ್ರ.



ಜಾಗತೀಕರಣದ ಭಾಗವಾಗಿ ಹೆಚ್ಚಿದ ಕೃಷಿ ವಾಣಿಜ್ಯದ ಫಲವಾಗಿ ಗಣನೀಯ ಪ್ರಮಾಣದಲ್ಲಿ ಆಹಾರ ಧಾನ್ಯಗಳು. ಬೇಳೆ, ಎಣ್ಣೆಕಾಳುಗಳು, ಹಾಲು, ಹೂವು, ಹಣ್ಣು ತರಕಾರಿಗಳು, ಹತ್ತಿ, ಅಡಿಕೆ, ಕಾಫಿ, ಕೃತಕ ನೂಲು ರಾಜ್ಯದಿಂದ ಹೊರಗೆ ಹೋಗುತ್ತದೆ. ಹೊರಗಿನಿಂದ ಆಮದು ಮಾಡಿಕೊಳ್ಳುವ ಕೃಷಿ ಉತ್ಪನ್ನಗಳಿಗಿಂತ ಹೊರ ಹೋಗುವ ಕೃಷಿ ಉತ್ಪನ್ನಗಳು ಹೆಚ್ಚು. ಫಲವತ್ತತೆಯ ನಷ್ಟಕ್ಕೆ ಇದು ಕೂಡ ಸೇರುತ್ತದೆ.

ಇನ್ನು ಹಳ್ಳಿಗಳಲ್ಲಿಯೇ ಉಳಿದ ಸಾವಯುವ ವಸ್[illegible]ನ ಜಾಡನ್ನು ಅನ್ವೇಷಿಸಿ ಜಮೀನಿನ ಫಲವತ್ತತೆಯ ಮೇಲಿನ ಪರಿಣಾಮಗಳನ್ನು ತಿಳಿಯಬಹುದು. ಹಳ್ಳಿಗಳಲ್ಲಿಯೇ ಜನರು, ಪ್ರಾಣಿಗಳು ಆ[illegible]ವಾಗಿ ಸೇವಿಸಿದ ಸಾವಯುವ ವಸ್ತು ಮಣ್ಣಿಗೆ ಮರಳಿದರೂ ಊರಿನ ಹತ್ತಿರದ ಜಮೀನಿಗೆ ಹೆಚ್ಚು ಸಾವಯುವ ವಸ್ತು ಸಂದಾಯವಾಗುತ್ತದೆ. ಮನುಷ್ಯರ ಮಲ ಮೂತ್ರ ವಿಸರ್ಜನೆ ಹಾಗೂ ಅದನ್ನು ಗೊಬ್ಬರವಾಗಿ ಪರಿವರ್ತಿಸುವ ಪದ್ಧತಿ ಇಲ್ಲದಿರುವುದರಿಂದ ಬಹಳಷ್ಟು ಸಾರ ನಷ್ಟವುಂಟಾಗುತ್ತದೆ. ಪ್ರಾಣಿಗಳ ಮಲ ಮಾತ್ರ ಗೊಬ್ಬರವಾಗಿ ಪರಿವರ್ತಿತವಾಗುತ್ತದೆ. ಮೂತ್ರ ವ್ಯರ್ಥ ವಾಗುತ್ತದೆ. ಆದರೆ ಕಾಂಪೋಸ್ಟ್ ಪದ್ಧತಿ ಅನುಸರಿಸದಿರುವುದರಿಂದ ಪ್ರಾಣಿಗಳ ಮಲದಿಂದಲೂ ಗಣನೀಯವಾಗಿ ಸಾರ ನಷ್ಟವಾಗುತ್ತದೆ. ಅಲ್ಲದೆ, ಬೆರಣಿಯ ರೂಪದಲ್ಲಿ ಉರುವಲಾಗಿ ಬಳಸುವುದು ದೊಡ್ಡ ಪ್ರಮಾಣ ದಲ್ಲಿರುವುದರಿಂದ ಸಾವಯುವ ವಸ್ತು ನಷ್ಟವಾಗುತ್ತದೆ. ಆಹಾರವಾಗಿ ಬಳಸದ ಸಸ್ಯ ಭಾಗಗಳ ಉರುವಲಾಗಿ ಬಳಸಲ್ಪಟ್ಟು ಈ ಮೂಲಕ ಕೂಡ ಬಹಳಷ್ಟು ವ್ಯರ್ಥವಾಗುತ್ತದೆ. ಜತೆಗೆ ಈಗ ಏಕ ಬೆಳೆ ಪದ್ಧತಿ ವ್ಯಾಪಕವಾಗಿದೆ. ಇದು ಮಿಶ್ರ ಬೆಳೆ ಪದ್ಧತಿ, ಬೆಳೆ ಆವರ್ತನ ಪದ್ಧತಿ, ಭೂಮಿಗೆ ವಿಶ್ರಾಂತಿ ನೀಡುವ ಪದ್ಧತಿಗಳನ್ನು ಕೈ ಬಿಡಲು ಕಾರಣವಾಗಿದೆ.

ಹೊಲಗದ್ದೆಗಳಿಗೆ ಫಲವತ್ತತೆ ತುಂಬಲು ಬಳಕೆಯಾಗಬೇಕಾದ ಮಲ, ಮೂತ್ರ, ಸಸ್ಯ, ಹಾಗೂ ಜೈವಿಕ ತ್ಯಾಜ್ಯಗಳು ನಗರಗಳಿಂದ ಹೊರಭಾಗಕ್ಕೆ ಕೊಳಚೆ ನೀರಾಗಿ ಹರಿದು ವ್ಯರ್ಥವಾಗುತ್ತಿರುವುದು.



ವಿವಿಧ ಸಾವಯುವ ಕೃಷಿ ಪದ್ಧತಿಗಳಲ್ಲಿ ಹಸಿರೆಲೆಗೊಬ್ಬರ, ಇತರ ಜೈವಿಕ ಗೊಬ್ಬರ (ಅಜೊಲಾ, ಪಾಚಿ ಇತ್ಯಾದಿ), ಬೆಳೆ ಪರಿವರ್ತನೆ, ಮಿಶ್ರ ಬೆಳೆಪದ್ಧತಿ ಮಾತ್ರ ಸಾರಜನಕವನ್ನು ಮಾತ್ರ ಗಾಳಿಯಿಂದ ಸೆಳೆದು ಅದನ್ನು ಗೊಬ್ಬರವಾಗಿ ಪರಿವರ್ತಿಸಿ ಮಣ್ಣಿಗೆ ಸೇರಿಸಬಹುದು. ಬೇರೆ ಯಾವುದೇ ಪದ್ಧತಿ -ಕಾಂಪೋಸ್ಟ್, ವರ್ಮಿ ಕಾಂಪೋಸ್ಟ್‌ಗಳು, ಜೀವಾಮೃತ (ಸಗಣಿ ಗಂಜಲ, ಬೆಲ್ಲಗಳನ್ನು ಬೆರೆಸಿ ಕೊಳೆಸಿ ದ್ರಾವಣ ಮಾಡಿ ಎಲೆ, ಬೀಜಗಳಿಗೆ ನೀಡುವ ಪದ್ಧತಿ) ಪಂಚಗವ್ಯ (ಸಗಣಿ, ಗಂಜಲ, ಹಾಲು, ಮೊಸರು, ತುಪ್ಪ, ಜೇನುತುಪ್ಪ ಇವುಗಳನ್ನು ಬೆರೆಸಿ ಕೊಳೆಸಿ ದ್ರಾವಣ ಮಾಡಿ ಸಸ್ಯಗಳಿಗೆ ಸಿಂಪಡಿಸುವುದು) ಅವುಗಳಲ್ಲಿ ಸೇರಿಸಿದ ವಸ್ತುಗಳಲ್ಲಿ ಲಭ್ಯವಿರುವ ಪೋಷಕಾಂಶಗಳನ್ನು ಗಿಡಗಳು ಹೀರಿ ಉಪಯೋಗಿಸಲು ಅನುಕೂಲ ವಾಗುವಂತಹ ರೂಪಕ್ಕೆ ಪರಿವರ್ತಿಸ ಬಹುದಲ್ಲದೇ ಪೋಷಕಾಂಶ ಗಳನ್ನು ಸೃಷ್ಟಿ ಮಾಡುವುದಿಲ್ಲ.



ಹೀಗಾಗಿ ಭೂಮಿಯಿಂದ ಸೆಳೆದುಕೊಂಡ ಸಾವಯುವ ವಸ್ತುಗಳನ್ನು ಪರಿವರ್ತಿಸಿ ಮತ್ತೆ ಪೋಷಕಾಂಶಗಳನ್ನು ಭೂಮಿಗೆ ಸೇರಿಸುವದರಲ್ಲಿ ಬಹಳ ದೊಡ್ಡ ಕಂದಕಗಳಿವೆ ಎಂಬುದನ್ನು ಮೇಲೆ ವಿವರಿಸಲಾಗಿದೆ. ಇದನ್ನು ತುಂಬಲು ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕು. ಇಲ್ಲದಿದ್ದರೆ ಇಳುವರಿ ಕಡಿಮೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಒಟ್ಟಾರೆ ಕರ್ನಾಟಕದ ಆಹಾರ ಉತ್ಪಾದನೆ ಕೃಷಿ ಉತ್ಪಾದನೆಯ ಇಂದಿನ ಮಟ್ಟವನ್ನು ಉಳಿಸಿಕೊಳ್ಳಲು ಗಣನೀಯ ಮಟ್ಟದ ರಾಸಾಯನಿಕ ಗೊಬ್ಬರಗಳನ್ನು ಬಳಸದಿದ್ದರೆ ಸಾಧ್ಯವಿಲ್ಲ. ಕರ್ನಾಟಕ ರಾಜ್ಯ ದೇಶದಲ್ಲಿಯೇ ಅತಿ ಹೆಚ್ಚು ನಗರೀಕೃತವಾದ ರಾಜ್ಯಗಳಲ್ಲಿ ಒಂದು. ಮೇಲೆ ವಿವರಿಸಿದಂತೆ ಹೆಚ್ಚು ಹೆಚ್ಚು ನಗರೀಕರಣವೆಂದರೆ ಕೃಷಿಯಿಂದ ಉತ್ಪಾದಿತವಾದ ಸಾವಯುವ ವಸ್ತು ನಗರದ ಮಲೀನವಾಗಿ ವ್ಯರ್ಥವಾಗಿ ವೃಷಭಾವತಿ, ಅರ್ಕಾವತಿ ನದಿಗಳನ್ನು ಕೊಳಚಿ ಗುಂಡಿಗಳಾಗಿಸುತ್ತಾ ನಡೆಯುವ ಕರ್ನಾಟಕದ ಹೊಲ, ಗದ್ದೆ, ತೋಟಗಳು ನಿಸ್ಸಾರವಾಗುವ ಕ್ರಿಯೆ. ಹೀಗಾಗಿ ಇಲ್ಲಿಯ ಸಾವಯುವ ಕೃಷಿಯೆಂದರೆ ಕೇವಲ ಕೆಲ ಎಕರೆಗಳಲ್ಲಿ ವಿಶೇಷವಾಗಿ ಸೇರಿಸಿದ ಸಾವಯುವ ವಸ್ತುವನ್ನು ಬಳಸಿ ನಗರಗಳ ಅಥವಾ ಪಾಶ್ಚಿಮಾತ್ಯ ದೇಶಗಳ ಉಚ್ಚ ವರ್ಗಗಳ ಆರೋಗ್ಯವನ್ನು ಮಾತ್ರ ವಿಶೇಷವಾಗಿ ಕಾಪಾಡಲು ಶ್ರಮಿಸುವುದು. ಆದರಿಂದ ಕೆಲವರು ಲಾಭ ಮಾಡಿಕೊಳ್ಳುವುದು ಎಂದು ಮಾತ್ರ ಅರ್ಥ. ಈ ವಾಸ್ತವಾಂಶದ ಆಧಾರದ ಮೇಲೆ ಯಾರೂ ಸಾವಯುವ ಕೃಷಿ, ನೈಸರ್ಗಿಕ ಕೃಷಿಯ ಬಗ್ಗೆ ಮಾತನಾಡಿದರೂ ಅದು ಕೇವಲ ಭ್ರಮೆ ಮತ್ತು ಅಥವಾ ಹಗಲುಗನಸು ಮಾತ್ರ.

ಇನ್ನು ಜೀವಾಮೃತ, ಪಂಚಗವ್ಯ ಇತ್ಯಾದಿ ಹಾಲು, ತುಪ್ಪ, ಜೇನುತುಪ್ಪಗಳಿಂದ ತಯಾರಾದ ದ್ರವಗಳನ್ನು ಬಳಸುವುದರಿಂದ ಬೆಳೆಗಳಿಗೆ ಹೇಗೆ, ಯಾವ ರೀತಿ ಪ್ರಯೋಜನಕಾರಿ ಎಂಬುದು ಸಾಬೀತಾಗಿಲ್ಲ. ಕೆಲವು ತೋಟಗಳಲ್ಲಿ ಪ್ರಯೋಗಿಸ ಲಾಗಿದೆ. ಉತ್ತಮ ಬೆಳೆಗಳನ್ನು ಬೆಳೆಯಲಾಗಿದೆ ಎಂಬ ಬಗ್ಗೆ ವರದಿಗಳು ಬಿತ್ತರವಾಗಿವೆ. ಆದರೆ ಈ ವಸ್ತುಗಳು ಪರಸ್ಪರ ಮಿಳಿತವಾಗಿ ಬೆಳೆಗಳಿಗೆ ಪ್ರಯೋಜನಕಾರಿ ಪೋಷಕಾಂಶ ಗಳನ್ನು ತಯಾರಿಸುತ್ತಿವೆಯೇ? ಈ ವಸ್ತುಗಳ ಒಳಗೆ ಬೆಳೆಗಳಿಗೆ ಅವಶ್ಯವಾದ ಸಾರಜನಕ, ರಂಜಕ, ಪೊಟ್ಯಾಶ್ ಇತರ ಲಘು ಪೋಷಕಾಂಶಗಳು ಇವೆಯೇ? ಯಾವ ಪ್ರಮಾಣದಲ್ಲಿ? ಇವುಗಳಿಂದ ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ಪೋಷಕಾಂಶಗಳು ಲಭ್ಯವಾಗುತ್ತದೆಯೇ? ಇವುಗಳೆಲ್ಲವೂ ದೀರ್ಘಕಾಲದ ಪ್ರಯೋಗಗಳ ಮೂಲಕ ಸಾಬೀತಾಗಬೇಕಾದ ವಿಷಯಗಳು.

ಇನ್ನೂ ಫುಕುವೋಕ ಮೊದಲಾದ ಕೆಲವರ ಸಹಜ ಕೃಷಿಯ ಪ್ರಯೋಗಗಳು ಮೇಲೆ ವಿವರಿಸಿದಂತೆ ಕೇವಲ ಕೆಲವೇ ಎಕರೆಗಳಲ್ಲಿ ಸೀಮಿತವಾಗಿ ಉತ್ಪಾದನೆಗೆ ಸಹಾಯಕವಾಗಬಹುದು, ಮಧ್ಯಮ ವರ್ಗದ ಪರಿಸರ ಪ್ರೇಮಕ್ಕೆ ನೆಪವನ್ನು ಒದಗಿಸಬಹುದು ಅಷ್ಟೇ.

ಹಾಗೆಂದ ಕೂಡಲೇ ಸಾವಯುವ ಕೃಷಿ ಅನಗತ್ಯ, ರಾಸಾಯನಿಕ ಕೃಷಿ ಅನಿವಾರ್ಯವೆಂದು ಪ್ರತಿಪಾದಿಸಲಾಗುತ್ತಿದೆ ಎಂದು ಅರ್ಥವೇನಲ್ಲ. ಮಾರ್ಕ್ಸ್, ಎಂಗೆಲ್ಸ್, ಲೆನಿನ್‌ರವರು ವಿಶ್ಲೇಷಿಸಿದಂತೆ ಪರಿಸರ ರಕ್ಷಣೆಗೆ, ಮಾನವ ಕುಲದ ಆರೋಗ್ಯಕ್ಕೆ ಭೂ ಸಂಪತ್ತಿನ ಉಳಿವಿಗೆ ಸಾವಯುವ ಕೃಷಿ ಅತ್ಯಂತ ಅಗತ್ಯ. ಆದರೆ ಅದನ್ನು ಸಾಧಿಸಬೇಕಾದರೆ ಭೂ ಸಂಬಂಧಗಳ, ಉತ್ಪಾದನಾ ವ್ಯವಸ್ಥೆಯ ಕ್ರಾಂತಿಕಾರಕ ಬದಲಾವಣೆಯಿಂದ ಮಾತ್ರ ಸಾಧ್ಯ. ಆದರಿಂದ ಹಳ್ಳಿ-ನಗರಗಳ ನಡುವಣ ವೈರುಧ್ಯದ ನಿವಾರಣೆ ಅಂದರೆ ಒಂದು ಕಡೆ ನಗರೀಕರಣ-ಉತ್ಪಾದನೆಯ ಕೇಂದ್ರೀಕರಣ ಮತ್ತೊಂದು ಕಡೆ ಹಳ್ಳಿಗಳ ಹಿಂದುಳಿಯುವಿಕೆ ನಿರ್ಮೂಲನೆಯಿಂದ ಮಾತ್ರ ಸಾಧ್ಯ. ಮೊದಲು ಒಂದು ದೇಶದ ಅನುತರ ವಿಶ್ವದಲ್ಲಿ ಸಮಾಜವಾದಿ ವ್ಯವಸ್ಥೆ ಪ್ರಧಾನವಾದಾಗ ಮಾತ್ರ

ಕರ್ನಾಟಕದಲ್ಲಿ ಸಾವಯುವ ಕೃಷಿಯ ಸೀಮಿತ ಸಾಧ್ಯತೆಗಳು

- ಎಲ್ಲ ಜಮೀನುಗಳಲ್ಲಿ ಉತ್ಪಾದನೆಯಾದ ಸಾವಯುವ ವಸ್ತುವಿನಲ್ಲಿ ಮಾರುಕಟ್ಟೆಗೆ ಸಾಗಿ ಉಳಿದೆಲ್ಲವೂ ಸಾವಯುವ ಚಕ್ರದ ಗತಿಯಲ್ಲಿ ಭೂಮಿಗೆ ಮರಳುವಂತೆ ಕೃಷಿ ವಿಧಾನಗಳನ್ನು ಪುನರ್ ರೂಪಿಸಬೇಕು.
  ಇದಕ್ಕಾಗಿ- ಕಾಂಪೋಸ್ಟಿಂಗ್, ವರ್ಮಿಕಾಂಪೋಸ್ಟ್ ಪದ್ಧತಿ ಬಳಸುವುದು
- ರಾಜ್ಯದ ವಿವಿಧ ಭಾಗಗಳಲ್ಲಿ ಬೆಳೆ ಪದ್ಧತಿಗಳಿಗನುಗುಣವಾಗಿ ಮಿಶ್ರಬೆಳೆ ಪದ್ಧತಿ, ಬೆಳೆ ಆವರ್ತನ, ಹಸಿರೆಲೆ ಬೆಳೆಗಳನ್ನು ರೂಪಿಸುವುದು ಇತರೆ ಜೈವಿಕ ಗೊಬ್ಬರ ಪದ್ಧತಿಗಳನ್ನು ಅಳವಡಿಸುವುದು ರೈಜೋಬಿಯಂ, ಅಜೊಲಾ, ಪಾಚಿ ಇತ್ಯಾದಿ ಮತ್ತೂ ಕಡಿಮೆಯಿರುವ ಪೋಷಕಾಂಶ ಗಳನ್ನು ಮಣ್ಣಿನ ಪರೀಕ್ಷೆ ಆಧಾರದ ಮೇಲೆ ರಾಸಾಯನಿಕ ಗೊಬ್ಬರಗಳ ಮೂಲಕ ಒದಗಿಸುವುದು
- ಕೆಲ ಪ್ರದೇಶಗಳಲ್ಲಿ, ಕೆಲ ಹೊಲಗಳಲ್ಲಿ ಪೂರ್ಣವಾಗಿ ಸಾವಯುವ ಗೊಬ್ಬರದ ಆಧಾರದ ಮೇಲೆಯೇ ಉತ್ತಮ ಇಳುವರಿ ಪಡೆಯುವ ಬೆಳೆ ಪದ್ಧತಿಯನ್ನು ಯೋಜಿಸಬಹುದು. ಆದರೆ ದೊಡ್ಡ ಪ್ರಮಾಣದಲ್ಲಿ ಸಾಧ್ಯವಿಲ್ಲ. ಈ ಪದ್ಧತಿಯನ್ನು ರಾಜ್ಯದ ಜನತೆಯ ಆಹಾರದ ಅಗತ್ಯಗಳನ್ನು ಪೂರೈಸುವುದಕ್ಕೆ ಉಪಯೋಗಿಸ ಲಾಗುವುದಿಲ್ಲ.
- ಕೀಟ, ರೋಗ ಬಾಧೆಗಳ ವಿಷಯದಲ್ಲಿಯೂ ಈಗಾಗಲೇ ಖಚಿತಪಡಿಸಿಕೊಂಡ ಜೈವಿಕ ವಿಧಾನಗಳನ್ನು- ಕೀಟಗಳು, ಶಿಲೀಂಧ್ರಗಳು ಇತ್ಯಾದಿಗಳನ್ನು ಬಳಸುವುದು.
- ಉಳಿದ ಪಂಚಗವ್ಯ, ಜೀವಾಮೃತ ಇತ್ಯಾದಿ ವಿಧಾನಗಳನ್ನು ನಿಖರವಾದ ಹಾಗೂ 4-5 ವರ್ಷಗಳ ಪರೀಕ್ಷೆ, ವಿಶ್ಲೇಷಣೆ ಗೊಳಪಡಿಸಿ ಕಾರ್ಯಕಾರಣ ಸಂಬಂಧಗಳನ್ನು ಧೃಢಪಡಿಸಿ ಕೊಳ್ಳುವುದು, ಜೊಳ್ಳು ಪದ್ಧತಿಗಳನ್ನು ಬೇರ್ಪಡಿಸಿ ಗಟ್ಟಿ ಪದ್ಧತಿಗಳನ್ನು ಕಾಳುಗಳನ್ನು ಆರಿಸಿಕೊಂಡು ಪರಿಣಾಮಕಾರಿ ಯಾಗಿ ಬಳಸಿಕೊಳ್ಳುವುದು.

ಸಂದರ್ಶನ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ತೆಗೆಯುವುದು ಮುಳ್ಳು ಬೇಲಿ- ಸಿಗುತ್ತಿದ್ದುದು ಹುಲ್ಲು ಕತ್ತರಿಸಿದ ಕೂಲಿ!!

ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಜಾರಿಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯರಾದ ಹನುಮನಗೌಡ ಮದರಕಲ್. ಈ ಹೋರಾಟದ ಅನುಭವಗಳ ಕುರಿತ ಅವರ ಸಂದರ್ಶನ ಇಲ್ಲಿದೆ.



ಹನುಮನಗೌಡ ಮದರಕಲ್

ಜನಶಕ್ತಿ : ರೇಗಾ ಜಾರಿಗೆ ಬಂದ ಕಳೆದ ಮೂರು ವರ್ಷದಿಂದ ಬಡರೈತರಿಗೆ, ಕೃಷಿ ಕೂಲಿಕಾರರಿಗೆ ಈ ಯೋಜನೆ ತಲುಪಿಸಲು ಅವಿರತವಾಗಿ ಪ್ರಯತ್ನಿಸುತ್ತಿದ್ದೀರಿ ಈ ಸಂಬಂಧ ನಿಮ್ಮ ಅನುಭವವೇನು?

ಹನುಮನಗೌಡ ಮದರಕಲ್ : 'ರೇಗಾ' ಜಾರಿ ಬಂದು 3 ವರ್ಷ ಆದರೂ, ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದ 1 ವರ್ಷ ಕಾಲಹರಣವಾಯಿತು. ಉದ್ಯೋಗಚೀಟಿ ನೀಡುವುದನ್ನು 1 ವರ್ಷ ಮಾಡಿದರು. ಕರ್ನಾಟಕ ಪ್ರಾಂತ ರೈತ ಸಂಘ ನಮಗೆ ನೀಡಿದ ತರಬೇತಿಯಿಂದಾಗಿ ಈ ಯೋಜನೆ ಮಹತ್ವವನ್ನು ನಾವು ತಿಳಿಯುವಂತಾಯಿತು. ಆನಂತರ ನಡೆಸಿದ ನಿರಂತರ ಹೋರಾಟಗಳ ಪರಿಣಾಮದಿಂದ ಈಗ ಕಳೆದ 2 ವರ್ಷಗಳಿಂದ ಜಾರಿಯಾಗುತ್ತಿದೆ. ಎಡಪಕ್ಷಗಳ ಮುತುವರ್ಜಿಯಿಂದಾಗಿ ಕಾಯ್ದೆಯಾಗಿ ಜಾರಿಗೆ ಬಂದಿರುವ ಈ ಯೋಜನೆ ಜಾರಿಗೆ ಈಗಲೂ ಜಿಲ್ಲಾಡಳಿತ, ತಾಲ್ಲೂಕು ಆಡಳಿತ ಸೇರಿದಂತೆ ತಳಮಟ್ಟದಲ್ಲಿ ಅಸಹಕಾರ ಮುಂದುವರೆದಿದೆ. ಪ್ರತಿಯೊಂದಕ್ಕೂ ಹೋರಾಟ ಮಾಡಿಯೇ ಪಡೆಯಬೇಕಾದ ಸ್ಥಿತಿ ಇದೆ. ಉದ್ಯೋಗ ಚೀಟಿ ಪಡೆಯಲು, ಕೆಲಸಕ್ಕೆ ಅರ್ಜಿ ಹಾಕಲು, ಕೆಲಸ ಪಡೆಯಲು, ಕೆಲಸ ಮಾಡಿದ ನಂತರ ಕೂಲಿ ಪಡೆಯಲು, ಕನಿಷ್ಠ ಕೂಲಿಗಿಂತ ಕಡಿಮೆ ಬಿಲ್ ಮಾಡುವುದರ ವಿರುದ್ಧ, ಈ ಯೋಜನೆಯನ್ನು ದುರುಪಯೋಗಪಡಿಸಿ ಹಣ ತಿನ್ನುವ ಭ್ರಷ್ಟ ಆಡಳಿತದ ವಿರುದ್ಧ... ಹೀಗೆ ಪ್ರತಿಯೊಂದಕ್ಕೂ ಹೋರಾಟ ಮಾಡಿ ಈ ಯೋಜನೆ ಯಶಸ್ವಿಗೆ ಪ್ರತಿ ಹಂತದಲ್ಲೂ ಸೆಣಸಾಡಬೇಕಿರುವುದು ಹೇಗೆ ಭೂಮಾಲಿಕ ಸ್ಥಾಪಿತ ಹಿತಾಸಕ್ತಿ ಭ್ರಷ್ಟ ಅಧಿಕಾರಶಾಹಿ ಕೂಟ ಮಹತ್ವದ ಈ ಯೋಜನೆಯನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ತಿಳಿಯಲು ಸಾಧ್ಯವಾಗಿದೆ.

ಜನಶಕ್ತಿ: ರೇಗಾ ಯೋಜನೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಸ್ವರೂಪ ಏನು? ಮತ್ತು ಅದನ್ನು ಹೇಗೆ ಎದುರಿಸುತ್ತಿದ್ದೀರಿ?

ಹೆಚ್ಚಿನ ಈ ಯೋಜನೆ ಬಂದಿರುವ ಬಗ್ಗೆ ಜನಸಾಮಾನ್ಯರಲ್ಲಿ ಯಾವುದೇ ತಿಳುವಳಿಕೆ ಇಲ್ಲ. ಊರಿನ ಕೆಲವು ಶ್ರೀಮಂತ ಪುಡಾರಿಗಳಿಗೆ ಬಿಟ್ಟರೆ ಹೆಚ್ಚಿನವರಿಗೆ ಈ ವಿಷಯ ತಿಳಿಯದಂತೆ ನೋಡಿಕೊಳ್ಳಲಾಗಿದೆ. ಈ ಯೋಜನೆ ಬಗ್ಗೆ ಕೆಲವರು ಕೇಳಿದ್ದರೂ ಇದನ್ನು ಪಡೆಯುವ ವಿಧಾನದ ಬಗ್ಗೆ ಗೊತ್ತಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡ ಗ್ರಾಮ ಪಂಚಾಯ್ತಿಗಳ ಸ್ಥಾಪಿತ ಹಿತಾಸಕ್ತಿಗಳು ತಮಗೆ ಬೇಕಾದವರಿಗೆ ಬ್ಯಾಂಕ್ ಖಾತೆ ಮಾಡಿಸಿ ಹಣವನ್ನು ಮುಂಗಡವಾಗಿ ನೀಡಿ 3ರಿಂದ 4 ದಿನಗಳ ಕೆಲಸ ಮಾಡಿಸಿ ಹಣ ಲಪಟಾಯಿಸುತ್ತಿದ್ದಾರೆ. ಇಂಜಿನಿಯರ್‌ಗಳಿಗೆ ಕಮಿಷನ್ ನೀಡುವುದರಿಂದ ಸುಲಭವಾಗಿ ಬಿಲ್ ಮಾಡುತ್ತಿದ್ದು ಕೆಳಗಿನಿಂದ ಮೇಜರ್‌ನವರೆಗೂ ಹಣ ಹಂಚಿಕೆಯಾಗುತ್ತಿದೆ. ನಮ್ಮ ಪ್ರಾಂತ ರೈತ ಸಂಘ ಇದನ್ನು ವಿರೋಧಿಸಿ ಹೋರಾಟ ಮಾಡಿದೆ ಮತ್ತು ಸಂಘದ ಕಡೆಯಿಂದ ಅರ್ಜಿ ಹಾಕಿಸಿ ಉದ್ಯೋಗ ಪಡೆದಿದ್ದರಿಂದ ಈ ರೀತಿಯ ವ್ಯವಸ್ಥಿತ ಮೋಸ, ಸ್ಥಾಪಿತ ಹಿತಾಸಕ್ತಿಗಳ ಪ್ರೇರಣೆಯಿಂದ ಅರ್ಜಿ ಹಾಕಿದ್ದ ಕೂಲಿಕಾರರಿಗೂ ಸ್ವತಃ ಅರಿವು ಬಂತು. ಸಂಘದ ಕಡೆಯಿಂದ ಕೆಲಸ ಮಾಡಿದವರಿಗೆ ಕನಿಷ್ಟ ಕೂಲಿ 82 ರೂ. ಕೊಡಿಸಲು ಸಾಧ್ಯವಾಗಿದ್ದರೆ, ಕೆಲಸ ಮಾಡಿದ ದಿನದಲ್ಲಿ ಬೇರೆಯವರಿಗೆ 50 ಕ್ಕಿಂತ ಕಡಿಮೆ ಕೂಲಿ ಸಿಗುತ್ತಿತ್ತು. ಈ ರೀತಿಯಿಂದಾಗಿ ಭ್ರಷ್ಟಾಚಾರ ಬಯಲಿಗೆ ತಂದಿದ್ದರಿಂದ ಎಲ್ಲಾ ಕೂಲಿಕಾರರು ಒಗ್ಗಟ್ಟಾಗಿ ಸ್ಥಾಪಿತ ಹಿತಾಸಕ್ತಿಗಳ ಬಲ ಕುಗ್ಗಿಸಲು ಸಾಧ್ಯವಾಗಿದೆ.


ಜನಶಕ್ತಿ: ಈ ಯೋಜನೆಯ ಅಂಶಗಳನ್ನು ಜನರ ಬಳಿಗೆ ತೆಗೆದುಕೊಂಡು ಹೋದಾಗ ಯಾವ ರೀತಿ ನಿಮಗೆ ಜನರ ಸ್ಪಂದನೆ ಸಿಗುತ್ತಿದೆ?

ಹ.ಗೌ.ಮ.: ಜನರ ಪ್ರತಿಕ್ರಿಯೆ ಬಹಳ ಉತ್ತಮವಾಗಿದೆ. ನಮಗೆ ಕೆಲಸ ಕೊಡಿಸಲು ಬಂದಿದ್ದಾರೆ ಎಂದು ಜನ ಬಹಳ ಸಂತೋಷಪಡುತ್ತಿದ್ದಾರೆ. ಸಂಘದ ಬಗ್ಗೆ ಗೌರವ ಹೆಚ್ಚಾಗುತ್ತಿದೆ. ಇದನ್ನು ಬೆಳೆಯುತ್ತಿರುವ ರೈತಸಂಘದ ಸದಸ್ಯತ್ವದಲ್ಲೂ ಗುರುತಿಸಬಹುದು. ಈ ಯೋಜನೆ 365 ದಿನವೂ ಇರಬೇಕೆಂದು ಜನ ಬಯಸುತ್ತಿದ್ದಾರೆ. ಹೆಚ್ಚಾಗಿ ದಲಿತರು, ಮಹಿಳೆಯರು ಹೆಚ್ಚು ಹೆಚ್ಚು ಆಸಕ್ತರಾಗಿದ್ದಾರೆ. ಒಟ್ಟಿನಲ್ಲಿ ಅತ್ಯುತ್ತಮ ಸ್ಪಂದನೆಯಿಂದಾಗಿ ಈ ಯೋಜನೆ ಜಾರಿಗೆ ಇರುವ ಪಟ್ಟಭದ್ರ ಹಿತಾಸಕ್ತಿಗಳ ಅಡ್ಡಿಗಳು ಅಧಿಕಾರಿಗಳ ದುರ್ವರ್ತನೆಯನ್ನು ಸಮರ್ಥವಾಗಿ ಎದುರಿಸಲಾಗುತ್ತಿದೆ. ನಮ್ಮ ಜಿಲ್ಲೆಯ 4 ತಾಲ್ಲೂಕುಗಳ 24 ಗ್ರಾ.ಪಂಚಾಯತಿ ಫಲಾನುಭವಿಗಳು ಈ ಯೋಜನೆ ಸೇರಲು ಸಾಧ್ಯವಾಗಿರುವುದನ್ನು ನಾವು ಹೆಮ್ಮೆಯಿಂ ಗುರುತಿಸುತ್ತೇವೆ.

ಜನಶಕ್ತಿ: ಪಂಚಾಯ್ತಿ ಆಡಳಿತ ಮತ್ತು ಇಂಜಿನಿಯರ್‌ಗಳ ಅಸಹಕಾರ ಯಾವ ರೀತಿ ಇರುತ್ತದೆ ಮತ್ತು ಹೇಗೆ ಎದುರಿಸಲಾಗಿದೆ

ಹ.ಗೌ.ಮ. : ಕೆಲಸದ ಅರ್ಜಿ ಹಾಕಿದ ನಂ ಕೆಲಸ ಪಡೆದಾಗಲೂ ಕೆಲಸ ಮಾಡುವ ಸ್ಥಳ ಕಾಯಿದೆ ಪ್ರಕಾರ ಕುಡಿಯು ನೀರು, ನೆರಳಿನ ವ್ಯವಸ್ಥೆ, ಪ್ರಥ ಚಿಕಿತ್ಸೆ, ಆರೋಗ್ಯ ಪಾಲನೆ ಬೇಕೆಂತಲೇ ನಿರ್ಲ ವಹಿಸಲಾಗುತ್ತಿದೆ. 60 ವ ಮೇಲ್ಪಟ್ಟವರಿಗೆ, ಅಂಗವಿಕಲ ಯಾವುದೇ ರಿಯಾಯಿತಿಗಳ ಕೂಲಿ ಬಿಲ್ ಮಾಡುವಾಗ ಹಾಕುತ್ತಿಲ್ಲ. ಮಾಡಿರ ಕೆಲಸಗಳನ್ನು ಸರಿಯಾಗಿ ಅ ಮಾಡದೇ ಮಾಡಲಾಗುತ್ತಿದೆ. ಯ ಕೆಲಸ ಮಾಡಿದರೂ ಕನಿಷ್ಟ ಬೆಲೆಯನ್ನು ಮಾತ್ರ ಹಾಕಲಾಗುತ್ತಿದೆ. ಉದಾ: ದಟ್ಟವಾದ ಮುಳ್ಳುಬೇ ತೆಗೆದರೂ ತುಂಡು ಹುಲ್ಲು ಕತ್ತರಿಸಿದ ಕೂಲಿಯ ನೀಡಲಾಗುತ್ತಿದೆ. ಪ್ರತಿ 6 ದಿನಕ್ಕೆ ಒಂದು ಬಾರಿ ಕೂ ಪಾವತಿ ಆಗದಂತೆ ನೋಡಿಕೊಳ್ಳಲಾಗುತ್ತಿ ಪ್ರತಿಯೊಂದರಲ್ಲೂ ನಿಧಾನಗತಿ, ಉದಾಸೀ ಬೇಜವಾಬ್ದಾರಿ ವರ್ತನೆ ಎದ್ದುಕಾಣುತ್ತದೆ. ನ ಒತ್ತಡಕ್ಕೆ ಮಣಿದು ಜಿ.ಪಂ ಸಿ.ಇ.ಓ ಗದರಿಸಿದಾಗ ನಮಗೆ ಸಂಬಂಧಪಟ್ಟ ಕೆಲಸಗಳು ಸ್ವಲ್ಪ ಮುಂ ಹೋಗುತ್ತದೆ. ಇಂತಹ ದುಷ್ಟ ಕೂಟದಿಂದಲೇ ಯೋಜನೆಯ ಫಲ ಎಲ್ಲರಿಗೂ ತಲುಪದ ತಡೆಹಿಡಿಯಲಾಗಿದೆ. ಇಂತಹ ಎ ಸಂದರ್ಭದಲ್ಲೂ ಹೋರಾಟ ಮಾಡಿಯೇ ಯಶ ಪಡೆಯಲಾಗಿದೆ. ಈಗಲೂ ಇದನ್ನೇ ಮಾ ಜಿಲ್ಲೆಯ ಎಲ್ಲರಿಗೂ ಈ ಯೋಜನೆ ತಲುಪಿಸುತ್ತೇ

ಸಂದರ್ಶಿಸಿದವರು : ಟಿ.ಯ



ಜಿ. ನಾಗರಾಜು, ಕೆಪಿಆರ್‌ಎಸ್ ರಾಜ್ಯಸಮಿತಿ ಸದಸ್ಯರು

'ಗ್ರಾಮೀಣ ಶ್ರೀಮಂತರು ಕೂಲಿ ನೀಡದಂತೆ ತಡೆದಿದ್ದರು'

ಇದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಅನುಭವ

ಜನಶಕ್ತಿ: ಗಂಗಾವತಿ ತಾಲ್ಲೂಕಿನಲ್ಲಿ NREGA ಹೇಗೆ ನಡೆದಿದೆ?

ನಾಗರಾಜ್: ಗಂಗಾವತಿಯಲ್ಲಿ ಈ ಮೊದಲು ರೈತ ಸಂಘವೇ ಇರಲಿಲ್ಲ. ಅದರಲ್ಲೂ 2-3 ವರ್ಷಗಳಿಂದ ನಿಷ್ಕ್ರಿಯವಾಗಿತ್ತು. ಏಳು ಗ್ರಾಮಪಂಚಾಯ್ತಿಯಲ್ಲಿ ಈ ವರ್ಷದ ಆಧಾರದಲ್ಲಿ ಹೋದಾಗ 14 ಗ್ರಾಮಗಳಲ್ಲಿ ರೈತರ ಸಂಘ ಮಾಡಲು ಸಾಧ್ಯವಾಯಿತು. 58 ಗುಂಪುಗಳನ್ನು ರಚಿಸಿ, 2900 ರಷ್ಟು ಜನರನ್ನು ಒಳಗೊಂಡು 3100 ಕುಟುಂಬಗಳಿಗೆ ಜನವರಿಯಿಂದ ಕೆಲಸ ಕೊಡಿಸಲು ಸಾಧ್ಯವಾಗಿದೆ.

ಜನಶಕ್ತಿ: ಪಂಚಾಯತ್ ಆಡಳಿತಗಳು ಈ ಯೋಜನೆ ಜಾರಿಗೆ ಹೇಗೆ ಕೆಲಸ ಮಾಡುತ್ತಿವೆ?

ನಾಗರಾಜ್: ನಮ್ಮ ಜಿಲ್ಲೆಗೆ ಮಾರ್ಚ್ 2008 ರಲ್ಲಿ ಜಾರಿಗೆ ಬಂತು. ಡಿಸೆಂಬರ್ ವರೆಗೆ ತಾಲ್ಲೂಕಿನ 38 ಗ್ರಾಮ ಪಂಚಾಯತ್‌ಗಳಲ್ಲಿ ಕೂಲಿಕಾರರ ಹೆಸರೂ ಕೂಡಾ ನೊಂದಾವಣೆ ಆಗಿರಲಿಲ್ಲ. ಆಗ ನಾವು ರೈತ ಸಂಘದ ಹೆಸರಲ್ಲಿ ಮಧ್ಯಪ್ರವೇಶ ಮಾಡಿ ಜನರನ್ನು ಪಂಚಾಯತ್ ಮುಂದೆ ಅಣಿನೆರೆದು ಕೇಳಲು ಪ್ರೇರೇಪಿಸಿದೆವು. ಆಗಲೂ ಕೂಡಾ ನಮ್ಮ ಒತ್ತಡಕ್ಕೆ ಮಣಿದು ಪಂಚಾಯತ್‌ಗಳು ಕೆಲಸ ಮಾಡಲು ಆರಂಭಿಸಿದವು.

ಜನಶಕ್ತಿ: ಗ್ರಾಮೀಣ ಶ್ರೀಮಂತರು ಈ ಯೋಜನೆ ತಡೆಯಲು ಪ್ರಯತ್ನಿಸುವರೆ?

ನಾಗರಾಜ್: ನಮ್ಮ ಒತ್ತಡದಿಂದ ಯೋಜನೆ ಜಾರಿಗೊಂಡು ಕೂಲಿಕಾರರಿಗೆ ಕೆಲಸ ನೀಡಿದರೂ, ಗ್ರಾಮೀಣ ಶ್ರೀಮಂತರು ಮತ್ತು ರಾಜಕಾರಣಿಗಳು ಅಧಿಕಾರಿಗಳ ಮೇಲೆ ಒತ್ತಡ ಹೇರಿ ತಿಂಗಳುಗಟ್ಟಲೆ ಕೂಲಿ ಸಿಗದಂತೆ ನೋಡಿಕೊಂಡರು. ಕೂಲಿ ಸಿಗದ ಕೂಲಿಕಾರರು ನಿರಾಶರಾಗುವಂತೆ ಮಾಡುವ ಮೂಲಕ ಅವರು ಯೋಜನೆಯಲ್ಲಿ ಪಾಲ್ಗೊಳ್ಳದಂತೆ ನೋಡಿಕೊಂಡರು.

ಜನಶಕ್ತಿ: ಆಗ ನೀವೇನು ಮಾಡಿದಿರಿ?

ಕೇರಳ : ಬಂಡವಾಳಶಾಹಿ ಅಪಪ್ರಚಾರ ಮತ್ತು ಅಂತರಿಕ ಅನೈಕ್ಯತೆಯಿಂದಾಗಿ ಹಿನ್ನಡೆ

15 ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಭಾರೀ ನಷ್ಟ ಅನುಭವಿಸಿದೆ. ಅದು 27 ಸ್ಥಾನಗಳನ್ನು ಮತ್ತು 0.3ಶೇ. ಮತಗಳನ್ನು ಕಳಕೊಂಡಿದೆ. ಈ ನಷ್ಟ ಅದರ ಭದ್ರ ಕೋಟೆಗಳೆನಿಸಿದ ಪಶ್ಚಿಮ ಬಂಗಾಳ ಮತ್ತು ಕೇರಳ ಎರಡೂ ಕಡೆ ಸಂಭವಿಸಿದೆ. ಇದಕ್ಕೆ ಕಾರಣಗಳೇನು? ಭಾರತದ ಈ ಪ್ರಧಾನ ಎಡಪಕ್ಷದ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯ ಸಮಿತಿಗಳ ವಿಶ್ಲೇಷಣೆಗಳನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ.

ಒಂದೆಡೆ ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್)ದ ವಿರುದ್ಧ ದುಷ್ಟ ಅಪಪ್ರಚಾರ ಹಾಗೂ ಇನ್ನೊಂದೆಡೆ ಸಿಪಿಐ(ಎಂ)ನ ಆಂತರಿಕ ಅನೈಕ್ಯತೆ ಮತ್ತು ಎಲ್‌ಡಿಎಫ್‌ನಲ್ಲಿನ ವಿವಾದಗಳು ಕೇರಳದಲ್ಲಿ ತೀವ್ರ ಸ್ವರೂಪದ ಸೋಲಿಗೆ ಪ್ರಮುಖ ಕಾರಣಗಳು ಎಂದು ಮೇ 27 ಮತ್ತು 28ರಂದು ಸಭೆ ಸೇರಿದ ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಸಾಮಾನ್ಯವಾಗಿ ಅಖಿಲ ಭಾರತ ಪ್ರವೃತ್ತಿ ಕೇರಳದಲ್ಲಿ ಲೋಕಸಭಾ ಚುನಾವಣೆಗಳ ಮೇಲೆ ಪ್ರಭಾವ ಬೀರುತ್ತದೆ. ಈ ಬಾರಿ ಇದು ಕಾಂಗ್ರೆಸಿಗೆ ಪರವಾಗಿತ್ತು. ಆದರೂ ಕೇರಳದ ನಿರ್ದಿಷ್ಟ ಪರಿಸ್ಥಿತಿಗಳು ಫಲಿತಾಂಶಗಳ ಮೇಲೆ ಪ್ರಮುಖ ಸ್ಥಾನ ಬೀರಿವೆ ಎಂದು ಕೇರಳ ರಾಜ್ಯ ಸಮಿತಿ ಹೇಳಿದೆ.

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಚುನಾವಣಾ ಪ್ರಚಾರಕ್ಕಿಳಿದಿತ್ತು. ರಾಜ್ಯದಲ್ಲಿ ಸ್ವಯಂ-ಹಣಕಾಸಿನ ಕಾಲೇಜುಗಳ ಮೇಲೆ ಸಾಮಾಜಿಕ ಹತೋಟಿ ಹೊಂದುವ ಎಲ್‌ಡಿಎಫ್ ಸರಕಾರದ ಪ್ರಯತ್ನಗಳಿಂದ ಹೊಮ್ಮಿದ ವಿವಾದಗಳನ್ನು ಕಮ್ಯುನಿಸ್ಟ್-ವಿರೋಧಿ ಶಕ್ತಿಗಳು ಪರಿಣಾಮಕಾರಿಯಾಗಿ ಬಳಸಿಕೊಂಡವು. ಗುತ್ತೇದಾರಿ ಬಂಡವಾಳಶಾಹಿ ಮಾಧ್ಯಮಗಳು ಎಡ ಶಕ್ತಿಗಳ ವಿರುದ್ಧ ಅತ್ಯಂತ ವಿಷಯುಕ್ತ ಅಪಪ್ರಚಾರ ನಡೆಸಿದುವ. ಇದು ಮೊದಲ ಕಮ್ಯುನಿಸ್ಟ್ ಮಂತ್ರಿ ಮಂಡಳದ ವಿರುದ್ಧ ನಡೆದ 'ವಿಮೋಚನ ಸಮರ'ವನ್ನು ನೆನಪಿಸುವಂತಿತ್ತು.

ಪಿಡಿಪಿ ಈ ಚುನಾವಣೆಗಳಲ್ಲಿ ಎಲ್‌ಡಿಎಫ್‌ನೊಂದಿಗೆ ಸಹಕರಿಸಲು ನಿರ್ಧರಿಸಿದ್ದನ್ನು ಒಂದು ವಿವಾದವನ್ನಾಗಿ ಮಾಡುವಲ್ಲಿ ಯುಡಿಎಫ್ ಯಶಸ್ವಿಯಾಯಿತು. ವಾಸ್ತವದಲ್ಲಿ ಅದು ಎಲ್‌ಡಿಎಫ್‌ನ ಭಾಗವಾಗಿರಲಿಲ್ಲ, ಅಥವ ಯಾವುದೇ ಶರತ್ತಿನ ಮೇಲೆ ಎಲ್‌ಡಿಎಫ್‌ಗೆ ಬೆಂಬಲ ನೀಡಿರಲಿಲ್ಲ. ಬದಲಿಗೆ ನಿಜವಾಗಿಯೂ ಭಯೋತ್ಪಾದಕರೊಂದಿಗೆ ಸಂಬಂಧವಿರುವ ಎನ್‌ಡಿಎಫ್ ಅಥವಾ ಪಾಪ್ಯುಲರ್ ಫ್ರಂಟ್ ಕಾಂಗ್ರೆಸಿನೊಂದಿಗೆ ಸಂಪರ್ಕ ಹೊಂದಿತ್ತು. ಇದನ್ನು ಮರೆ ಮಾಚಲು ಕಾಂಗ್ರೆಸ್ ಈ ವಿವಾದವನ್ನು ಸೃಷ್ಟಿಸಿತು. ಇದು ಅದುವರೆಗೆ ಎಲ್‌ಡಿಎಫ್‌ನೊಂದಿಗಿದ್ದ ಕೆಲವು ವಿಭಾಗಗಳಲ್ಲಿ ತಪ್ಪು ಭಾವನೆ ಮೂಡಿಸಿತು.

ಕ್ರೈಸ್ತ ಪರೋಹಿತ ವರ್ಗ ಎಲ್‌ಡಿಎಫ್-ವಿರೋಧಿ ನಿಲುವು ತಳೆಯಿತು. ರೋಮನ್ ಕ್ಯಾಥೊಲಿಕ್ ಚರ್ಚ್ 50ರ ದಶಕದ ಕೊನೆಯ ಭಾಗದ 'ವಿಮೋಚನ ಸಮರ'ದ ದಿನಗಳಲ್ಲಿ ಮಾಡಿದಂತೆ ಹಗೆ ಸಾಧಿಸುವ ರೀತಿಯಲ್ಲಿ ಚುನಾವಣೆಗಳಲ್ಲಿ ಭಾಗವಹಿಸಿತು.

ಎಸ್‌ಎನ್‌ಸಿ-ಲವ್ಲೀನ್ ವಿವಾದವನ್ನೂ ಯುಡಿಎಫ್ ಬಳಸಿಕೊಂಡಿತು. ಮಾಧ್ಯಮಗಳು ಇದೇ ಈ ಚುನಾವಣೆಗಳ ಕೇಂದ್ರ ಪ್ರಶ್ನೆಯೆಂಬಂತೆ ಪ್ರಚಾರ ನಡೆಸಿದವು. ವಾಸ್ತವವಾಗಿ ಎಲ್‌ಡಿಎಫ್ ಸರಕಾರ ಮಾಡಿದ್ದೆಂದರೆ ಹಿಂದಿನ ಯುಡಿಎಫ್ ಸರಕಾರ ಮಾಡಿಕೊಂಡ ಈ ಒಪ್ಪಂದದಲ್ಲಿ ರಾಜ್ಯಕ್ಕೆ ಅನುಕೂಲಕರವಾದ ಶರತ್ತುಗಳನ್ನು ಸೇರಿಸಿದ್ದು. ಇದನ್ನು ರಾಜಕೀಯ ವಿವಾದವಾಗಿಸಲು ಸಿಬಿಐನ ದುರುಪಯೋಗ ನಡೆಸಲಾಯಿತು.

ಪಕ್ಷದ ಸಂಘಟನೆಯಲ್ಲಿ ಲೆನಿನ್‌ವಾದಿ ನೀತಿಗಳ ಉಲ್ಲಂಘನೆ ಪಕ್ಷದ ಹಿತೈಷಿಗಳಲ್ಲಿ ಮತ್ತು ಒಟ್ಟಾರೆಯಾಗಿ ಜನರಲ್ಲಿ ಕೆಟ್ಟ ಭಾವನೆ ಮೂಡಲು ಕಾರಣವಾಗಿದೆ ಎಂದೂ ಕೇರಳ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಈ ಬೆಳವಣಿಗೆ ಯುಡಿಎಫ್‌ನ ಅಪಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಬಾಧಕಗಳನ್ನು ಸೃಷ್ಟಿಸಿತು. ಎಲ್‌ಡಿಎಫ್ ಸರಕಾರದ ಕುರಿತ ವಿವಾದಗಳಿಂದಾಗಿ ಸರಕಾರದ ಸಾಧನೆಗಳನ್ನು ಜನಗಳ ಗಮನಕ್ಕೆ ತರುವಲ್ಲಿ ತೊಂದರೆಗಳಾದವು. ಮಾಧ್ಯಮಗಳ ಒಂದು ವಿಭಾಗ ಈ ಬಗ್ಗೆ ಪಕ್ಷದ ವಿರುದ್ಧ ಭಾರೀ ಅಪಪ್ರಚಾರ ನಡೆಸಿದ್ದರಿಂದ ಪಕ್ಷದ ಬಗ್ಗೆ ಜನಗಳಲ್ಲಿ ಬಹಳಷ್ಟು ತಪ್ಪು ಭಾವನೆಗಳು ನಿರ್ಮಾಣಗೊಂಡವು.

ಈ ಎಲ್ಲ ಪ್ರತಿಕೂಲ ಪರಿಸ್ಥಿತಿಗಳ ಅರಿವಿದ್ದ ಪಕ್ಷ 'ನವ ಕೇರಳ' ಪಾದಯಾತ್ರೆಗಳ ಮೂಲಕ ಜನಗಳಲ್ಲಿದ್ದ ತಪ್ಪು ಭಾವನೆಗಳನ್ನು ನೀಗಲು ಪ್ರಯತ್ನಿಸಿತು. ಇದು ಪಕ್ಷದಲ್ಲಿ ಹೊಸ ಆತ್ಮವಿಶ್ವಾಸವನ್ನೂ ಮೂಡಿಸಿತ್ತು. ಆದರೆ ಇದು ಫಲ ನೀಡಲಿಲ್ಲ ಎಂಬುದನ್ನು ಚುನಾವಣಾ ಫಲಿತಾಂಶಗಳು ತೋರಿಸಿವೆ. ಪ್ರಚಾರದ ವೇಳೆ ಇದು ಗಮನಕ್ಕೆ ಬಾರದ್ದು ಪಕ್ಷದ ಒಂದು ಗಂಭೀರ ದೌರ್ಬಲ್ಯ ಎಂದು ರಾಜ್ಯ ಸಮಿತಿ ಭಾವಿಸಿದೆ.

ಎಲ್‌ಡಿಎಫ್ ಮತಗಳಿಕೆ 2004ರಲ್ಲಿ 46.08ಶೇ. ಇದ್ದದ್ದು 41.89 ಶೇ.ಕ್ಕೆ ಇಳಿದಿದೆ. 1999ರಲ್ಲಿ ಇದು 43.68ಶೇ. ಇತ್ತು ಎಂಬುದನ್ನು ಗಮನಿಸಿದರೆ ಪಕ್ಷದ ನೆಲೆಯಲ್ಲಿ ದೊಡ್ಡ ವ್ಯತ್ಯಾಸವೇನೂ ಆಗಿಲ್ಲ ಎಂಬುದನ್ನು ಕಾಣಬಹುದು. ಆದರೂ ಪಕ್ಷ ಈ ಹಿನ್ನಡೆಯಿಂದ ಪಾಠ ಕಲಿಯುತ್ತದೆ, ಎಲ್‌ಡಿಎಫ್ ಸರಕಾರದ ಚಟುವಟಿಕೆಗಳನ್ನು ಹೆಚ್ಚು ದಕ್ಷಗೊಳಿಸಲು ಒಂದು ಸಮಯಬದ್ಧ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಹಾಗೂ ಚುನಾವಣಾ ಪ್ರಚಾರದ ವೇಳೆಯಲ್ಲಿ ಕಂಡು ಬಂದ ಕೆಲವು ಕೊರತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುತ್ತದೆ ಎಂದು ರಾಜ್ಯ ಸಮಿತಿ ಕೇರಳದ ಜನತೆಗೆ ಆಶ್ವಾಸನೆ ನೀಡಿದೆ. ○

ನಾಗರಾಜ್: ಮತ್ತೆ ಅದೇ ಜನರನ್ನು ಕೂಡಿಕೊಂಡು ಗ್ರಾಮ ಪಂಚಾಯತ್‌ಗಳ ಮುಂದೆ ಧರಣಿ, ಪ್ರತಿಭಟನೆಯಂತಹ ಕಾರ್ಯಕ್ರಮಗಳನ್ನು ಮಾಡಬೇಕಾಯಿತು. ಆಗಲೂ ಸಹ ಪಂಚಾಯತಿ ಕಾರ್ಯದರ್ಶಿಗಳು ಪಟ್ಟಭದ್ರರ ಒತ್ತಡಕ್ಕೆ ಮಣಿದು ಕೂಲಿ ನೀಡಲಿಲ್ಲ. ಮುಂದಿನ ಹಂತವಾಗಿ ತಾ. ಪಂಚಾಯತ್ ಮುಂದೆ ಹೋರಾಟ ಮಾಡಿ ನಮ್ಮ ಕೂಲಿ ಪಡೆದುಕೊಂಡೆವು.

ಜನಶಕ್ತಿ: ಹೈದರಾಬಾದ್ ಕರ್ನಾಟಕದಿಂದ ಕೂಲಿಕಾರರ ವಲಸೆ ಸಾಮಾನ್ಯ. ಈ ಯೋಜನೆ ಅದನ್ನು ತಡೆಯಲು ಸಹಕಾರಿಯಾಗಿದೆಯೇ?

ನಾಗರಾಜ್: ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಗಂಗಾವತಿ ಒಂದು ನೀರಾವರಿ ಪ್ರದೇಶ. ಇಲ್ಲಿ ಕೂಲಿಕಾರರಿಗೆ ಕೆಲಸವೇನೋ ಸಿಗುತ್ತದೆ. ಒಣ ಪ್ರದೇಶದ ಜನ ತಾಲ್ಲೂಕಿನಿಂದ ವಲಸೆ ಹೋಗುತ್ತಿದ್ದರು. ಗಂಗಾವತಿ ನೀರಾವರಿ ಪ್ರದೇಶವಾದ್ದರಿಂದ ಇಲ್ಲಿ ಉದ್ಯೋಗ ಖಾತ್ರಿ ಯೋಜನೆ ಯಶಸ್ವಿಯಾಗುವುದಿಲ್ಲವೆಂಬ ತೀರ್ಮಾನಕ್ಕೆ ಜಿಲ್ಲಾಡಳಿತ ಬಂದಿತ್ತು. ಆದರೆ ನಮ್ಮ ರೈತ ಸಂಘದ [illegible] ನಿಲುವನ್ನು ಸುಳ್ಳೆಂದು ಸಾಬೀತು ಮಾಡಿತು. ಈಗ ಕೊಪ್ಪಳ ಜಿಲ್ಲೆಯಲ್ಲೇ ಉದ್ಯೋಗ ಖಾತ್ರಿ ಜಾರಿಯಲ್ಲಿ ಗಂಗಾವತಿ ತಾಲ್ಲೂಕು ಪ್ರಥಮ ಸ್ಥಾನದಲ್ಲಿದೆ. ರಾಜ್ಯದಲ್ಲಿ 2ನೇ ಸ್ಥಾನ. ಪರಿಣಾಮ ವಲಸೆಯೂ ಕೂಡಾ ಕಡಿಮೆಯಾಗಿದೆ.

ಜನಶಕ್ತಿ: ಈ ಯೋಜನೆಯ ಜಾರಿಯಿಂದ ಕೂಲಿಕಾರರಿಗೆ ಯಾವ ರೀತಿಯ ಆತ್ಮಸ್ಥೈರ್ಯ ಬಂದಿದೆ?

ನಾಗರಾಜ್: ಭೂಮಾಲಿಕರ ಮುಂದೆ ತಲೆತಗ್ಗಿಸಿ ಕೂಲಿಕೇಳುವುದರಿಂದ ಮುಕ್ತಿ ಸಿಕ್ಕಂತಾಗಿದೆ. ಸರ್ಕಾರಿ ಯೋಜನೆಯಾಗಿರುವುದರಿಂದ ಸಾಮಾಜಿಕ ತಾರತಮ್ಯಕ್ಕೆ ಹೆಚ್ಚಿನ ಅವಕಾಶವಿಲ್ಲ. ಭೂಮಾಲೀಕರು ನೀಡುವ ಕೂಲಿಗಿಂತ ಹೆಚ್ಚಿರುವುದರಿಂದ ಹೆಚ್ಚೆಚ್ಚು ಜನರು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ತಮ್ಮ ಹಕ್ಕನ್ನು ಹೋರಾಟದಿಂದ ಪಡೆಯಬಹುದೆಂಬ ಆತ್ಮಸ್ಥೈರ್ಯ ಬಂದಿದೆ. ಭೂಮಾಲೀಕರೂ ಕೂಡಾ ತಾವು ನೀಡುವ ಕೂಲಿಯನ್ನು ಹೆಚ್ಚಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ಜನಶಕ್ತಿ: ರೈತರ ನಡುವೆ ಈ ಯೋಜನೆ ರೈತರ ವಿರೋಧಿ ಎಂಬ ಅಪಪ್ರಚಾರವಿದೆ. ನೀವು ರೈತ ಸಂಘವಾಗಿ ಅದನ್ನು ಹೇಗೆ ಎದುರಿಸಿದ್ದೀರಿ?

ನಾಗರಾಜ್: ಈ ಯೋಜನೆಯ ವಿರೋಧಿಗಳು



ಯೋಜನೆಯನ್ನು ವಿಫಲಗೊಳಿಸಲು ಇದನ್ನೂ ಒಂದು ಸಂಚಾಗಿ ಬಳಸಿದರು. ಆದರೆ ನಮ್ಮ ರೈತ ಸಂಘ ರೈತರಿಗೆ ಸರಿಯಾಗಿ ಅಂದರೆ NREGA ನಲ್ಲಿ ಕೇವಲನೂರು ದಿನ ಮಾತ್ರ ಕೆಲಸ ಸಿಗುತ್ತೆ, ಉಳಿದ ದಿನಗಳು ರೈತರಲ್ಲಿ ದುಡಿಯಬಹುದು, ಮತ್ತು ಸಣ್ಣ ಹಾಗೂ ಮಧ್ಯಮ ರೈತರೂ ಕೂಡಾ ಈ ಯೋಜನೆಯಡಿ ತಮ್ಮ ಹೊಲಗಳಲ್ಲಿ ಕೆಲಸ ಮಾಡಿಕೊಳ್ಳಬಹುದು ಎಂಬ ವಿಚಾರಗಳನ್ನು ರೈತರ ನಡುವೆ ಪ್ರಚಾರ ಮಾಡಿದ್ದರಿಂದ ರೈತರೂ ಕೂಡಾ ಈಗ ಈ ಯೋಜನೆಗೆ ಸಹಕಾರ ನೀಡುತ್ತಿದ್ದಾರೆ.

ಜನಶಕ್ತಿ: ಕೂಲಿಕಾರರ ಗುಂಪು, ಐಕ್ಯತೆಯನ್ನು ಹೇಗೆ ಕಾಪಾಡಿಕೊಂಡಿದ್ದೀರಿ?

ನಾಗರಾಜ್: ನಮ್ಮ ಗುಂಪುಗಳನ್ನು ಕಂಡು ದಂಗಾದ ಈ ಯೋಜನೆಯ ವಿರೋಧಿಗಳು ಈ ಗುಂಪುಗಳನ್ನು ಒಡೆಯಲು ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಇದರಿಂದ ತಮ್ಮ ರಾಜಕೀಯ ಅಸ್ತಿತ್ವಕ್ಕೆ ಧಕ್ಕೆ ಬರಬಹುದೆಂದು ಭೀತಿಗೊಂಡ ಅವರು, ಪಕ್ಷಾತೀತವಾಗಿ (ಕಾಂಗ್ರೆಸ್ ಮತ್ತು ಬಿಜೆಪಿ) ಒಂದಾಗಿ ತಾವೂ ಕೂಡಾ ಗುಂಪುಗಳನ್ನು ರಚಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಸಾಧ್ಯವಾಗದ ಕಾರಣ, ನಮ್ಮ ಗುಂಪುಗಳಲ್ಲೇ ತಮ್ಮನ್ನು ಸೇರಿಸಿಕೊಳ್ಳಲು ಮತ್ತು ನಾಯಕತ್ವ ಪಡೆದುಕೊಳ್ಳಲು ಒತ್ತಡ ಹೇರುತ್ತಿದ್ದಾರೆ. ನಾವು ಇದೆಲ್ಲವನ್ನೂ ಮೆಟ್ಟಿ ಮುನ್ನಡೆಯಬೇಕಿದೆ. ○



ಬಂದರಿಗೆ ಬರುವ ಲಾರಿಗಳಿಂದ ಅದಿರು ತೆಗೆದು ಲಾರಿ ಸ್ವಚ್ಛಗೊಳಿಸುವ ಕಾರ್ಮಿಕರಿಗೆ ಸಿಗುವ ಕೂಲಿಯೇ ಕಡಿಮೆ ಇರುವಾಗ, ಆ ಕೂಲಿಯನ್ನು ನುಂಗುವ ಸಂಚಿನ ಬಲಾಢ್ಯರ ಗುಂಪು 'ಸೊಸೈಟಿ' ಯೊಂದನ್ನು ರಚಿಸಿಕೊಂಡು ಬರಬೇಕೇ? ಈಗ ಕಾರ್ಮಿಕರು ಜಾಗೃತರಾಗಿದ್ದಾರೆ. ಬಲಾಢ್ಯರ ಅನ್ಯಾಯದ ವಿರುದ್ಧ ಸೆಣೆಸಾಟ ನಡೆದಿದೆ.

ಉತ್ತರ ಕನ್ನಡ

ಕೆ.ಮಹಾಂತೇಶ್

ಬಂದರು ಕಾರ್ಮಿಕರ ಕೂಲಿ ನುಂಗುವ ಬಲಾಢ್ಯರ 'ಸೊಸೈಟಿ'

ಹೋರಾಟದ ಹಾದಿಯಲ್ಲಿ ಬೆಲೇಕೇರಿ ಕಾರ್ಮಿಕರು

ಉತ್ತರ ಕನ್ನಡ ಜಿಲ್ಲೆ ಕರ್ನಾಟಕದ ಸುಂದರ, ರಮಣೀಯ ಪ್ರವಾಸಿ ತಾಣಗಳಲ್ಲೇ ಅತ್ಯಂತ ಹೆಸರುವಾಸಿಯಾದದ್ದು. ಈ ಜಿಲ್ಲೆಯಲ್ಲಿನ ಪ್ರವಾಸಿ ಸ್ಥಳಗಳನ್ನು ನ್ಯೂಜಿಲ್ಯಾಂಡ್ ಪ್ರವಾಸಿ ತಾಣಗಳಂತೆ ಅತ್ಯಂತ ಸ್ವಚ್ಛ - ಸುಂದರ - ಅಹ್ಲಾದಕರವಾಗಿವೆ ಎಂದು ಬಣ್ಣಿಸಲಾಗುತ್ತದೆ. ಈ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಧುಮುಕ್ಕಿ ಹರಿಯುತ್ತ ಅರಬ್ಬಿ ಸಮುದ್ರ ಸೇರುವ ಜಲಪಾತಗಳಿಗೆ ಲೆಕ್ಕವೇ ಇಲ್ಲ. ಇಲ್ಲಿನ ಸುಂದರ ಕಡಲ ತೀರಗಳು ಪ್ರತಿನಿತ್ಯ ಪ್ರವಾಸಿಗರಿಂದ ತುಂಬಿರುತ್ತವೆ. ರಾಷ್ಟ್ರಕವಿ ರವೀಂದ್ರನಾಥ ಠಾಗೋರ್ ಕಾರವಾರದ ಕಡಲ ತೀರದಲ್ಲಿಯೇ ಹಲವಾರು ದಿನಗಳನ್ನು ಕಳೆದು ತಮ್ಮ ಕಾವ್ಯ ಕೃಷಿ ನಡೆಸಿದ್ದರು ಎನ್ನುವುದರಿಂದಲೇ ಈ ಕಡಲಿನ ಸೊಬಗು ಎಷ್ಟೆಂದು ಅರ್ಥೈಸಬಹುದು.

ಇಂತಹ ಉತ್ತರ ಕನ್ನಡ ಜಿಲ್ಲೆಗೆ ಇತ್ತೀಚಿನ ವರ್ಷಗಳಲ್ಲಿ ಹಲವಾರು ವಿವಿಧ ತೆರನಾದ ಯೋಜನೆಗಳು ಜಾರಿಗೊಂಡಿರುವುದು ಗೊತ್ತಿರುವ ಸಂಗತಿ. ಇಂತಹ ಯೋಜನೆಗಾಗಿ ತಮ್ಮ ಮನೆ-ಮಠ, ಭೂಮಿಯನ್ನು ನೀಡಿ ಅಂತಿಮವಾಗಿ ಸರ್ಕಾರ ಘೋಷಿಸಿದ ಪರಿಹಾರ ಯೋಜನೆಗಳು ಸರಿಯಾಗಿ ಜಾರಿಯಾಗದೇ ನಿರಾಶ್ರಿತರಾಗಿರುವ ಸಾವಿರಾರು ಕುಟುಂಬಗಳು ಇಲ್ಲಿವೆ.

ಸರ್ಕಾರದ ಅಭಿವೃದ್ಧಿ ಕಾರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿರುವ ಈ ನಿರಾಶ್ರಿತರ ಪರಿಸ್ಥಿತಿ ಈಗ ಬೆಂಕಿಯಿಂದ ಬಾಣಲೆಗೆ ಎಂಬಂತಾಗಿದೆ.

ಈ ಜಿಲ್ಲೆಯ ಅಂಕೋಲ ತಾಲೂಕಿನ ಬೆಲೇಕೇರಿ ಎಂಬುದು ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಿರುವ ಒಂದು ಪುಟ್ಟ ಬಂದರು. ಆ ಬಂದರು ಸಮೀಪವೇ ಸೀಬರ್ಡ್ ಯೋಜನೆಯಲ್ಲಿ ಎಲ್ಲವನ್ನು ಕಳೆದುಕೊಂಡವರು ನೆಲೆಸಿರುವ ತಾಣವೊಂದಿದೆ. ಅದೇ 'ಸೀಬರ್ಡ್ ನಿರಾಶ್ರಿತರ ಕಾಲೋನಿ' ಹೀಗೆ ಸೀಬರ್ಡ್ ಯೋಜನೆಯಿಂದ ನಿರಾಶ್ರಿತರಾದವರಲ್ಲಿ ಬಹುಸಂಖ್ಯೆಯಲ್ಲಿರುವವರು 'ಹಾಲಕ್ಕಿ ಗೌಡರು' ಎನ್ನುವ ಬುಡಕಟ್ಟು. ಅವರೊಂದಿಗೆ 'ನಾಡವರು' ಮತ್ತು 'ಕುಮಾರ ಪಂಥ'ಕ್ಕೆ ಸೇರಿದವರಿದ್ದಾರೆ. ಇದರಲ್ಲಿ 'ಹಾಲಕ್ಕಿ ಗೌಡರು' ಮನೆ - ಜಮೀನುಗಳನ್ನು ಬಹುಪಾಲು ಕಳೆದುಕೊಂಡಿದ್ದಾರೆ. 'ನಾಡವರು' ಜಮೀನುಗಳನ್ನು ಅಲ್ಪಸ್ವಲ್ಪ ಪ್ರಮಾಣದಲ್ಲಿ ಕಳೆದುಕೊಂಡವರು.

ಬಳ್ಳಾರಿಯ ಅದಿರೇ ಶೋಷಣೆಯ ಅಸ್ತ್ರ

ಬಳ್ಳಾರಿಯ ಸುತ್ತಮುತ್ತ ಆರಂಭಗೊಂಡ ಅದಿರು ಗಣಿಗಾರಿಕೆಯು ದೂರದ ಅಂಕೋಲದ ಸಮುದ್ರ ತೀರಕ್ಕೂ ತನ್ನ ಕರಾಳ ಕೈಗಳನ್ನು ಚಾಚಿತು. ಯಾಕೆಂದರೆ ಇವತ್ತು ಬಳ್ಳಾರಿಯ ಗಣಿಗಳು ಬಾಚುತ್ತಿರುವ ಸಾವಿರಾರು ಕೋಟಿ ರೂಪಾಯಿಗಳ ಅದಿರು ವಿಲೇವಾರಿಯಾಗುವುದು ಬೆಲೇಕೇರಿಯಿಂದಲೇ. ಚೀನಾ, ಜಪಾನ್, ಆಸ್ಟ್ರೇಲಿಯಾ, ಮತ್ತಿತರೆ ದೇಶಗಳಿಗೆ ಅದಿರು ಬೆಲೇಕೇರಿ ಬಂದರಿಂದಲೇ ನಿತ್ಯ ಸಾಗಿಸಲ್ಪಡುವುದು.

ಬಲಾಢ್ಯರಿಗೆ ವರದಾನವಾದ ಮಣ್ಣು

ಬಳ್ಳಾರಿ ಮತ್ತಿತರೆ ಕಡೆಗಳಿಂದ ಪ್ರತಿನಿತ್ಯ (ಸೀಸನ್ ಟೈಂನಲ್ಲಿ) ಏನಿಲ್ಲವೆಂದರೂ ಒಂದು ಸಾವಿರ ಲಾರಿಗಳು ಬೆಲೇಕೇರಿ ಬಂದರಿಗೆ ಅದಿರನ್ನು ತರುತ್ತವೆ. ಹೀಗೆ ಬರುವ ಅದಿರನ್ನು ಹಡುಗುಗಳಿಗೆ ತುಂಬಿಸಿ ವಿದೇಶಗಳಿಗೆ ಕಳಿಸುವ ಜವಾಬ್ದಾರಿಯನ್ನು ಶ್ರೀ ಮಲ್ಲಿಕಾರ್ಜುನ ಮತ್ತು ಸಾಲಗಾಂವ್ಕರ್ ಮತ್ತು ಅಧೋನಿ ಎನ್ನುವ ಮೂರು ಕಂಪನಿಗಳು ನಿರ್ವಹಿಸುತ್ತಿವೆ. ನೂರಾರು ಲಾರಿಗಳಲ್ಲಿ ಬರುವ ಅದಿರನ್ನು ಬೃಹದಾಕಾರದ ಜೆಸಿಬಿಗಳಿಂದ ಅನ್‌ಲೋಡಿಂಗ್ ಮಾಡಿಸಲಾಗುತ್ತದೆ. ಆದರೆ ಆ ಯಂತ್ರಗಳು ಲಾರಿಯಲ್ಲಿರುವ ಸಂಪೂರ್ಣ ಮಣ್ಣನ್ನು ಸ್ವಚ್ಛಗೊಳಿಸಲು (ಖಾಲಿ ಮಾಡಲು) ಸಾಧ್ಯವಿಲ್ಲ. ಹೀಗಾಗಿ ನೂರಾರು ಕೆ.ಜಿ.ಯಷ್ಟು ಮಣ್ಣು ಲಾರಿಯಲ್ಲೇ ಉಳಿಯುತ್ತದೆ. ಆ ಉಳಿಯುವ ಅದಿರನ್ನು ಪ್ರತಿಲಾರಿಗೆ ಇಬ್ಬರಂತೆ ಕಾರ್ಮಿಕರು ಕೆಲಸ ಮಾಡಿ ಖಾಲಿ ಮಾಡುತ್ತಾರೆ.

ಕಥೆ ಆರಂಭವಾಗುವುದೇ ಇಲ್ಲಿಂದ...

ಹೀಗೆ ಪ್ರತಿಲಾರಿಯನ್ನು ಖಾಲಿ ಮಾಡಿದರೆ ಲಾರಿಯವರಿಂದ 150.00 (ಪ್ರತಿಲಾರಿಗೆ) ಸಿಗುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಅದಿರನ್ನು ರಾಶಿ-ರಾಶಿ ಹಾಕುತ್ತಿರುವುದರಿಂದ ಮತ್ತು ಸಾಗಿಸಲ್ಪಡುತ್ತಿರುವುದರಿಂದ ಸುತ್ತಮುತ್ತಲಿನ ಈ ಪ್ರದೇಶವೆಲ್ಲಾ ಕೆಂಪು - ಕೆಂಪು. ಅಲ್ಲದೆ ಈ ಕಾರಣದಿಂದಾಗಿ ಅಲ್ಲಿನ ಕೃಷಿಯೋಗ್ಯ ಭೂಮಿಯೆಲ್ಲಾ ಬಂಜರಾಗಿವೆ. ಒಟ್ಟಿನಲ್ಲಿ ಇಲ್ಲಿನ ಬದುಕೆಲ್ಲಾ ಧೂಳುಮಯ. ಈ ಬಗ್ಗೆ ಸ್ಥಳೀಯರು ಹೋರಾಟ ಮಾಡಿದ ಪರಿಣಾಮ ರಫ್ತುಗಾರಿಕೆ ಮಾಡುತ್ತಿರುವ ಕಂಪನಿಗಳು ಪ್ರತಿ ಮನೆಗೆ ಮತ್ತು ಪ್ರತಿ ಜಮೀನಿಗೆ ಇಂತಿಷ್ಟು ಪರಿಹಾರವನ್ನು (ಮಾಸಿಕ ಮತ್ತು ವಾರ್ಷಿಕವಾಗಿ) ನಿಗದಿ ಮಾಡಿ ನೀಡುವ ಸಂಪ್ರದಾಯ ಆರಂಭಿಸಲಾಯಿತು. ಒಂದು ಕಡೆ ಲಾರಿಯವರಿಂದ ಬರುವ 150 ರೂ. ಮತ್ತು ಕಂಪನಿಯವರು ತೊಂದರೆಗೊಳಗಾದ ಮನೆ ಮತ್ತು ಜಮೀನಿಗೆ ನೀಡುವ ಪರಿಹಾರ ಮೊತ್ತ ಇವೆರೆಡನ್ನು ಕಬಳಿಸುವ ಸಂಚು ರೂಪಿಸಿದರು ಕೆಲವು ಬಲಾಢ್ಯರು. ಹೀಗೆ ಬರುವ ಲಕ್ಷಾಂತರ ರೂಪಾಯಿ ಲೂಟಿ ಹೊಡೆಯುವುದಕ್ಕಾಗಿಯೇ ಅವರು 'ಶ್ರೀ ಶಾಂತದುರ್ಗಾ ಅರಣ್ಯ ಕೂಲಿಕಾರ್ಮಿಕರ ಸಂಘ' ಎಂಬ ಸೊಸೈಟಿಯೊಂದನ್ನು ಹುಟ್ಟು ಹಾಕಿದರು. ಇಲ್ಲಿ ಸಹಕಾರ ತತ್ವ ಎಂಬುದೇನಿಲ್ಲ. ಗುತ್ತಿಗೆದಾರರು ಮಾಡುವ ಶೋಷಣೆಯೇ ಇಲ್ಲಿ ನಡೆಯುವುದು. ಹೆಸರು ಮಾತ್ರ ಸಹಕಾರ ಸಂಘ. ಇಲ್ಲಿ ಪ್ರತಿನಿತ್ಯ ಮೂರು ಕಂಪನಿಗಳ ಅಡಿಯಲ್ಲಿ ಸುಮಾರು ಒಂದು ಸಾವಿರ ಕಾರ್ಮಿಕರು ಅನ್‌ಲೋಡಿಂಗ್ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಕಾರ್ಮಿಕರು ಪ್ರತಿ ಲಾರಿಯನ್ನು ಖಾಲಿ ಮಾಡಿದಾಗಲೂ ರೂ. 150 ಸಿಗುತ್ತಿತ್ತು. ಈ ಹಣವು ಈಗ ಸೊಸೈಟಿಗೆ ಸಂದಾಯವಾಗಬೇಕು ಎಂಬ ಶರತ್ತನ್ನು ವಿಧಿಸಿ ಲಾರಿಯವರಿಂದ ಸೊಸೈಟಿ ರಶೀದಿ ಮೂಲಕ ನೇರ ಸಂಗ್ರಹಕ್ಕೆ ಇಳಿಯಿತು. ಲಾರಿಗಳಿಂದ 150 ರೂ. ವಸೂಲಿ ಮಾಡುತ್ತಿರುವ ಈ ಸೊಸೈಟಿ ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಕೇವಲ 70 ರೂಪಾಯಿ (ಒಬ್ಬರಿಗೆ 35 ರಂತೆ) ಮಾತ್ರ ನೀಡುವ ಅನ್ಯಾಯ ಆರಂಭಿಸಿತು. ಇದರಿಂದಾಗಿ ಈ ಸೊಸೈಟಿಗೆ ಸಲೀಸಾಗಿಯೇ ಪ್ರತಿನಿತ್ಯ ಸಾವಿರಾರು ರೂಪಾಯಿಗಳು ಸಂದಾಯವಾಗತೊಡಗಿತು. ಮಾತ್ರವಲ್ಲ, ಪ್ರತಿ ಮನೆಗೂ ಸಿಗುತ್ತಿದ್ದ ಮಾಸಿಕ 4000 ರೂ. ಮತ್ತು ಜಮೀನು ಪರಿಹಾರಗಳು ಕೂಡಾ ಸೊಸೈಟಿ ಪಾಲಾಗತೊಡಗಿತು.

ಜಾಗೃತರಾದ ಕೂಲಿಕಾರ್ಮಿಕರು


ಹೀಗೆ ಪ್ರತಿನಿತ್ಯ ಬರುವ ನೂರಾರು ಲಾರಿಗಳಿಂದ ಕಾರ್ಮಿಕರಿಗೆ ನೇರ ಸಂದಾಯವಾಗುತ್ತಿದ್ದ ಹಣ ಸೊಸೈಟಿ ಸೇರಿತು.

ಈ ಅದಿರು ಚಟುವಟಿಕೆ ನಡೆಯುತ್ತಿರುವ ಪ್ರದೇಶ ಅತ್ಯಂತ ಅಪಾಯಕಾರಿಯಾದದ್ದು. ಓಡಾಡಲು ರಸ್ತೆಯಿಲ್ಲ, ಬೀದಿ ದೀಪಗಳಿಲ್ಲ, ಕೆಲಸದ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ, ಸಾರಿಗೆ ಯಾವುದೇ ವ್ಯವಸ್ಥೆಗಳಿಲ್ಲ. ಸೀಸನ್ ಟೈಂನಲ್ಲಿ ಇಲ್ಲಿನ ಕಾರ್ಮಿಕರನ್ನು ಹಗಲು ರಾತ್ರಿಗಳೆನ್ನದೆ ಹೆಂಗಸರು - ಗಂಡಸರು ಎನ್ನದೇ ದುಡಿಸಿಕೊಳ್ಳಲಾಗುತ್ತಿದೆ. ತಮ್ಮ ಪಾಳಿ ಬರುವವರೆಗೂ ಆ ಕಾರ್ಮಿಕರು ಅಲ್ಲಿಯೇ ಕಳೆಯಬೇಕು. ಪಾಳಿ ಬರುವ ಸಮಯದಲ್ಲಿ (ಇಬ್ಬಿಬ್ಬರು ಕಾರ್ಮಿಕರಿಗೆ ಒಂದೊಂದು ಲಾರಿ ಬಿಟ್ಟು ನೀಡಿರುತ್ತಾರೆ) ಯಾರಾದರೂ ಶೌಚಾಲಯಕ್ಕೆ, ನೀರಿಗಾಗಿ, ಊಟಕ್ಕಾಗಿ ಆಕಸ್ಮಾತ್ ಹೋದರೆ

ಅಂಕೋಲಾ : ರೈತ ಕಾರ್ಮಿಕ ಕೇಂದ್ರ ಉದ್ಘಾಟನೆ

ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕು ಪ್ರದೇಶದಲ್ಲಿ ಬೆಳೆದುಬರುತ್ತಿರುವ ರೈತ ಮತ್ತು ಕಾರ್ಮಿಕ ಚಳುವಳಿಗೆ ಒಂದು ಕಛೇರಿಯ ಅವಶ್ಯಕತೆಯ ಹಿನ್ನೆಲೆಯಲ್ಲಿ 'ರೈತ ಕಾರ್ಮಿಕ ಕೇಂದ್ರ' ದಿನಾಂಕ 25.05.2009 ರಂದು ಉದ್ಘಾಟನೆಗೊಂಡಿತು.

ಉದ್ಘಾಟಕರಾಗಿ ಆಗಮಿಸಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ಪ್ರಸನ್ನಕುಮಾರ್ ಮಾತನಾಡಿ ಅಂಕೋಲಾದಲ್ಲಿ ಚಳುವಳಿ ಬೆಳವಣಿಗೆಗೆ ಈ ಕಛೇರಿ ಅನುಕೂಲವಾಗುತ್ತಿದ್ದು ರೈತರ, ಕಾರ್ಮಿಕರ ಬೇಡಿಕೆಗಳ ಮೇಲೆ ಹೋರಾಟಕ್ಕೆ ಅನುಕೂಲವಾಗಿ ಬರಲಿದೆ ಎಂದರು.



ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಸಿಐಟಿಯು ಜಿಲ್ಲಾಧ್ಯಕ್ಷರಾದ ತಿಲಕ ಗೌಡ ವಹಿಸಿದ್ದರು. ಬಂದರು ಕಾರ್ಮಿಕರ ಸಂಘದ ಕಾರ್ಯದರ್ಶಿ ನಾಗೇಶಗೌಡ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಅಂಗನವಾಡಿ ನೌಕರರ ಸಂಘದ ನಾಯಕಿ ಲಲಿತಾ ಶಿರಗೇರಿ ವಂದಿಸಿದರು. ಹಂಚು ಕಾರ್ಮಿಕರ ಸಂಘದ ಮುರ್ಕುಂಡಿ ನಾಯ್ಕ, ದಾಮೋದರ ನಾಯ್ಕ, ಕಟ್ಟಡ ಕಾರ್ಮಿಕರ ಸಂಘ ತಾಲ್ಲೂಕು ಕಾರ್ಯದರ್ಶಿ ರಾಜುಗೌಡ, ಪ್ರಾಂತ ರೈತ ಸಂಘದ ಸಂಚಾಲಕ ಗೌರೀಶ ನಾಯಕ ಮುಂತಾದ ಮುಖಂಡರು ಉಪಸ್ಥಿತರಿದ್ದರು.

…ಯಿತು. ಅವರಿಗೆ ಅವತ್ತಿನ ದುಡಿಮೆಯೇ ಇಲ್ಲ. …ಹ ಎಲ್ಲಾ ಪರಿಸ್ಥಿತಿಗಳನ್ನೂ ಎದುರಿ ಕೆಲಸ …ಾಡಿದರೂ ಅವರ ಬೆವರಿನಪಾಲು ಅವರಿಗೆ …ಗುತ್ತಿಲ್ಲ ಎನ್ನುವ ಸ್ಥಿತಿ. ಇದನ್ನು ಅರಿತು ಜಾಗೃತರಾದ …ಲ್ಲಿನ ಕಾರ್ಮಿಕರು ಕಳೆದ ವರ್ಷವಷ್ಟೇ 'ಬೆಲೇಕೇರಿ …ಂದರು ಕಾರ್ಮಿಕ ಸಂಘ'ವನ್ನು ಸ್ಥಾಪಿಸಿ, ಅದನ್ನು …ರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ …ಡರೇಷನ್‌ಗೆ ಸಂಯೋಜನೆಗೊಳಿಸಿ ತಮಗೆ …್ಯಾಯಬದ್ಧವಾಗಿ ಸಿಗಬೇಕಾದ ಬೇಡಿಕೆಗಳಿಗಾಗಿ …ಮುಂದಾದರು. ಮಾತ್ರವಲ್ಲ ಅದಿರು ರಫ್ತು …ಮಾಡುತ್ತಿರುವ ಕಂಪನಿಗಳೂ ಮತ್ತು 'ಸೊಸೈಟಿ'ಗೂ …ನೋಟಿಸ್‌ಗಳನ್ನು ನೀಡಿದರು.

…ಬೆಚ್ಚಿಬಿದ್ದ ಶೋಷಕರು

ಯಾವಾಗ ಬೆಲೇಕೇರಿ ಕಾರ್ಮಿಕರೆಲ್ಲಾ ಸೇರಿ …ಂಬಾವುಟದ ಅಡಿಯಲ್ಲಿ ಒಂದಾದರೋ …್ಯರ' ಸೊಸೈಟಿಯಲ್ಲಿ ಬೆವರಿಳಿಯಲು …ವಾಯಿತು. ಕೂಡಲೇ ಜಾಗೃತರಾದ …ಸೊಸೈಟಿಯವರು ಹಲವಾರು ತಿಂಗಳುಗಳಿಂದ ಬಾಕಿ …ಉಳಿಸಿಕೊಂಡಿದ್ದ ಮನೆ ಪರಿಹಾರಗಳ ಸಾವಿರಾರು …ರೂಪಾಯಿಗಳನ್ನು ವಿತರಿಸಿದರು. ಇದಾದ ನಂತರ …ಬಳ್ಳಾರಿಯಲ್ಲಿ ಅದಿರು ವಹಿವಾಟು …ಸ್ಥಗಿತಗೊಂಡಿದ್ದರಿಂದ ಬೆಲೇಕೇರಿಯಲ್ಲೂ ಕೆಲಸ …ಕಡಿಮೆಯಾಯಿತು.

…ಚುರುಕುಗೊಂಡ ಹೋರಾಟ

ಏಪ್ರಿಲ್ ತಿಂಗಳಲ್ಲಿ ಪುನಃ ಅದಿರು …ಚಟುವಟಿಕೆಗಳು ನಿಧಾನವಾಗಿ ಪ್ರಾರಂಭವಾದವು. …ಇದೇ ಸಮಯಕ್ಕಾಗಿ ಕಾದಿದ್ದ ಕಾರ್ಮಿಕರು ತಮ್ಮ ನ್ಯಾಯಬದ್ಧ ಕೂಲಿಗಾಗಿ ಸಂಬಂಧಿಸಿದವರಿಗೆಲ್ಲಾ ನೋಟಿಸ್ ನೀಡಿ ಹೋರಾಟದ ಎಚ್ಚರಿಕೆ ನೀಡಿದರು. ಆದರೆ ಸೊಸೈಟಿಯವರು ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗೆ ಸ್ಪಂದಿಸುವ ಬದಲು ವಾಮಮಾರ್ಗದಲ್ಲಿ ಕಾರ್ಮಿಕನ್ನು ಇಬ್ಭಾಗಿಸಿ, ಜಾತಿ ಲೆಕ್ಕಾಚಾರ ಮಾಡಿದರು. ಅಷ್ಟೊತ್ತಿಗಾಗಲೇ ಅಂಕೋಲದಲ್ಲಿದ್ದ ತಹಶೀಲ್ದಾರ್ ಈ ವಿಷಯದ ಗಂಭೀರತೆ ಅರಿತು ಕಾರ್ಮಿಕರ ಪರವಾಗಿ ಹುಬ್ಬಳ್ಳಿಯಲ್ಲಿರುವ ಸಹಾಯಕ ಕಾರ್ಮಿಕ ಆಯುಕ್ತರನ್ನು ಸಂಪರ್ಕಿಸಿ ಸಂಧಾನ ಮಾತುಕತೆ ಏರ್ಪಡಿಸಿದರು.



ಮಾತಿಗೆ ತಪ್ಪಿದ ಸೊಸೈಟಿ

ಅದರಂತೆ ಕಾರ್ಮಿಕ ಮುಖಂಡರು - ಕಾರ್ಮಿಕ ಅಧಿಕಾರಿಗಳು ಮತ್ತು ಸೊಸೈಟಿ ಮತ್ತು ಕಂಪನಿ ಪ್ರತಿನಿಧಿಗಳು ಅಂಕೋಲ ತಹಶೀಲ್ದಾರ್ ಕಛೇರಿಯಲ್ಲಿ ನಡೆದ ಸಂಧಾನ ಮಾತುಕತೆಯಲ್ಲಿ ಪಾಲ್ಗೊಂಡರು. ಅಲ್ಲಿ ವಾದ ವಿವಾದಗಳು ನಡೆದು ನಂತರದಲ್ಲಿ ಸೊಸೈಟಿಯವರು ಈ ಹಿಂದಿನ ರೂ. 70 ರ ಬದಲಾಗಿ 100 ರೂ. ಕೂಲಿ ನೀಡಲು ಒಪ್ಪಿಗೆ ಸೂಚಿಸಿದರು. ಮಾತ್ರವಲ್ಲ ಕಾರ್ಮಿಕರಿಗೂ ಯಥಾಸ್ಥಿತಿ ಕೆಲಸ ನೀಡಲು ಒಪ್ಪಿದರು. ಆದರೆ ಆ ಮಾತುಕತೆಯ ಮಾರನೇ ದಿನವೇ ತಮ್ಮ ಮಾತಿನಿಂದ ಹಿಂದಕ್ಕೆ ಸರಿದ ಸೊಸೈಟಿಯವರ ಕೇವಲ ತಮ್ಮ ಜಾತಿಯ ಮತ್ತು ಸಂಬಂಧಿಗಳನ್ನು ಮಾತ್ರವೇ ಕೆಲಸಕ್ಕೆ ಸೇರಿಸಿಕೊಂಡು ನೂರಾರು ಜನರಿಗೆ ಕೆಲಸ ನಿರಾಕರಿಸಿದರು. ಹೀಗೆ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ತೀರ್ಮಾನವನ್ನು ಗಾಳಿಗೆ ತೂರಿದರು. ಇದಾದ ನಂತರ ಬೇರೆ ದಾರಿಯಿಲ್ಲದೇ ಬೆಲೇಕೇರಿಗೆ ಆಗಮಿಸುವ ಎಲ್ಲಾ ಅದಿರು ಲಾರಿಗಳನ್ನು ತಡೆಯುವ ಚಳುವಳಿಯನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಅಲ್ಲದೆ ಕೆಲಸ ನಿರಾಕರಣೆ ಸಂಬಂಧದ ಕೇಸೊಂದನ್ನು ಹುಬ್ಬಳ್ಳಿಯ ಕಾರ್ಮಿಕ ನ್ಯಾಯಾಲಯದಲ್ಲಿ ದಾಖಲಿಸಲಾಯಿತು. ಇದೀಗ ಈ ಸಂಬಂಧ ಎರಡು ಸುತ್ತಿನ ಸಂಧಾನ ಮಾತುಕತೆಗಳು ನಡೆದಿದ್ದರೂ ಸೊಸೈಟಿಯವರು ತಮ್ಮ ಹಠದಿಂದ ಹಿಂದಕ್ಕೆ ಸರಿದಿಲ್ಲ. ಬದಲಾಗಿ ಜನರನ್ನು ಜಾತಿಯ ಹೆಸರಲ್ಲಿ ಎತ್ತಿ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಮತ್ತು ಈ ಹಿಂದಿನ ತೀರ್ಮಾನಕ್ಕೆ ಬದ್ಧರಾಗುವ ಬದಲು ಸಂಧಾನ ಮಾತುಕತೆಗೆ ವಕೀಲರನ್ನು ನೇಮಿಸುವ ಮೂಲಕ ಸಂಧಾನ ಮಾತುಕತೆಯನ್ನು ವಿಫಲಗೊಳಿಸಲು ಯತ್ನಿಸುತ್ತಿದ್ದಾರೆ. ಆದರೆ ಹಲವಾರು ದಶಕಗಳಿಂದಲೂ ನಿರಂತರ ಶೋಷಣೆಗೆ ಒಳಗಾಗುತ್ತಲೇ ಬಂದ ಇಲ್ಲಿನ ಕಾರ್ಮಿಕರಲ್ಲಿ ಇದೀಗ ವರ್ಗ ಪ್ರಜ್ಞೆ ಬೆಳೆಯಲಾರಂಭಿಸಿದೆ. ಅದೀಗ ಹಲವು ಹಂತದ ಹೋರಾಟದ ಮೂಲಕ ವ್ಯಕ್ತಗೊಂಡಿದೆ. ಬಡ ಕಾರ್ಮಿಕರನ್ನು ಶೋಷಿಸುವ ಪರಿಸ್ಥಿತಿ ಹೀಗೆ ಮುಂದುವರೆದರೆ ಅದು ಮುಂದೊಂದು ದಿನ ತೀವ್ರ ಸಂಘರ್ಷವಾಗಿ ಹೊರಹೊಮ್ಮುವ ಎಲ್ಲಾ ಸಾಧ್ಯತೆಗಳಿವೆ.

ಉತ್ತರ ಕನ್ನಡ ಜಿಲ್ಲೆಯ ಸಿಐಟಿಯು ಸಮಿತಿ ಹಾಗೂ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕ ಫೆಡರೇಷನ್‌ಗಳು ಈ ಹೋರಾಟದಲ್ಲಿ ಮೊದಲಿನಿಂದಲೂ ಸಕ್ರಿಯವಾಗಿ ಪಾಲ್ಗೊಂಡು ಈ ಚಳುವಳಿಗೆ ಬೆಂಬಲ, ಸಹಕಾರವನ್ನು ನೀಡುತ್ತಿವೆ. ಅಲ್ಲದೆ ಮುಂದೆಯೂ ಈ ಪ್ರದೇಶದಲ್ಲಿ ಈ ಚಳುವಳಿಯನ್ನು ಮುಂದೆ ತೀವ್ರಗೊಳಿಸುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಹಾಗೊಂದು ವೇಳೆ ಬೆಲೇಕೇರಿ ಕಾರ್ಮಿಕರು ಮುಂದೆ ನಡೆಸಬೇಕೆಂದಿರುವ ಚಳುವಳಿ ಕೇವಲ ಆ ಪ್ರದೇಶಕ್ಕೆ ಸೀಮಿತವಾಗದೆ ಇತರೆಡೆಯೂ ಪ್ರಭಾವ ಬೀರುವ ಚಳುವಳಿಯಾಗಲಿದೆ.

○

ಸಾವಯವ ಕೃಷಿ ಸಾಧ್ಯಾಸಾಧ್ಯತೆಗಳು

ಪು… ರಿಂದ

ಆಶ್ರಮಗಳಿಗೆ ಹಣ ಹಂಚಲಾಗಿದೆ. ಲೋಕಸಭಾ ಚುನಾವಣೆಗಳಲ್ಲಿಯೂ ಸಾವಯುವ ಕೃಷಿಯನ್ನು ಕೋಮುವಿಭಜನೆ ಮಾಡಲು ಬಳಸಿಕೊಳ್ಳಲಾಗಿದೆ.

ಸಾವಯುವ ಕೃಷಿ ಬಗ್ಗೆ ಮಾರ್ಕ್ಸ್‌ವಾದಿ ವಿಚಾರಗಳು

ಕೃಷಿಯ ಸಾವಯವತೆ ಮತ್ತು ರಾಸಾಯನಿಕಗಳ ಬಳಕೆ ಬಗ್ಗೆ ಪರಿಸರ ಮಾಲಿನ್ಯ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ವಿಶ್ಲೇಷಣೆ ಮಾಡಿದವರು ಮತ್ತು ವಾದಗಳನ್ನು ಮಂಡಿಸಿದ ಮೊದಲಿಗರಲ್ಲಿ ಮಾರ್ಕ್ಸ್ ಪ್ರಮುಖರು. ಮಾರ್ಕ್ಸ್, ಎಂಗೆಲ್ಸ್‌ರ ನಂತರ ಲೆನಿನ್ ಮತ್ತು ಕಾರ್ಲ್ ಕೌತ್‌ಸ್ಕಿಯವರು ಈ ವಿಷಯದ ಹೆಚ್ಚಿನ ಅಧ್ಯಯನ ನಡೆಸಿದ್ದಾರೆ. ಕೆಳಗಿನ ಹೇಳಿಕೆಗಳು ಅವರ ವಿಶ್ಲೇಷಣೆಯನ್ನು ಪ್ರತಿಫಲಿಸುತ್ತವೆ.

"ಶ್ರಮ ಒಂದೇ ಭೌತಿಕ ಸಂಪತ್ತಿನ, ಶ್ರಮದಿಂದ ಉ…ದನೆಯಾದ ಉಪಯೋಗ ಮೌಲ್ಯಗಳ ಮೂಲ ಅ… ಶ್ರಮವು ಸಂಪತ್ತಿನ ತಂದೆಯಾದರೆ ಭೂಮಿ ಅದರ ತಾಯಿ."

"ಬಂಡವಾಳಶಾಹಿ ಕೃಷಿಯಲ್ಲಿನ ಪ್ರಗತಿಯೆಲ್ಲಾ ಕಾರ್ಮಿಕನನ್ನು ದರೋಡೆ ಮಾಡುವ ಕಲೆಯ ಪ್ರಗತಿ ಮಾತ್ರವೇ ಅಲ್ಲ, ಮಣ್ಣನ್ನು ದರೋಡೆಮಾಡುವ ಕಲೆಯೂ ಹೌದು. ಮಣ್ಣಿನ ಫಲವತ್ತತೆಯನ್ನು ನಿರ್ದಿಷ್ಟ ಸಮಯದ ವರೆಗೆ ಹೆಚ್ಚಿಸುವ ಬಗೆಗಿನ ಪ್ರಗತಿ ಆ ಫಲವತ್ತತೆಯ ದೀರ್ಘಕಾಲದ ಮೂಲಗಳನ್ನು ನಾಶ ಮಾಡುವ ದಿಕ್ಕಿನ ಪ್ರಗತಿಯೂ ಹೌದು. ಬಂಡವಾಳಶಾಹಿ ಉತ್ಪಾದನೆಯ ಎಲ್ಲಾ ಸಂಪತ್ತಿನ ಮೂಲಗಳಾದ ಮಣ್ಣು ಮತ್ತು ಕಾರ್ಮಿಕನನ್ನು ಒಟ್ಟಿಗೆ ಕುಂದಿಸುತ್ತದೆ."

"ಬಂಡವಾಳಶಾಹಿ ಕೃಷಿಯು ಕೃಷಿಯಲ್ಲಿ ತೊಡಗಿದ ಜನಸಂಖ್ಯೆಯನ್ನು ನಿರಂತರವಾಗಿ ಕಡಿಮೆಯಾಗುತ್ತಿರುವ ಕನಿಷ್ಟ ಮಟ್ಟಕ್ಕೆ ಇಳಿಸುತ್ತದೆ ಮತ್ತು ದೊಡ್ಡ ನಗರಗಳಲ್ಲಿ ಸಂದಣಿಗೊಂಡ ಕೈಗಾರಿಕಾ ಜನಸಂಖ್ಯೆಯೊಂದಿಗೆ ಮುಖಾಮುಖಿ ಯಾಗಿಸುತ್ತದೆ. ಜೀವನದ ಸ್ವಾಭಾವಿಕ ನಿಯಮಗಳಿಂದ ನಿರ್ದೇಶಿಸಲ್ಪಟ್ಟ ಸಾಮಾಜಿಕ ಕೊಳು ಕೊಡೆಯ ಸಾಮರಸ್ಯವನ್ನು ರಿಪೇರಿಯಾಗದಷ್ಟು ಮುರಿದು ಹಾಕುವ ಪರಿಸ್ಥಿತಿಯನ್ನು ನಿರ್ಮಿಸುತ್ತದೆ. ಅದರ ಫಲವಾಗಿ ಮಣ್ಣಿನ ಶಕ್ತಿ ವ್ಯರ್ಥವಾಗುತ್ತದೆ. ಕೃಷಿ ಉತ್ಪನ್ನಗಳ ವಾಣಿಜ್ಯವು ಈ ಕ್ರಿಯೆಯನ್ನು ಒಂದು ದೇಶದ ಗಡಿಗಳಿಂದ ಆಚೆ ಒಯ್ಯುತ್ತದೆ."

ಲಂಡನ್ ನಗರ ಒಂದರಲ್ಲಿಯೇ ಇಡೀ ಸ್ಯಾಕ್ಸನ್ ಸಂಸ್ಥಾನ'ದಲ್ಲಿ ಉತ್ಪತ್ತಿಯಾಗುವುದಕ್ಕಿಂತ ಹೆಚ್ಚು ಗೊಬ್ಬರ ಪ್ರತಿದಿನ ಸಮುದ್ರಕ್ಕೆ ಸುರಿಯಲ್ಪಡುತ್ತದೆ. ಈ ಗೊಬ್ಬರ ಲಂಡನ್ ನಗರವನ್ನು ವಿಷಮಯ ಮಾಡುವುದನ್ನು ತಪ್ಪಿಸುವುದಕ್ಕಾಗಿ ಎಂತಹ ಬೃಹತ್ ರಚನೆಗಳನ್ನು ಮಾಡಬೇಕಾಗಿದೆ, ಎಷ್ಟೊಂದು ಹಣವನ್ನು ವ್ಯಯಿಸಬೇಕಾಗಿದೆ ಎಂಬುದನ್ನು ಗಮನಿಸಿದರೆ ಪಟ್ಟಣ ಮತ್ತು ಹಳ್ಳಿಗಳ ನಡುವಣ ವೈರುಧ್ಯವನ್ನು ತೊಡೆದು ಹಾಕಬೇಕು ಎಂಬ ಮಾರ್ಕ್ಸ್‌ವಾದದ ಮೂಲಭೂತ ಆಶಯಕ್ಕೆ ಪ್ರಮುಖ ಆಧಾರವನ್ನು ಒದಗಿಸುತ್ತದೆ.

ಈ ಹೇಳಿಕೆಗಳನ್ನು ಸಾರಾಂಶ ರೂಪವಾಗಿ ಹೀಗೆ ಹೇಳಬಹುದು

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಾಭದ ಆಸೆಗಾಗಿ ಮಣ್ಣಿನ ಫಲವತ್ತತೆಯನ್ನು ದೋಚಲಾಗುತ್ತದೆ. ನಗರಗಳ ಬೆಳವಣಿಗೆ ಮತ್ತು ನಗರ ಹಾಗು ಹಳ್ಳಿಗಳ ನಡುವಣ ವೈರುಧ್ಯದ ತೀವ್ರತೆಯಿಂದಾಗಿ ಕೃಷಿಯಲ್ಲಿನ ಸಾವಯುವ ಚಕ್ರ ವಿಘಟನೆಯಾಗುತ್ತದೆ. ಬೆಳೆದ ಜಾಗದಲ್ಲಿಯೇ ಬೆಳೆಗಳನ್ನು ಉಪಯೋಗಿಸಿದರೆ ಮಲ ಮೂತ್ರಗಳ ಮೂಲಕ ಮಣ್ಣಿನಿಂದ ಹೊರತೆಗೆದ ಸಾರ ಮರಳಿ ಮಣ್ಣಿಗೆ ದೊರಕುತ್ತದೆ. ಆದರೆ ನಗರೀಕರಣದಿಂದ ಬೆಳೆಗಳು ಹೆಚ್ಚಾಗಿ ನಗರಗಳ ಜನರು, ಅಲ್ಲಿರುವ ಹಾಲಿನ ಡೈರಿ ಹೋಟೇಲುಗಳು ಇತ್ಯಾದಿಗಳಲ್ಲಿ ಉಪಯೋಗಿಸಲ್ಪಟ್ಟು, ವಿಸರ್ಜಿಸಲ್ಪಟ್ಟು ಕಡೆ ನಗರಗಳಲ್ಲಿ ಸಾವಯವ ತ್ಯಾಜ್ಯ ದೊಡ್ಡ ಪ್ರಮಾಣದಲ್ಲಿ ರೋಗಕ್ಕೆ ಕಾರಣವಾಗುತ್ತದೆ. ಪರಿಸರ ಮಾಲಿನ್ಯವನ್ನು ಉಂಟು ಮಾಡುತ್ತದೆ. ಮತ್ತೊಂದು ಕಡೆ ಬೆಳೆಗಳು ಮಣ್ಣಿನಿಂದ ಸೆಳೆದ ಸಾರ ಮಣ್ಣಿಗೆ ಮರಳದೆ ಮಣ್ಣಿನ ಫಲವತ್ತತೆ ಕುಗ್ಗುತ್ತಾ ನಡೆದು ಅದನ್ನು ನಿರವಯುವ (ಸಾವಯುವವಲ್ಲದ) ವಸ್ತುಗಳಿಂದ(ರಾಸಾಯನಿಕ ಗೊಬ್ಬರಗಳಿಂದ ತುಂಬಬೇಕಾಗುತ್ತದೆ. ರಾಸಾಯನಿಕ ಗೊಬ್ಬರಗಳ ತಯಾರಿಕೆಗಾಗಿ ಪೆಟ್ರೋಲಿಯಂ ಹಾಗೂ ಇತರ ಖನಿಜಗಳು ಅನವಶ್ಯವಾಗಿ ವ್ಯಯಿಸಲ್ಪಡುತ್ತದೆ. ಆ ಕ್ರಿಯೆಯಲ್ಲಿ ಮತ್ತಷ್ಟು ವೆಚ್ಚದ ಜತೆಗೆ ಪರಿಸರ ಮಾಲಿನ್ಯವನ್ನು ಉಂಟು ಮಾಡುತ್ತದೆ. ಬಂಡವಾಳಶಾಹಿ ಕೃಷಿ ಪದ್ಧತಿಗಳು ಹಾಗೂ ಕೃಷಿಯ ಜಾಗತಿಕ ವಾಣಿಜ್ಯವೂ ಸಾವಯುವ ಚಕ್ರದ ವಿಘಟನೆ ಕ್ರಿಯೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ.

○

ಜಗದಗಲ

ಶರತ್‌ಚಂದ್ರ

ಒಬಾಮಾ ಭಾಷಣಗಳು ಜಗತ್ತನ್ನು ಬದಲಾಯಿಸುವಂತಿದ್ದರೆ....?

ಒಬಾಮಾ ಭಾಷಣಗಳೇ ಜಗತ್ತನ್ನು ಬದಲಾಯಿಸುವಂತಿದ್ದರೆ..ಎಷ್ಟು ಚೆನ್ನಾಗಿತ್ತು! ಇಷ್ಟರೊಳಗೆ ನಾವು (ಕನಿಷ್ಟ ಒಬಾಮಾ) 'ನಂಬಬಹುದಾದ ಬದಲಾವಣೆಗಳು' ಎಲ್ಲಾ ಆಗಿ ಬಿಟ್ಟಿರುತ್ತಿತ್ತು. ಹಲವು ಹೊಸ 'ಆರಂಭ'ಗಳು ಆಗಿರುತ್ತಿತ್ತು. ಆದರೆ ಭಾಷಣ ಮತ್ತು ಬದಲಾವಣೆಗಳ ನಡುವೆ ದೊಡ್ಡ ಕಂದಕ ಇದೆ. ಭಾಷಣಗಳಿಂದ ಬದಲಾವಣೆಗಳು ಆಗುವುದಿಲ್ಲ ಎಂದೇನಿಲ್ಲ. ಆದರೆ..


ಇವೆಲ್ಲಾ ಅನಿಸಿದ್ದು ಇತ್ತೀಚೆಗೆ ಕೈರೋದಲ್ಲಿ 'ಮುಸ್ಲಿಂ ಜಗತ್ತ'ನ್ನು (ಹಾಗಂದರೇನು ಅಂದಿರಾ?! ಇಂಡೋನೇಶ್ಯಾದಿಂದ ಸುಡಾನ್‌ವರೆಗಿನ ಪ್ರದೇಶಕ್ಕೆ ಅವರು ಹಾಗಂತಾರೆ) ಉದ್ದೇಶಿಸಿ ಒಬಾಮಾರ 'ಹೊಸ ಆರಂಭ'ದ ಚಾರಿತ್ರಿಕ ಭಾಷಣ ಕೇಳಿದಾಗ. ಒಬಾಮಾರ ಅಧ್ಯಕ್ಷೀಯ ಚುನಾವಣೆಯ ಆರಂಭದಿಂದ ಹಿಡಿದು ಈ ವರೆಗೆ ಅವರ ಪ್ರಮುಖ ಭಾಷಣಗಳೆಲ್ಲಾ 'ಚಾರಿತ್ರಿಕ ಭಾಷಣಗಳೇ. ಅವರ ಭಾಷಣದ 'ಲೇಖಕ'ನಿಗೆ ಚರಿತ್ರೆಯ ಪ್ರಜ್ಞೆ ಚೆನ್ನಾಗಿ ಇರುವುದರಿಂದಲೋ ಏನೋ ?! ಅವರ ಭಾಷಣಗಳನ್ನು ಕೇಳಿದವರೆಲ್ಲಾ ಅವರು ನಂಬಿರುವ ಬದಲಾವಣೆಗಳು ಎಲ್ಲಾ ಆಗೇ ಬಿಡುತ್ತವೆ ಎಂದು ನಂಬಿ ಬಿಡುವಂತೆ ಮಾಡುತ್ತವೆ. ಬದಲಾಗಿ ಅವರ ನಂಬಿಕೆಗಳೇ 'ಚರಿತ್ರೆ'ಗೆ ಸೇರಿಬಿಡಬಹುದು ಎಂಬ ಅನುಮಾನ ಸಹ ಬರುವುದಿಲ್ಲ.

ಇಡೀ 'ಮುಸ್ಲಿಂ ಜಗತ್ತು' ನಂಬಿತೋ ಬಿಟ್ಟಿತೋ ಗೊತ್ತಿಲ್ಲ. ಕೈರೋ ವಿಶ್ವ ವಿದ್ಯಾಲಯದಲ್ಲಿ ಸೇರಿದವರು ನಂಬಿದರು ಅಂತ ಅವರ ಸರಣಿ ಚಪ್ಪಾಳೆ ಹೇಳುತ್ತಿತ್ತು. ಆಮೇಲೂ ಮಾಧ್ಯಮಗಳಲ್ಲಿ (ಮುಸ್ಲಿಂ ಜಗತ್ತಿನವನ್ನು ಸೇರಿಸಿ) ಹಲವು 'ವಾಹ್ ವಾಹ್'ಗಳು 'ಚಪ್ಪಾಳೆ'ಗಳು ಕೇಳಿ ಬಂದವು. ಎಂಟು ವರ್ಷಗಳಿಂದ ಬುಶ್ ಭಾಷಣ ಕೇಳಿದವರಿಗೆ ಒಬಾಮಾ ಭಾಷಣ ರೋಮಾಂಚನ ಉಂಟು ಮಾಡಿದ್ದರೆ ಆಶ್ಚರ್ಯವಿಲ್ಲ. ಬುಶ್ ಅಷ್ಟು ಪರಿಸರ ಕೆಡಿಸಿದ್ದರು.

ಬುಶ್ ಯುಗದ 'ಇಸ್ಲಾಮಿಕ್ ಭಯೋತ್ಪಾದನೆ' ('ಎಲ್ಲಾ ಮುಸ್ಲಿಮರು ಭಯೋತ್ಪಾದಕರಲ್ಲ, ಆದರೆ ಎಲ್ಲಾ ಭಯೋತ್ಪಾದಕರು ಮುಸ್ಲಿಮರು') ಮತ್ತು (ಮುಸ್ಲಿಂ ಮತ್ತು ಕ್ರಿಶ್ಚಿಯನ್) 'ನಾಗರಿಕತೆಗಳ ನಡುವೆ ಸಂಘರ್ಷ'('ನೀವು ನಮ್ಮೊಂದಿಗೆ ಇದ್ದೀರಿ, ಇಲ್ಲವೆ ಅವರೊಂದಿಗೆ ಇದ್ದೀರಿ') ಗಳ 'ಭಾಷೆ'ಯಿಂದ ಖಂಡಿತ ಬದಲಾವಣೆ ಆಗಿದೆ. ಶಾಂತಿ, ಪ್ರಜಾಪ್ರಭುತ್ವ, ಮಹಿಳಾ ಸಮಾನತೆ, ಸರ್ವ ಧರ್ಮ ಸಮಭಾವ, ಇಸ್ಲಾಂ ಬಗ್ಗೆ ಬಣ್ಣದ ಸುಂದರ ಮಾತುಗಳನ್ನು ಆಡಿದರು. ಆದರೆ ಅಮೆರಿಕ 'ಮುಸ್ಲಿಂ ಜಗತ್ತು' ಬಗ್ಗೆ ಅನುಸರಿಸಿದ ಪ್ರಮುಖ ತಪ್ಪು ನೀತಿಗಳಲ್ಲಿ ಬದಲಾವಣೆ ಅಥವಾ ಅವರ ಮೇಲೆ ಮಾಡಿದ ಅಪರಾಧಗಳಿಗೆ ಪ್ರಾಯಶ್ಚಿತ್ತ ಮಾಡುವ 'ಹೊಸ ಆರಂಭ'ಗಳ ಬಗ್ಗೆ ಒಬಾಮಾ ಕೈರೋದಲ್ಲಿ ಮಾತನಾಡಿದರೇ ?

ಎಲ್ಲಿವೆ 'ಹೊಸ ಆರಂಭಗಳು' ?

'ಅಮಾಯಕ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ಕೊಲ್ಲುವುದು ತಪ್ಪು' ಅಂತ ಘೋಷಿಸಿದರು. ಅಮೆರಿಕದ ಸೈನ್ಯ ಇರಾಕ್, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ಮಾಡಿರುವುದು ಅದನ್ನೇ ಅಂತ ಒಪ್ಪಿಕೊಳ್ಳಲಿಲ್ಲ.



ಈ ಮೂರು ದೇಶಗಳಲ್ಲಿ ಹತ್ತಾರು ಲಕ್ಷ ಅಮಾಯಕರನ್ನು ಕೊಂದ ಅಮೆರಿಕ ಹೂಡಿದ ಯುದ್ಧಗಳನ್ನು ಸಮರ್ಥಿಸಿಕೊಂಡರು. ಇರಾಕ್ ಯುದ್ಧದ ಬಗ್ಗೆ ಅಮೆರಿಕದಲ್ಲೂ ಭಿನ್ನಾಭಿಪ್ರಾಯ ಇದ್ದರೂ, ಇರಾಕಿ ಜನ ಸಹ 'ಸದ್ದಾಂ ಇಲ್ಲದೆ ಇನ್ನೂ ಉತ್ತಮ ಸ್ಥಿತಿಯಲ್ಲಿ ಇದ್ದಾರೆ' ಎಂದರು.

ಮುಸ್ಲಿಂ ಜಗತ್ತಿನಲ್ಲಿ ಅಮೆರಿಕದ ಬಗ್ಗೆ ಕೇಳಿ ಬರುವ 'ಅತ್ಯಂತ ಸ್ವಾರ್ಥಿ ಸಾಮ್ರಾಜ್ಯಶಾಹಿ' ಎಂಬ ನಿಂದನೆಯನ್ನು ಅವರು ಒಪ್ಪಲಿಲ್ಲ. ಆ ಪ್ರದೇಶದಲ್ಲಿ ಮಿಲಿಟರಿ ನೆಲೆ ಅಥವಾ ಪ್ರದೇಶ ಅಥವಾ ಪ್ರಾಕೃತಿಕ ಸಂಪತ್ತಿನ ಮೇಲೆ ಒಡೆತನ ಪಡೆಯಲು ಅಮೆರಿಕ ಹೆಣಗಾಡುತ್ತಿದೆ ಎಂಬ ಬಹುಜನರ ಅಭಿಪ್ರಾಯವನ್ನು ಸಹ ಅವರು ಒಪ್ಪಲಿಲ್ಲ. ಅಫ್ಘಾನಿಸ್ತಾನದ ಯುದ್ಧಕ್ಕೆ ವಿಶ್ವ ಟ್ರೇಡ್ ಸೆಂಟರ್ ಮೇಲೆ ಸೆಪ್ಟೆಂಬರ್ 11 ದಾ ಕಾರಣ ಎಂದರು. ಇದರಲ್ಲಿ ಅವ ಹಿಂದಿನ ಅಧ್ಯಕ್ಷ ಬುಶ್, ಕ್ಲಿಂಟನ್ ರೇಗನ್‌ರಿಂದ ಏನೂ ಭಿನ್ನವಾಗಿರಲಿಲ್ಲ.

ಇರಾಕ್‌ನಲ್ಲಿ ಯುದ್ಧವನ್ನು ತಕ್ಷ ಕೊನೆಗೊಳಿಸಿ ಸೈನ್ಯ ವಾಪಸು ಕರೆಸಿಕೊಳ್ಳುವ ಭರವಸೆಯಿಂದ ಅವರು ಜಗತ್ ಪ್ರಸಿದ್ಧ ರಾಗಿದ್ದು ಮತ್ತು ಗೆದ್ದಿದ್ದು ಕೂಡಾ. ಅದರಲ ಅವರು ಚೌಕಾಶಿ ಮಾಡುತ್ತಿರುವ ಇತ್ತು. ಇರಾಕ್‌ನಲ್ಲಿ ಸಕ್ರಿಯ ಕದನದಲ್ಲಿ ತೊಡಗಿರುವ ಮತ್ತು ಬೀಡು ಬಿಟ್ಟಿರುವ ಪಡೆಗಳ ನಡುವೆ ಭಾರೀ ವ್ಯತ್ಯಾಸ ಅವರಿಗೆ ಕಂಡಂತಿದೆ. 2010 ಅಗಸ್ಟ್ ವರೆಗೆ ಸಕ್ರಿಯ ಕದನದಲ್ಲಿ ತೊಡಗಿರುವ ಪಡೆಗಳು ಇರಾಕ್‌ನಲ್ಲಿ ಇರುತ್ತವಂತೆ. ಎಲ್ಲಾ ಅಮೆರಿಕನ್ ಪಡೆಗಳು ಇರಾಕ್ ಬಿಡುವ ಅವಧಿಯನ್ನು ಬುಶ್ ಸಹ ಒಪ್ಪಿಕೊಂಡದ್ದಕ್ಕೆ (ಡಿಸೆಂಬರ್ 2011 ಬದಲು) ಇನ್ನು ಮುಂದಕ್ಕೆ

ಪುಟ

ಯುರೋಪಿಯನ್ ಚುನಾವಣೆಗಳಲ್ಲಿ ಬಲ ಪಂಥೀಯರ ಮೇಲುಗೈ

ಇತ್ತೀಚೆಗೆ ನಡೆದ ಯುರೋಪಿನ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಆಶ್ಚರ್ಯಕರ ಪ್ರಮಾಣದಲ್ಲಿ ಬಲ ಪಂಥೀಯ ಶಕ್ತಿಗಳು' ಮೇಲುಗೈ' ಪಡೆದಿವೆ. ಇದು ಯುರೋಪಿನ ಹೆಚ್ಚಿನ ಪ್ರದೇಶ ಮತ್ತು ದೇಶಗಳಲ್ಲಿ ನಡೆದಿದೆ ಎಂಬುದು ಇನ್ನೂ ಆಶ್ಚರ್ಯಕರ. ಯುರೋಪಿನ ಎಡ ಎನ್ನಲಾಗುವ ಲೇಬರ್ - ಕಾರ್ಮಿಕ ಪಕ್ಷದ ಹೆಸರಿನ ಬಂಡವಾಳಶಾಹಿ ಶಕ್ತಿಗಳು (ಸರ್ಕಾರ ನಡೆಸುತ್ತಿರಲಿ, ವಿರೋಧ ಪಕ್ಷದಲ್ಲಿ ಇರಲಿ) ಭಾರೀ ಸೋಲು ಮತ್ತು ಮತಗಳಿಕೆಯಲ್ಲಿ ಕುಸಿತ ಕಂಡಿವೆ. ಬಲ ಪಂಥೀಯ, ಅರೆ-ಫ್ಯಾಸಿಸ್ಟ್, ವಲಸೆಗಾರ-ವಿರೋಧಿ, ಯುರೋಪಿಯನ್ ಒಕ್ಕೂಟ ವಿರೋಧಿ, ಜನಾಂಗ ದ್ವೇಷ ಬಿತ್ತುವ ಪಕ್ಷಗಳು ಮೇಲುಗೈ ಸಾಧಿಸಿವೆ. ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿ, ಸ್ಪೈನ್, ಪೋಲೆಂಡ್ - ಮುಂತಾದ ದೊಡ್ಡ ದೇಶಗಳಲ್ಲಿ ಪ್ರಬಲವಾಗಿದ್ದ ಎಡ ಮತ್ತು ಮಧ್ಯಮ ಪಂಥೀಯ ಪಕ್ಷದ ಶಕ್ತಿಗಳು ಇನ್ನಷ್ಟು ಬಲಗೊಳ್ಳಬಹುದು ಎಂದು ನಿರೀಕ್ಷಿಸಲಾಗಿತ್ತು. ಆರ್ಥಿಕ ಹಿಂಜರಿತ ಕುಸಿತಗಳಿಂದ ಕಂಗಾಲಾದ ಕಾರ್ಮಿಕ ಮತ್ತು ಮಧ್ಯಮವರ್ಗ ದೊಡ್ಡ ಪ್ರಮಾಣದಲ್ಲಿ ಆರ್ಥಿಕದಲ್ಲಿ ಸರ್ಕಾರದ ಮಧ್ಯಪ್ರವೇಶ ಮತ್ತು ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಹೋರಾಡುವ 'ಎಡ' ಮತ್ತು ಮಧ್ಯಮ ಪಂಥೀಯ ಪಕ್ಷಗಳಿಗೆ ಬೆಂಬಲ ಕೊಡುವುದು ಸ್ವಾಭಾವಿಕ ಎಂದು ಬಗೆಯಲಾಗಿತ್ತು. ಆದರೆ ಅದರ ತಿರುಗು ಮುರುಗು ಆಗಿದೆ.

ಬ್ರಿಟನ್‌ನಲ್ಲಿ ಲೇಬರ್ ಪಕ್ಷ, ಫ್ರಾನ್ಸ್, ಇಟಲಿ ಮತ್ತು ಜರ್ಮನಿಗಳಲ್ಲಿ ಸೋಶಲಿಸ್ಟ್ ಪಕ್ಷಗಳು ದೊಡ್ಡ ಪ್ರಮಾಣದಲ್ಲಿ ಸೀಟು, ಮತ ಪ್ರಮಾಣ ಕಳೆದು ಕೊಂಡಿವೆ. ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಮೂರನೇ ಸ್ಥಾನಕ್ಕೆ ಇಳಿದಿದೆ. ವಲಸೆಗಾರ-ವಿರೋಧಿ, ಜನಾಂಗ ದ್ವೇಷಿ ಸ್ವತಂತ್ರ ಪಕ್ಷ ಎರಡನೇ ಸ್ಥಾನ-ಗಳಿಸಿದೆ. ಬಲಪಂಥೀಯ ಪಕ್ಷಗಳು ಆಳುತ್ತಿದ್ದು ಆರ್ಥಿಕ ನಿರ್ವಹಣೆಯಲ್ಲಿ ಯಾವುದೇ ಜನಪರತೆ ತೋರದಿದ್ದರೂ, ತಮ್ಮ ಬೆಂಬಲ ಉಳಿಸಿಕೊಂಡಿವೆ. ಕಾರ್ಮಿಕರ ಉದ್ಯೋಗ ಉಳಿಸಿಕೊಳ್ಳಲು ಕಟುವಾದ ವಲಸೆಗಾರ-ವಿರೋಧಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದೇ ಪ್ರಮುಖ ಕ್ರಮ ಎಂದು ಕಾರ್ಮಿಕರನ್ನು ನಂಬಿಸುವಲ್ಲಿ ಯಶಸ್ವಿಯಾಗಿವೆ. 'ಎಡ' ಮತ್ತು ಮಧ್ಯಮ ಪಂಥೀಯ ಪಕ್ಷದ ಶಕ್ತಿಗಳು ಅಧಿಕಾರದಲ್ಲಿ ಇದ್ದಾಗ ಬೇರೆ ಪಕ್ಷಗಳಿಗಿಂತ ಬಾರೀ ಭಿನ್ನವಾದ ನೀತಿ ಅಂಗೀಕರಿಸಲಿಲ್ಲ. ಅದೂ ಕೂಡಾ ಜನತೆಯ ಭ್ರಮ ನಿರಸನಕ್ಕೆ ಕಾರಣವಾಗಿರಬಹುದು. 'ಎಡ' ಶಕ್ತಿಗಳು ಕಟುವಾದ ವಲಸೆಗಾರ-ವಿರೋಧಿಗಳನ್ನು ತೆಗೆದುಕೊಳ್ಳಲು ಹಿಂದೇಟು ಹೊಡೆಯುತ್ತವೆ ಎಂಬುದು ಸಹ ಕಾರಣವಾಗಿರಬಹುದು.

ಯುರೋಪಿಯನ್ ಚುನಾವಣೆಗಳಲ್ಲಿ 1979 ರ ನಂತರ ಇದೇ ಅತ್ಯಂತ ಕಡಿಮೆ (ಶೇ. 43) ಮತದಾನದ ವಿಕ್ರಮ ಗಳಿಸಿದೆ. ಯುರೋಪಿಯನ್ ಪಾರ್ಲಿಮೆಂಟು ಶಕ್ತಿ ಹೀನ ಸಂಸ್ಥೆ. ಅದರಿಂದ ಏನೂ ಆಗುವುದಿಲ್ಲ. ಎಂಬುದು ಚುನಾವಣೆಯಲ್ಲಿ 'ಎಡ' ಮತ್ತು ಮಧ್ಯಮ ಪಂಥೀಯ ಪಕ್ಷದ ಬೆಂಬಲಿಗರು ಮತದಾನವೇ ಮಾಡದ್ದು ಸಹ ಕಾರಣವಾಗಿರಬಹುದು. ಇದರಿಂದ ಹಲವು ದೇಶಗಳಲ್ಲಿ ವಲಸೆಗಾರ-ವಿರೋಧಿ, ಜನಾಂಗ ದ್ವೇಷ ಬಿತ್ತುವ ಪಕ್ಷಗಳು ಮೇಲುಗೈ ಸಾಧಿಸಿದವು. ಬಿಳಿಯರ ಪಕ್ಷ ಬ್ರಿಟಿಷ್ ನೇಶಬಲ್ ಪಾರ್ಟಿ ಮೊದಲ ಬಾರಿಗೆ ಯುರೋ ಪಾರ್ಲಿಮೆಂಟು ಪ್ರವೇಶಿಸುತ್ತಿದೆ. ಆಸ್ಟ್ರಿಯಾದಲ್ಲಿ ಇಂತಹುದೆ ಪಕ್ಷ ಶೇ. 18 ಮತ ಗಳಿಸಿದೆ. ನೆದರ್ ಲ್ಯಾಂಡ್ಸ್ ನಲ್ಲಿ ಇಸ್ಲಾಂ ವಿರೋಧೀ ಪಕ್ಷ 25 ರಲ್ಲಿ 6 ಸೀಟು, ಇಟಲಿಯಲ್ಲಿ 'ಲೇಗೋ ನೋರ್ದ', ರೋಮೇ ನಿಯಾ- ಪೋಲೆಂಡ್ ಗಳಲ್ಲಿ ವಲಸೆಗಾ ವಿರೋಧಿ ಪಕ್ಷಗಳು ಮೇಲುಗೈ ಸಾಧಿಸಿವೆ.



ಸಂಪನ್ಮೂಲ ಶಿಕ್ಷಕರ ಪ್ರತಿಭಟನೆ

ಪುನರ್‌ನೇಮಕಕ್ಕೆ ಒತ್ತಾಯಿಸಿ ಧರಣಿ ನಿರತ ಸಂಪನ್ಮೂಲ ಶಿಕ್ಷಕರ ಜೊತೆ ಶಿಕ್ಷಣ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಬೇಡಿಕೆಗಳ ಈಡೇರಿಕೆಯ ಕುರಿತು ಮಾತನಾಡತ್ತಿರುವುದು.

...ಬಾಮ ಭಾಷಣಗಳು ....

...ಟ 14 ರಿಂದ

...2 ಕ್ಕೆ ತಳ್ಳುವ ಸೂಚನೆ ಕೊಟ್ಟರು. ...ತಿದೂತನಂತೆ ಪೋಸು ಕೊಡುತ್ತಾ ...ನಿಸ್ತಾನದಲ್ಲಿ 17 ಸಾವಿರ ಪಡೆಗಳನ್ನು ಕಳಿಸಿ ...ದ್ಧದ ಗತಿ ತೀವ್ರಗೊಳಿಸಿದ್ದರ ಬಗ್ಗೆ ...ರವೆತ್ತಲಿಲ್ಲ. ...ಇಡೀ ಪ್ರದೇಶದ ಹಲವು ಸಮಸ್ಯೆಗಳ ಬಗ್ಗೆ ...ತನಾಡಿದರೂ, 'ಟಾಪ್ 1' ಸಮಸ್ಯೆ ...ಸಾತ್ಮಕ ಉಗ್ರವಾದ' (ಒಬಾಮಾ ...ಷೆಯಲ್ಲಿ ಬುಶ್ ಅವರ ಭಯೋತ್ಪಾದನೆಯ ...ರ್ಮಮೆ ಅಷ್ಟೇ). ಅದರ ವಿರುದ್ಧ ಅಮೆರಿಕ ...ತ್ತು ಮುಸ್ಲಿಮರು ಒಟ್ಟಿಗೆ ಹೋರಾಡಬೇಕಂತೆ. ...್-ಖೈದಾ ಮತ್ತು ತಾಲಿಬಾನ್ ಗಳನ್ನು ಹುಟ್ಟಿ ...ಿದ್ದು ಅಮೆರಿಕವೇ ಎಂಬುದನ್ನು ಮರೆತು. ...ೂ ಬುಶ್ ವಿರಚಿತ 'ಭಯೋತ್ಪಾದನೆಯ ...ದ ಯುದ್ಧ' ಕ್ಕಿಂತ ಬಹಳ ಬೇರೆಯಲ್ಲ. ...ಪ್ಯಾಲೆಸ್ತೈನ್ ದೇಶದ ಪರಿಕಲ್ಪನೆಗೆ ಬೆಂಬಲ ...ಡುತ್ತಾ ಅದೇ ಉಸಿರಲ್ಲಿ ಇಸ್ರೇಲ್ ಜತೆ ...ಪ್ರಬಲ ಸಂಬಂಧಗಳನ್ನು ಯಾರೂ ...ಲ್ಲಾಡಿಸುವಂತಿಲ್ಲ ಎಂದರು. ಜ್ಯೂ ತಾಯ್ನಾಡಿನ ...ಕಲ್ಪನೆಯ ಮೂಲ ಜ್ಯೂ ಜನತೆ ಅನುಭವಿಸಿದ ಚಾರಿತ್ರಿಕ ದುರಂತದಲ್ಲಿದೆ. ಆದರೆ ಇದ್ದ ತಾಯ್ನಾಡು ಕಳೆದುಕೊಂಡ ಪ್ಯಾಲೆಸ್ಟೈನ್ನರ ಚಾರಿತ್ರಿಕ ದುರಂತಕ್ಕೆ ಅದು ಯಾಕೆ ಕಾರಣವಾಗಬೇಕಿತ್ತು ಎಂದು ಹೇಳಲಿಲ್ಲ. ಗಾಜಾ ಪಟ್ಟಿಯಲ್ಲಿ ಇಸ್ರೇಲು ಪ್ಯಾಲೆಸ್ಟೈನ್ನರ ಮೇಲೆ ನಡೆಸಿದ ನರಮೇಧದ ಬಗ್ಗೆ ಜಾಣ ಮೌನ ಸಾಧಿಸಿದರು. ಎರಡು ದೇಶಗಳ ಪರಿಕಲ್ಪನೆಯ ಆಧಾರದ ಮೇಲೆ ಶಾಂತಿ ಸಾಧಿಸುವುದು ಹೇಗೆ? ಅದಕ್ಕೆ ಅಮೆರಿಕ ಏನು ಮಾಡುತ್ತದೆ ಎಂಬ ಬಗ್ಗೆ ನಿರ್ದಿಷ್ಟ ಪ್ರಸ್ತಾವಗಳಿರಲಿಲ್ಲ.

ಹೊಸ ಮುಖವಾಡ

ಹಾಗೆ ನೋಡಿದರೆ, ಯಾವುದರ ಬಗೆಗೂ ಅಮೆರಿಕದ ತಪ್ಪು ನೀತಿಗಳನ್ನು ಒಪ್ಪಿಕೊಳ್ಳುವ, ಸರಿಪಡಿಸುವ ನಿರ್ದಿಷ್ಟ ಕ್ರಮಗಳ ಭರವಸೆಯ 'ಹೊಸ ಆರಂಭ' ಕಾಣಲಿಲ್ಲ. ಆ ಪ್ರದೇಶದ ಸಮಸ್ಯೆಗಳಿಗೆ ಪರಿಹಾರ ಕೊಡುವ ಒಂದೇ ಒಂದು ನಿರ್ದಿಷ್ಟ ಪ್ರಸ್ತಾವ ಇರಲಿಲ್ಲ. ಅದು ಒಬಾಮಾ ಕೈರೋ ಭಾಷಣದ ಉದ್ದೇಶವೂ ಅಲ್ಲ. ಒಬಾಮಾ ಅಮೆರಿಕನ್ ಸಾಮ್ರಾಜ್ಯಶಾಹಿ ಅಥವಾ ಗುತ್ತೆದಾರಿ ಬಂಡವಾಳಶಾಹಿಯ ವಿರೋಧಿ ಅಲ್ಲ. ಅದರ ಹೊಸ ಮುಖವಾಡ ಅಷ್ಟೇ. ಅವರಿಗೆ ಚರಿತ್ರೆಯ ಪ್ರಜ್ಞೆ ಇದೆ. ಅವರ ಭಾಷೆ ಜನರನ್ನು ತಟ್ಟುತ್ತದೆ. ಆದ್ದರಿಂದ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳನ್ನು ಹೆಚ್ಚು ಮುತುವರ್ಜಿಯಿಂದ ಕಾಯಬಲ್ಲರು.

ಅಮೆರಿಕ ಜಗತ್ತಿನ ಜತೆ ವ್ಯವಹರಿಸುವ ರೀತಿಯಲ್ಲಿ ಯಾವ ಬದಲಾವಣೆ ಆಗುವುದಿಲ್ಲ ಅಂತ ಇದರ ಅರ್ಥ ಅಲ್ಲ. ಉದಾಹರಣೆಗೆ ಇರಾನ್‌ನಲ್ಲಿ ಸರ್ಕಾರ ಬದಲಾಯಿಸಲು ಹೋದರೆ ಇರಾಕ್‌ನಷ್ಟು ಸಫಲತೆ ಸಹ ಸಿಗಲಿಕ್ಕಿಲ್ಲ. ಅದಕ್ಕೆ ಅಮೆರಿಕದ ಜನರ ಬೆಂಬಲ ಸಿಕ್ಕಲ್ಲ ಎಂಬ ಸ್ಪಷ್ಟ ತಿಳುವಳಿಕೆಯಿಂದ ಇರಾನ್ ಬಗ್ಗೆ ನೀತಿ ಸಾಕಷ್ಟು ಬದಲಾಗಿದೆ. ಆದರೆ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಮಿಲಿಟರಿ ಮಧ್ಯ ಪ್ರವೇಶದನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಜಗತ್ತಿನ ಮೇಲೆ ಅಧಿಪತ್ಯ ಸ್ಥಾಪಿಸುವ ಕಾರ್ಯ ಯೋಜನೆಯಲ್ಲಿ ಬದಲಾವಣೆ ಆಗಿಲ್ಲ. ಕಾರ್ಯ ತಂತ್ರದಲ್ಲಿ ಬದಲಾವಣೆ ಆಗಿದೆ ಅಷ್ಟೇ.

ಒಬಾಮಾ ಭಾಷಣಗಳೇ ಜಗತ್ತನ್ನು ಬದಲಾಯಿಸುವಂತಿದ್ದರೆ.. ಕನಿಷ್ಟ... ಒಬಾಮಾ ಭಾಷಣದ 'ಲೇಖಕ'ನಿಗೆ ನಾವು ನಂಬಿರುವ ನಿಜವಾದ ಬದಲಾವಣೆಗಳ ಮತ್ತು ತುರ್ತಿನ ಅಗತ್ಯವಾಗಿರುವ 'ಹೊಸ ಆರಂಭ'ಗಳ ಸರಿಯಾದ ಪಟ್ಟಿಯಾದರೂ ಕೊಡಬಹುದಿತ್ತು. ○

...ಾಗತಿಹಳ್ಳಿಯವರ 'ದರಿದ್ರ ಲೆಕ್ಕಾಚಾರ'....

...ಟ 16 ರಿಂದ

...ತರ ಬೆಂಗಳೂರಿನಲ್ಲಿ ಆತನೂ ಕಾಲೇಜೊಂದರಲ್ಲಿ ...ಕ್ಚರರ್ ಆಗಿ ಸೇರುತ್ತಾನೆ. ಅಲ್ಲಿಯೂ ಗುರುಗಳು ...ಸಿಕೊಟ್ಟ ಚಾಳಿಯನ್ನೇ ಮುಂದುವರೆಸುತ್ತಾನೆ. ...ತಿಯ ಮಾತನಾಡುತ್ತಲೇ ವ್ಯಭಿಚಾರದ ಜೀವನ ...ಸುತ್ತಿರುತ್ತಾನೆ. ಕಾಲೇಜಿಗೆ ಹೊಸದಾಗಿ ಬಂದ ...ಿತ್ರ (ಡೈಸಿ ಬೋಪಣ್ಣ) ಎಂಬಾಕೆಯ ಹಿಂದೆ ...ಳುತ್ತಾನೆ. ಆದರೆ ಆಕೆ ಆತನಿಗೆ ವಾಸ್ತವತೆಯ ...ಿ... ಮೂಡಿಸಿ, ಅವನ ತಪ್ಪನ್ನು ...ನಗಾಣಿಸಿಕೊಡುತ್ತಾಳೆ. ಆ ವೇಳೆಗೇ ಅವನ ...ರುವಾಗಿದ್ದವನೂ ಜ್ಯೋತಿಷಿಯ ರೂಪ ಧರಿಸಿ ...ಂಡ್ಸ್' ಮಾಡುವಲ್ಲಿ ನಿರತನಾಗಿರುತ್ತಾನೆ. 'ನನ್ನ ಮಾತನ್ನು ಗಂಭೀರವಾಗಿ ತೆಗೆದುಕೊಂಡವನು ನೀನೊಬ್ಬನೇ' ಎಂದು ಹೇಳಿ ಅವನನ್ನೇ ಹಿಯಾಳಿಸುತ್ತಾನೆ. ಪಶ್ಚಾತಾಪ ಪಟ್ಟ ನಾಯಕ ರುಕ್ಮಿಣಿಗಾಗಿ ಮತ್ತೆ ಆ ಊರಿಗೆ ವಾಪಸ್ಸಾಗುತ್ತಾನೆ. ಆದರೆ ಆಕೆ ತನ್ನ ಜೀವನನ್ನೇನೂ ನಷ್ಟ ಮಾಡಿಕೊಂಡಿರುವುದಿಲ್ಲ. ಈತನ ಸ್ನೇಹಿತನ್ನೇ ಮದುವೆಯಾಗಿ ಸಂತೋಷದಿಂದಿರುವುದನ್ನು ನೋಡುತ್ತಾ ಮರೆಯಲ್ಲಿ ನಿಲ್ಲುತ್ತಾನೆ.

ವಂಚಕ ಗುರು - ಅವರ ಮಾತು ಕೇಳಿ ಕೆಟ್ಟ ಶಿಷ್ಯ, ಕಥೆ ಇಷ್ಟೇ ಆಗಿದ್ದರೆ ಯಾವ ತಕರಾರೂ ಇರುತ್ತಿರಲಿಲ್ಲ. ಗುರುವಿನ ಅನೈತಿಕತೆ, ವಂಚಕನತಕ್ಕೆ ವಿನಾಕಾರಣ ಮಾರ್ಕ್ಸ್‌ವಾದವನ್ನು ಹೊಣೆ ಮಾಡುವಂತಹ ನಿರೂಪಣೆ ಅಕ್ಷಮ್ಯ. ನಾಗತಿಹಳ್ಳಿಯವರು ಪ್ರಜ್ಞಾಪೂರ್ವಕವಾಗಿಯೇ ಹೀಗೆ ನಿರೂಪಿಸಿದ್ದಾರೆ. ರೈತರು, ಕೂಲಿಕಾರರು, ದುಡಿಮೆಗಾರರು ನಿಜವಾದ ಕ್ರಾಂತಿಕಾರಿಗಳೆಂದು ಮಧ್ಯೆ ಎಲ್ಲೋ ಒಮ್ಮೆ ಒಂದು ಮಾತು ಬರುತ್ತದೆ. ಆದರೆ ಅಂತಹ ದುಡಿಯುವ ಜನತೆಗೆ ಘನತೆಯ ಬದುಕಿನ ಹಕ್ಕನ್ನು ದೃಢಪಡಿಸುವ ಮಹಾ ಸಿದ್ಧಾಂತವನ್ನು, ಸಮಾಜ ಬದಲಾವಣೆಯ ವಿಜ್ಞಾನವನ್ನು ನೀಡಿದವರು ಕಾರ್ಲ್ ಮಾರ್ಕ್ಸ್ ಎಂಬುದನ್ನು ಮೇಷ್ಟ್ರು ಮರೆಮಾಚುತ್ತಾರೆ.

ನಾಗತಿಹಳ್ಳಿ ಚಂದ್ರಶೇಖರ್ ತಲುಪಿರುವ ನೈತಿಕ ಅಧಃಪತನಕ್ಕೆ ಅವರ ಬೌದ್ಧಿಕ ದಾರಿದ್ರ್ಯ - ದಿವಾಳಿಕೋರತನಕ್ಕೆ ಈ 'ಲೆಕ್ಕಾಚಾರ' ವೇ ಒಂದು ಸ್ಪಷ್ಟ ಸಾಕ್ಷಿ. ○

ಕವಿತೆ

ತಿಮ್ಮಪ್ಪನಿಗೆ ಹಾಕಿದ ಟೋಪಿ

ಅದೆಷ್ಟು ಅನ್ನದ ಡಬರಿಗಳ ತುಂಬುವ
ಹೊಲ-ಗದ್ದೆಗಳ ಹೊಟ್ಟೆಗಳ ಬಗೆದರೋ...
ಮುತ್ತು ರತ್ನ ವಿದೆಯೆಂದು
ಅವ್ವನ ಹೊಟ್ಟೆಯನ್ನೇ ದುರದುರನೆ ನೋಡಿ
ಗಬಕ್ಕನೆ ಹಿಡಿದು ಬಗೆದು
ಹಾಕಿದ ಟೋಪಿಯದು!
ಬರಿಯ ನಲವತ್ತೈದು ಕೋಟಿಯದೆ?

ನಿನ್ನ ನಾಮದ ಬಲದಿ ಸಾಗಿದರೆ
ಅವರ ಮೆರವಣಿಗೆ
ದುಡಿಯುವ ಜನರ ಬೆವರ ಮುತ್ತುಗಳ ಕಸಿದು
ಪೋಣಿಸಿ ನಿನಗೊಂದು ಟೋಪಿ
ಹಾಕುವುದಾದರೆ
ಹತ್ತಿ ಉರಿದೀತು ಇಲ್ಲಿ ಧರೆ!!?

'ಅಮ್ಮಾ ತಾಯೇ... ಅನ್ನ ನೀಡ್ರಮ್ಮ...'
ಖಾಲಿ ಬೋಗಣಿ ಡಬರಿಗಳ ಸದ್ದನ್ನೊಮ್ಮೆ ಆಲಿಸು
ಕಿವಿಯೊಳಗೆ ಅವರಿಟ್ಟ ಸೂರ್ಯಕಾಂತಿಯ
ಹೂವನ್ನೊಮ್ಮೆ ಅತ್ತ ಸರಿಸು
ಬೆವರು ಸುರಿದರೂ ಮಳೆ ಸುರಿಯದೆ
ಮರ ಗಿಡಗಳಲ್ಲಿ ನೇತಾಡುವವರೊಮ್ಮೆ
ಕಣ್ತೆರೆದು ನೋಡು ತಂದೆ

ಕೋಟಿ ಕೋಟಿಗಳ ಕೋಟೆಯಲಿ ಬಂಧಿ ನೀನು
ಸಾಲಿಯ ಚೀಲದಲ್ಲಿಟ್ಟ ತಂಗಳ ರೊಟ್ಟಿ
ಅವ್ವನ ಮಾಸಿದ ಉಡಿಯಲಿ
ಅಪ್ಪನ ಪಂಚೆಯತುದಿಯಲಿ
ಬೆವರಲಿ ತೊಯ್ದ ರೂಪಾಯಿ ಕಂಡೀತೆ ನಿನಗೆ!

ಮೊದಲು ಅವರು ಹಾಕಿದ ಟೋಪಿ ಸರಿಸಿಕೋ
ಕೊಟ್ಟ ವಜ್ರ-ಮುತ್ತು ರತ್ನಗಳ ಲೆಕ್ಕಬೇಡ
ಕೊಡುವ ಕಳ್ಳರ ಲೆಕ್ಕವಾದರೂ ಕೊಡು
ದೊರೆಯೇ
ಇಲ್ಲವಾದರೆ...
ಕೋಟಿ ಕೋಟಿಗಳ ಕೋಟೆಗಳಲಿ
ವಜ್ರ ಖಚಿತ ಕಿರೀಟದಲಿ
ಭಕುತರಿಲ್ಲದೆ
ಉಳಿವವನೊಬ್ಬನೇ ತಿಮ್ಮಪ್ಪ..!
ಆ ಮೇಲೆ ನಿನ್ನ ಗತಿ

ಗೋವಿಂದಾ... ಗೋ....ವಿಂ...ದಾ..
ಮೊದಲು ಅವರು ಹಾಕಿದ ನಾಮ ತೆಗೆ
ಆಮೇಲೆ ಟೋಪಿ.

ಸಾಕು ಮಾಡಿನ್ನು ಶ್ರೀನಿವಾಸ
ಕಳ್ಳಕಾಕರ ಸಹವಾಸ!!

● ಬಿ.ಶ್ರೀನಿವಾಸ



ನಾಗತಿಹಳ್ಳಿಯವರೇ 'ಕ್ರಾಂತಿ' ಎಂದರೆ ಲಂಪಟತನವೇ ?

ಇದುವರೆಗೆ ತಮ್ಮ ಚಿತ್ರಗಳ ಮೂಲಕ ಕನಿಷ್ಠ ಪ್ರಗತಿಪರತೆ, ವೈಚಾರಿಕತೆಯನ್ನು ಪ್ರತಿಪಾದಿಸುವುದರಲ್ಲಿಯೂ ವಿಫಲರಾಗಿದ್ದ ನಾಗತಿಹಳ್ಳಿ ಚಂದ್ರಶೇಖರ್ ಈ ಸಿನಿಮಾದ ಮೂಲಕ ತಮ್ಮ ವಿಕೃತ ಚಿಂತನೆಯನ್ನು ಹೊರ ಹಾಕಿದ್ದಾರೆ.

ನಾಗತಿಹಳ್ಳಿ ಚಂದ್ರಶೇಖರ್‌ರವರ ತಲೆಯಲ್ಲಿ ಇಂತಹ ಲದ್ದಿ ಇದೆ ಅಂತ ಗೊತ್ತಿರಲಿಲ್ಲ! ಮನುಕುಲದ ಮಹಾನ್ ಚಿಂತಕ ಎಂದು ಹೆಸರಾದ ಕಾರ್ಲ್‌ಮಾರ್ಕ್ಸ್‌ರವರನ್ನು, ಅವರ ಚಿಂತನೆಗಳನ್ನು ಅಪಹಾಸ್ಯ ಮಾಡುವ ಭರದಲ್ಲಿ, ಬಟಾಬಯಲಲ್ಲಿ ಬೆತ್ತಲೆ ನಿಂತು ತಮ್ಮ ಮಾನವನ್ನು ತಾವೇ ಹರಾಜು ಹಾಕಿಕೊಂಡಿದ್ದಾರೆ ನಮ್ಮ ಘನತವೆತ್ತ 'ಮೇಷ್ಟ್ರು'!


ಮೊದಲಿಗೆ ಇದೊಂದು ರೊಮ್ಯಾಂಟಿಕ್, ಹಾಸ್ಯಮಯ ಚಿತ್ರವೆಂಬಂತೆ ಬಿಂಬಿಸಿ ಪ್ರೇಕ್ಷಕರಿಗೆ ವಂಚಿಸುವುದಲ್ಲದೆ, ಬಂದ ಪ್ರೇಕ್ಷಕರಿಗೆ 'ಮಾರ್ಕ್ಸಿಸಂ', 'ಕ್ರಾಂತಿ'ಗಳ ಅರ್ಥವನ್ನು ವಿರೂಪಗೊಳಿಸಿ, ತಮ್ಮ ವಿಕೃತ ಬುದ್ಧಿಯ ಪ್ರದರ್ಶನದಿಂದ ಅಸಹ್ಯ ಹುಟ್ಟಿಸುತ್ತಾರೆ ಅವರು. ಮಾರ್ಕ್ಸ್-ಲೆನಿನ್‌ರ ಬಗೆಗೆ ಹೆಚ್ಚು ತಿಳಿಯದ ಬಹುಪಾಲು ಪ್ರೇಕ್ಷಕರು ನಾಗತಿಹಳ್ಳಿಯವರ 'ಜಾಣತನ' ಕಂಡು ಕಕ್ಕಾಬಿಕ್ಕಿಯಾಗುತ್ತಾರೆ!

ಬಹುಶಃ ತಾವು ಮೇಷ್ಟ್ರಾಗಿದ್ದಾಗ - ಯೌವನದಲ್ಲಿದ್ದಾಗಿನ ತಮ್ಮ ತೀರಿಸಿಕೊಳ್ಳಲಾಗದ ತೆವಲುಗಳಿಗೆ ಪಾತ್ರದ ರೂಪ ನೀಡಿದ್ದಾರೇನೋ ಅವರು! ಅವರ 'ಭೂಮಿ ಗುಂಡಗಿದೆ' ಕತೆಯ ಆಧಾರಿತ ಚಿತ್ರವೇ 'ಒಲವೇ ಜೀವನ ಲೆಕ್ಕಾಚಾರ'.

ಪರಮ ಲಂಪಟ ಲೆಕ್ಚರರ್(ರಂಗಾಯಣ ರಘು) ಒಬ್ಬ ತನ್ನೆಲ್ಲಾ ವ್ಯಭಿಚಾರಗಳಿಗೆ ಸಮರ್ಥನೆಯಾಗಿ 'ಮಾರ್ಕ್ಸಿಸಂ' ಅನ್ನು ಬಳಸಿಕೊಳ್ಳುತ್ತಾನೆ. 'ಕ್ರಾಂತಿ'ಯಾಗಬೇಕು ಎಂದು ಹೇಳುತ್ತಲೇ ಹುಡುಗರ ದಾರಿತಪ್ಪಿಸುತ್ತಾನೆ. ಹೆಣ್ಣೆಂದರೆ ಭೋಗಕ್ಕೆ ಮಾತ್ರ-ಸಂಸಾರಕ್ಕಲ್ಲ ಎನ್ನುತ್ತಾನೆ, ಯೌವನದಲ್ಲಿ ಸಿಕ್ಕಿದ್ದನ್ನೆಲ್ಲಾ ಹೀರಬೇಕು-ವೃದ್ಧಾಪ್ಯವನ್ನು ಅದರ ಪ್ರಾಯಶ್ಚಿತ್ತಕ್ಕಾಗಿ ಮೀಸಲಿಡಬೇಕು ಎನ್ನುತ್ತಾನೆ, ಶ್ರೀಮಂತರಿಂದ ಹಣ ದೋಚಬೇಕು ಎನ್ನುತ್ತಾನೆ(ಇದು ಕೂಡ ಮಾರ್ಕ್ಸ್‌ವಾದ ಅಲ್ಲ). ತನ್ನೆಲ್ಲಾ ಹಲ್ಕಟ್ ಕೆಲಸಕ್ಕೆ ಪ್ರಸಿದ್ಧ ಚಿಂತಕರ ಹೇಳಿಕೆಗಳನ್ನು ಸಮರ್ಥನೆಯಾಗಿ ಬಳಸುತ್ತಾನೆ - ಇದು ಅವನ ಕ್ರಾಂತಿ. ನಾಗತಿಹಳ್ಳಿಯವರ ತಿಳುವಳಿಕೆಯ 'ಕ್ರಾಂತಿ'ಯೂ ಇದೆ!



'ಮಾರ್ಕ್ಸ್‌ವಾದ', 'ಕ್ರಾಂತಿ' ಎಂದರೇನುಂಬುದನ್ನು ಅರ್ಥೈಸಿಕೊಳ್ಳದ (ಅಥವಾ ಅದು ಅವರಿಗೆ ಬೇಕಾಗಿಯೂ ಇಲ್ಲವೇನೋ?) ನಾಗತಿಹಳ್ಳಿ ಮಾರ್ಕ್ಸ್ ವಾದ ಪ್ರತಿಪಾದಿಸುವವರೆಲ್ಲಾ ಹೀಗೆ ಎಂದು ಬಿಂಬಿಸುವ ಮೂಲಕ ಜನಪರ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಂಡ ಸಹಸ್ರಾರು ಜನರ ಕಳಕಳಿ, ಪ್ರಾಮಾಣಿಕತೆಗೆ ಮಸಿ ಬಳಿಯಲು ಹೊರಟಿದ್ದಾರೆ. 'ಕ್ರಾಂತಿ'ಯ ಮಾತನಾಡುವವರೆಲ್ಲಾ ಲಂಪಟರು, ಪರಮ ನೀಚರು, ಇಂತಹ ಬುದ್ಧಿಜೀವಿಗಳು ಮಾತುಗಳನ್ನೇ ಬಂಡವಾಳ ಮಾಡಿಕೊಂಡು ಯುವ ಜನರ ಹಾದಿತಪ್ಪಿಸಿ, ಜೀವನಪ್ರೀತಿಯಿಂದ ವಿಮುಖರಾಗಿಸುತ್ತಾರೆ ಎಂಬುದು ಅವರ ಅಂಬೋಣ. ಕೆಲವು ಮಾಧ್ಯಮಗಳೂ ಕೂಡಾ ನಾಗತಿಹಳ್ಳಿ ಕಪಟ ಬುದ್ಧಿಜೀವಿಗಳ ಮುಖವಾಡವನ್ನು ಕಳಚಿಹಾಕಿದ್ದಾರೆಂದು ಹಾಡಿ ಹೊಗಳಿವೆ. ಯಾರ ಮುಖವಾಡ ಕಳಚಲು ಹೊರಟಿದ್ದಾರೆ ಇವರು? ಹಾಗೆ ಮಾಡಲು ಇವರ ಯೋಗ್ಯತೆಯಾದರೂ ಏನು?



ಏನು ಸಂದೇಶ!

ಸಿನಿಮಾ ಗೀಳು ಹತ್ತಿಸಿಕೊಂಡು ಅಮೆರಿಕಾ, ಪ್ಯಾರಿಸ್ ಅಂತ ಸುತ್ತುತ್ತಿದ್ದ ಇವರು ತಮ್ಮ ಸಿನಿಮಾಗಳಿಂದಾಗಲೀ, ಕಥೆ ಕಾದಂಬರಿಗಳಿಂದಾಗಲೀ ಯುವಜನರಿ[illegible] ನೀಡುವ ಸಂದೇಶವಾದರ[illegible] ಏನು? ಅವರಿಗೆ ಸ್ಟಾರ್[illegible] ನಿರ್ದೇಶಕನ ಪಟ್ಟ ತಂದುಕೊ[illegible] 'ಅಮೆರಿಕಾ ಅಮೆರಿಕಾ'ದ[illegible] ಸೂರ್ಯ - ಚಂದ್ರ - ಭೂಮಿ[illegible] ಎಂದೆಲ್ಲಾ ಆಕಾಶ ತೋ[illegible] ಮೂವರನ್ನು ಮೂರು ದಿ[illegible] ಮಾಡುತ್ತಾರೆ, ಇನ್ನು '[illegible] ಪ್ರೀತಿಯ ಹುಡುಗಿ'ಯ ಮೂ[illegible] ಕಥೆಯಾದ 'ಮಲೆನಾಡ ಹುಡು[illegible] ಬಯಲು ಸೀಮೆ ಹುಡುಗ'ದಲ್ಲಿ ಸಮಸ್ಯೆಗ[illegible] ಎದುರಿಸಲಾಗದ ಹೇಡಿಗಳನ್ನಾಗಿಸಿ ಸಮುದ್ರಕ್ಕೆ [illegible] ಸಾಯುವಂತೆ ಮಾಡುತ್ತಾರೆ, 'ಬಾ [illegible] ಮಧುಚಂದ್ರಕೆ'ಯಲ್ಲಿ ಕವಿ, ಭಾವಜೀವಿ ಎಂದ[illegible] ಬಿಂಬಿಸಲಾಗುವ ನಾಯಕ ತನ್ನ ಪ್ರೇಯ[illegible] ಬೇರೊಬ್ಬ ಪುರುಷನೊಂದಿಗೆ ದೈಹಿಕ ಸಂಬಂಧ[illegible] ಎಂದು ಗೊತ್ತಾದಮೇಲೆ ಆಕೆಯನ್ನು ಮದುವೆಯಾ[illegible] ಪ್ರೀತಿಯ ನಾಟಕವಾಡುತ್ತಾ ಮಧುಚಂದ್ರಕ್ಕೆಂದು[illegible] ಕರೆದೊಯ್ದು ಪರ್ವತ ಶ್ರೇಣಿ ಮೇಲಿಂದ ಪ್ರಪಾತ[illegible] ನೂಕಿ ಕೊಲ್ಲುತ್ತಾನೆ- ಎಂತಹ ವಿಕೃತ ಸೇಡು! [illegible] ಇತ್ತೀಚಿನ 'ಅಮೃತಧಾರೆ'ಯಲ್ಲಿ ಯಾವು[illegible] ಗುಣಪಡಿಸಲಾಗದ ಖಾಯಿಲೆಯ ಹೆಸರೇ[illegible] ನಾಯಕಿಯನ್ನೇ ಮುಗಿಸಿಬಿಡುತ್ತಾರೆ! [illegible] ನಾಗತಿಹಳ್ಳಿ ಯುವಜನರಿಗೆ ನೀಡುವ 'ಜೀ[illegible] ಪ್ರೀತಿ'ಯ ಸಂದೇಶ!

ಲೆಕ್ಕಾಚಾರದ ಹೂರಣ

ಇನ್ನು ಈ 'ಲೆಕ್ಕಾಚಾರ'ದ ಕಥೆಗೆ ಬರೋಣ[illegible] ಬಾಲಚಂದ್ರ(ಶ್ರೀನಗರ ಕಿಟ್ಟಿ) ಎಂಬ ಬಡ ಯುವ[illegible] ವಿದ್ಯಾಭ್ಯಾಸಕ್ಕಾಗಿ ಹಳ್ಳಿಯಿಂದ ವಿದ್ಯಾಭ್ಯಾಸಕ್ಕ[illegible] ಹಳ್ಳಿಕೋಟೆ ಎಂಬ ಪಟ್ಟಣಕ್ಕೆ ಬರುತ್ತಾನೆ. ಅ[illegible] ಅವನಿಗೆ ರುಕ್ಮಿಣಿ (ರಾಧಿಕಾ ಪಂಡಿತ್) ಎಂಬಾಕೆಯ[illegible] ಪರಿಚಯವಾಗುತ್ತದೆ. ಪರಿಚಯ ಪ್ರೀತಿ[illegible] ತಿರುಗುತ್ತದೆ. ಆದರೆ ಆತನ ಗುರು(ರಂಗಾಯಣ[illegible] ರಘು)ಗಳ ಬೋಧನೆಯಿಂದ ಪ್ರೇರಿತನಾಗಿ ಆಕೆ[illegible] ಮೋಸವೆಸಗುತ್ತಾನೆ. ಆಕೆ ಬಳಿಯಿದ್ದ ಹಣವನ್ನೆಲ್ಲಾ[illegible] ದೋಚಿ ಅವಳಿಗೆ ಕೈ ಕೊಟ್ಟು ಓಡಿಹೋಗುತ್ತಾನೆ!

ಪುಟ 16 ಕ[illegible]

ಲೆಕ್ಕಾಚಾರ - ಯಾಕೆ - ಏನು?

ಜಾಗತೀಕರಣ, ಅದರ ಅಪಾಯದ ಕುರಿತು ಉದ್ದುದ್ದ ಭಾಷಣವನ್ನು 'ಮಾತಾಡ್ ಮಾತಾಡ್ ಮಲ್ಲಿಗೆ'ಯಲ್ಲಿ ಬಿಗಿದು, ಕೊನೆಗೆ ಇದಕ್ಕೆ ಪರಿಹಾರ ಗಾಂಧಿವಾದ ಎಂದು ನಿರೂಪಿಸಿದರು. ಆದರೆ ಚಿತ್ರ ಮಕಾಡೆ ಮಲಗಿತು. ನಿರ್ಮಾಪಕ ಕೆ.ಮಂಜು ಭಾರಿ ನಷ್ಟ ಅನುಭವಿಸಿದರು. ಅದಕ್ಕೆ ಪರಿಹಾರವಾಗಿ ತಮಗೆ ಸಂಭಾವನೆ ತೆಗೆದುಕೊಳ್ಳದೇ ಕಡಿಮೆ ಬಜೆಟ್‌ನಲ್ಲಿ ಒಂದು ಸಿನಿಮಾ ಮಾಡಿಕೊಡುವುದಾಗಿ ಮಾತಾಗಿತ್ತಂತೆ. ಆ ಪ್ರಾಜೆಕ್ಟೇ ಈ 'ಒಲವೇ ಜೀವನ ಲೆಕ್ಕಾಚಾರ'

ಎಲ್ಲಿ ಹೇಳಿದೆ ಹೀಗೆ?

'ಮಾರ್ಕ್ಸ್‌ವಾದ' ಶೋಷಿತ ದುಡಿಯುವ ವರ್ಗವನ್ನು ಶೋಷಕ ವ್ಯವಸ್ಥೆಯಿಂದ ವಿಮೋಚನೆಗೊಳಿಸುವ ಒಂದು ಮಹಾ ಸಿದ್ಧಾಂತ. ಮನುಷ್ಯ ಜೀವನದ ಸಮಸ್ತ ಮುಖಗಳು, ಆಯಾಮಗಳ ಬಗೆಗೆ ನ್ಯಾಯ, ಸಮಾನತೆ, ಸ್ವಾತಂತ್ರ್ಯಗಳಂತಹ ತತ್ವಗಳ ಆಧಾರದ ಮೇಲೆ ಚಾರಿತ್ರಿಕ ಸತ್ಯಗಳ ಬುನಾದಿಯ ಮೇಲೆ ಎಂಗೆಲ್ಸ್-ಮಾರ್ಕ್ಸ್ ತಮ್ಮ ಈ ಸಿದ್ಧಾಂತವನ್ನು ನಿರೂಪಿಸಿದ್ದಾರೆ.

ಸಮಾಜ- ನಾಗರಿಕತೆಯ ಬೆಳವಣಿಗೆಯಲ್ಲಿ ಮಹಿಳೆಯರ ಮಹತ್ವದ ಪಾತ್ರವನ್ನು ಗುರುತಿಸಿ, ವರ್ಗ ವ್ಯವಸ್ಥೆಯಲ್ಲಿ ಪುರುಷನೇ ಹೆಚ್ಚೆನ್ನುವ ಪುರುಷ ಪ್ರಧಾನ ಮೌಲ್ಯಗಳನ್ನು ವಿಶ್ಲೇಷಿಸಿದವರು ಇವರು. ಮಾರ್ಕ್ಸ್‌ವಾದದಲ್ಲಿ ಸ್ತ್ರೀಯರಿಗೆ ಪುರುಷರಿಗೆ ಸರಿಸಮಾನವಾದ ಹಕ್ಕು, ಸ್ವಾತಂತ್ರ್ಯ, ಗೌರವಗಳನ್ನು ಪ್ರತಿಪಾದಿಸಲಾಗಿದೆಯೇ ಹೊರತು, ಸ್ತ್ರೀಯನ್ನು ವಂಚಿಸು, ಅವರನ್ನು ದೋಚು ಎಂದು ಹೇಳಲಾಗಿದೆಯೇ? ಅಥವಾ ಅದಕ್ಕೆ ಪ್ರೇರಣೆ ನೀಡುವಂತಹದ್ದನ್ನು ಹೇಳಲಾಗಿದೆಯೇ? ಎಲ್ಲಿದೆ ಅಂತಹ ವಿಚಾರಗಳು.

ನಮ್ಮ ಮಹಾನ್ ಬುದ್ಧಿಜೀವಿ 'ನಾಗತಿ ಮೇಷ್ಟ್ರು' ಏನಾದರೂ ಆಕಸ್ಮಾತ್ ಮಾರ್ಕ್ಸ್‌ವಾದವನ್ನು ಓದೋದಕ್ಕೆ ಅಂತ ಪ್ರಯತ್ನ ಪಟ್ಟು ಅದು ಅವರಿಗೆ ಈ ರೀತಿಯಾಗಿ ಅರ್ಥವಾಗಿದ್ದರೆ.... ನಮ್ಮ ಕನ್ನಡ ಸಿನಿಮಾಗಳ ಪ್ರೇಕ್ಷಕರನ್ನು ಹಾಗೂ ಕನ್ನಡ ನಾಡಿನ (ನಾಗತಿ) ಸಾಹಿತ್ಯ ಓದುವ ಸಾಹಿತ್ಯಾಭಿಮಾನಿಗಳ ಪರಿಸ್ಥಿತಿ ನೆನಪಿಸಿಕೊಂಡು ಗಾಬರಿಯಾಗುತ್ತಿದೆ. ○

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH